ರಂಜನೆ ಬೋಧನೆ ಪ್ರಚೋದನೆ

# ಲಂಕೇಶ್

ಜೂನ್ 8, 2011 ಪುಟ 20 ರೂ. 14/-

ಮೂಟೆ ಕಾರ್ಮಿಕರ ಬದುಕು ಬವಣೆ





## ಪ್ರೇಯಸಿಗೆ ಕಿಸ್ ಪತ್ನಿಗೆ ಕಿಕ್!

## ಜಮಖಂಡಿ: ಬೆತ್ತಲೆ ಸಿಡಿಯಲ್ಲಿ ಸವದಿ ಶಿಷ್ಯ





## ನಿತ್ಯಾನಂದನ ಬಗಲಲ್ಲಿ ಮುತಾಲಿಕ್



## ಬೆಂಗಳೂರು ಲಾಡ್ಜ್‌ನಲ್ಲಿ ಕನ್ನಿಕೆ ವಾರಕ್ಕೆ 1.80 ಲಕ್ಷ ಗಳಿಕೆ

## ನೋ ಕಾಮೆಂಟ್ಸ್

"ಸರ್ವೋಚ್ಚ ನ್ಯಾಯಾಲಯ ಇಡೀ ದೇಶದ ಎಲ್ಲಾ ನ್ಯಾಯಾಲಯಗಳಿಗಿಂತ ದೊಡ್ಡದು. ಸರ್ವೋಚ್ಚ ನ್ಯಾಯಾಲಯ ಕರ್ನಾಟಕದ ಉಚ್ಚ ನ್ಯಾಯಾಲಯದ ತೀರ್ಪನ್ನು ರದ್ದುಪಡಿಸಿದ ಮೇಲೆ ಆ ತೀರ್ಪನ್ನು ಅವಲಂಬಿಸಿ ತನ್ನಿಂದ ತಪ್ಪಾಗಿಲ್ಲ ಎಂದು ಹೇಳುತ್ತಿರುವ ವಿಧಾನಸಭಾ ಸ್ಪೀಕರ್ ಅವರ ಹೇಳಿಕೆ ಪರೋಕ್ಷವಾಗಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಧಿಕ್ಕರಿಸಿ ನ್ಯಾಯಾಲಯದ ನಿಂದನೆ ಮಾಡಿದಂತೆ. ಕೆಳಗಿನ ಕೋರ್ಟ್ ತೀರ್ಪನ್ನು ಮೇಲಿನ ಕೋರ್ಟ್ ರದ್ದುಪಡಿಸಿದ ನಂತರವೂ ಕೆಳಗಿನ ಕೋರ್ಟಿನ ತೀರ್ಪೇ ಸಿಂಧು ಎಂದು ಹೇಳುವುದು ಕಾನೂನು ಗೊತ್ತಿಲ್ಲದವರು ಆಡುವ ಮಾತು. ಸ್ಪೀಕರ್ ಬೋಪಯ್ಯನವರ ಅಂದಿನ ನಡೆಯನ್ನು ಖಂಡಿಸುವಾಗ ಸರ್ವೋಚ್ಚ ನ್ಯಾಯಾಲಯ ಅವರು ತಮ್ಮ ರಾಜಕೀಯ ಪಕ್ಷದ ನಿಷ್ಠೆ ತೋರಿದ್ದಾರೆಂದು ಹೇಳಿದೆ. ಇಂತಹ ಖಂಡನೆಯನ್ನು ಗಳಿಸಿಕೊಂಡ ಮೇಲೆ ಮರ್ಯಾದೆ ಮತ್ತು ಆತ್ಮಾಭಿಮಾನ ಇದ್ದವರು ಯಾರೇ ಆಗಲಿ ಸಭಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ತಲೆತಗ್ಗಿಸಿ ಹೊರಹೋಗಬೇಕಾಗಿತ್ತು."

*- ಕೋ. ಚನ್ನಬಸಪ್ಪ*

## ನಂಬಿದ್ರೆನಂಬಿ ಬಿಟ್ರೆಬಿಡಿ

"ಹಿಂದೂ ಧರ್ಮ ಉದಾತ್ತವಾದ ಧರ್ಮ. ಆದರೆ ಅದನ್ನು ಅಪಾರ್ಥ ಮಾಡಿಕೊಳ್ಳಬಾರದು. ವೇದಗಳಲ್ಲಿ ಇಲ್ಲದ ಅಸ್ಪೃಶ್ಯತೆ, ಜಾತಿ ಭೇದಗಳಂತಹ ಅನೇಕ ಕಳಂಕಗಳು ಹುಟ್ಟಿಕೊಂಡಿವೆ. ಅದನ್ನು ತೊಡೆದುಹಾಕಬೇಕಿದೆ. ನಾನೂ ಸಹ ಅಸ್ಪೃಶ್ಯತೆ ವಿರುದ್ಧ ಹೋರಾಡಿದ್ದೇನೆ."

*- ಚಿದಾನಂದಮೂರ್ತಿ*

"ಕಾರ್ಯಕರ್ತರು ಇರುವುದು ಬೂಟು ಏಟು ತಿನ್ನುವುದಕ್ಕಲ್ಲ, ಕಾರ್ಯಕರ್ತರು ದೇವರಿದ್ದ ಹಾಗೆ. ಅವರಿಲ್ಲ ಎಂದರೆ ನೀವು ಗೆಲ್ಲಲು ಸಾಧ್ಯವಿತ್ತೇ ಯೋಚಿಸಿ. ವೋಟು ಹಾಕಿ ನಿಮ್ಮನ್ನು ಗೆಲ್ಲಿಸಿದ ಕಾರ್ಯಕರ್ತರನ್ನು ಶಾಸಕ ಸಂಪಂಗಿ ಬೂಟಲ್ಲಿ ಹೊಡೆಯುತ್ತೇನೆ ಎಂದದ್ದು ಬಿಜೆಪಿ ಸಂಸ್ಕೃತಿ ಅಲ್ಲ."

*- ಕೋಲಾರದ ಬಿಜೆಪಿ ಸಭೆಯಲ್ಲಿ ಜಿಲ್ಲಾಧ್ಯಕ್ಷ ಲಕ್ಷ್ಮಯ್ಯ*

"ರಿಲೈಯನ್ಸ್ ಸಮೂಹದ ಅಧ್ಯಕ್ಷ ಮುಖೇಶ್ ಅಂಬಾನಿ ಅವರು ಮುಂಬೈನಲ್ಲಿ 5000 ಕೋಟಿ ಮೌಲ್ಯದ ಮಹಲಿನಲ್ಲಿ ವಾಸ ಮಾಡುತ್ತಾರೆ. ಕೆಲವರ ಇಂತಹ ನಿರ್ಧಾರ ನೋಡಿ ನನಗೆ ಆಶ್ಚರ್ಯ ಆಗುತ್ತದೆ. ಸಮಾಜದಲ್ಲಿ ಕ್ರಾಂತಿಯ ಬೀಜಗಳನ್ನು ಬಿತ್ತುವುದು ಇಂಥ ಸಂಗತಿಗಳೇ. ಅಂಥಾ ಭವ್ಯ ಮಹಲಿನಲ್ಲಿರುವವರು ತಮ್ಮ ಸುತ್ತಮುತ್ತಲಿನ ವಾಸ್ತವಗಳ ಬಗ್ಗೆಯೂ ಕಾಳಜಿ ಹೊಂದಿರಬೇಕು. ತಮ್ಮಲ್ಲಿರುವ ಅಪಾರ ಶ್ರೀಮಂತಿಕೆಯ ಸ್ವಲ್ಪ ಭಾಗವನ್ನಾದರೂ ಜನತೆಯ ಸಂಕಷ್ಟವನ್ನು ತಗ್ಗಿಸಲು ವಿನಿಯೋಗಿಸುವವರು ಈಗ ಭಾರತ ರಾಷ್ಟ್ರಕ್ಕೆ ಅಗತ್ಯ."

*- ರತನ್ ಟಾಟಾ*

## ಬಿದ್ದರೂ ಮೀಸೆ ಮಣ್ಣಾಗದವರು!

"ಬಿಜೆಪಿಯವರು ಸರ್ಕಾರಕ್ಕೆ ಬಹುಮತ ಇದೆ ಎಂದು ಬೊಬ್ಬೆ ಹೊಡೆಯುವುದನ್ನು ಮೊದಲು ನಿಲ್ಲಿಸಬೇಕು. ಸರ್ಕಾರವನ್ನು ವಜಾಗೊಳಿಸಲು ಕೇವಲ ಬಹುಮತವೊಂದೇ ಆಧಾರವಲ್ಲ, ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಾಗಲೂ ಸರ್ಕಾರವನ್ನು ವಜಾಗೊಳಿಸಬಹುದು."

*- ಕೃಷ್ಣ ಭೈರೇಗೌಡ*

## ಇದು ಒಂಥರಾ ಸಾಂಕೇತಿಕವಾಗಿದೆ!

"ಉಡುಪಿಯ ಪುತ್ತಿಗೆ ಮಠವು ಅಮೆರಿಕ ಮತ್ತು ಕೆನಡಾ ಮಧ್ಯ ಇರುವ ನಯಾಗರ ಜಲಪಾತದ ಸಮೀಪ ನೂತನ ಸಂಸ್ಕೃತ ವಿದ್ಯಾಪೀಠವನ್ನು ಆರಂಭಿಸುತ್ತಿದೆ."

*- ಪತ್ರಿಕಾ ವರದಿ*

## ನಮ್ಮ ನಡುವೆ ಈಗಲೂ ಇವರಿದ್ದಾರೆ!

"ಮೊದಲಿಂದಲೂ ಜನಪರ ಹೋರಾಟಗಳಲ್ಲಿ ತೊಡಗಿಸಿಕೊಂಡಿರುವುದರಿಂದ ಪ್ರಶಸ್ತಿಗಳ ಬಗ್ಗೆ ನನಗೆ ಅಂಥಾ ಒಲವಿಲ್ಲ, ಸರ್ಕಾರದ ಪ್ರಶಸ್ತಿಗಳಾದ ರಾಜ್ಯೋತ್ಸವ ಮತ್ತು ಅತ್ತಿಮಬ್ಬೆ ಪ್ರಶಸ್ತಿಗಳನ್ನು ಕಠಿಣವಾಗಿಯೇ ನಿರಾಕರಿಸಿದ್ದೇನೆ."

*- ವಿಜಯಮ್ಮ*

## ಈ ಗುಲಾಮೀತನಕ್ಕೆ ಕೊನೆಯೇ ಇಲ್ಲವೇ ಕಾಂಗ್ರೆಸ್ಸಿಗರೇ!


"2014ರಲ್ಲಿ ಸ್ವಸಾಮರ್ಥ್ಯದಿಂದ ಅಧಿಕಾರಕ್ಕೆ ಬರಲು ಪಕ್ಷಕ್ಕೆ ನೆರವು ನೀಡುವ ಸಲುವಾಗಿ ಪ್ರಿಯಾಂಕ ವಾದ್ರಾ ಅವರು ಸಕ್ರಿಯ ರಾಜಕಾರಣದಲ್ಲಿ ತೊಡಗಿಕೊಳ್ಳಲು ಇದು ಸಕಾಲ. ಸೋನಿಯಾ, ರಾಹುಲ್ ಮತ್ತು ಪ್ರಿಯಾಂಕಾ ಅವರು ರಾಷ್ಟ್ರಾದ್ಯಂತ ಪ್ರವಾಸ ಕೈಗೊಂಡರೆ ಕಾಂಗ್ರೆಸ್‌ನ ಪುನಶ್ಚೇತನ ಸಾಧ್ಯ ಎಂದು ಖಚಿತವಾಗಿ ಹೇಳುತ್ತೇನೆ. ಇದಕ್ಕೆ ಬೇರಾವ ಸುಲಭ ಮಾರ್ಗವೂ ಇಲ್ಲ."

*- ವಸಂತ್ ಸಾಠೆ, ಕಾಂಗ್ರೆಸ್‌ನ ಹಿರಿಯ ನಾಯಕ*

# ಜಾತಿ ಸಮಾಜದಲ್ಲಿ 'ಹೆಸರು' ಸೃಷ್ಟಿಸುವ ತಲ್ಲಣಗಳು

"ಹಸಿವಿಲ್ಲದ ಬೊಂಬೆಗೆ ತೃಷೆಯಿಲ್ಲದ ನೀರೆರೆದು
ಮಸಕವಿಲ್ಲದ ಮಾತ ಮನದಲಿ ಹೇಳಿ
ಹೆಸರಿಲ್ಲದೆ ಕರೆದೊಡೆ ಓ ಎಂಬವ
ನಾನೋ ನೀನೋ ರಾಮನಾಥ"

ಜೇಡರ ದಾಸಿಮಯ್ಯನ ಈ ನುಡಿ ಒಬ್ಬ ವ್ಯಕ್ತಿಯನ್ನು ಗುರುತಿಸಲು, ಬೇರೆ ವ್ಯಕ್ತಿಯಿಂದ ವ್ಯಕ್ತಿಯನ್ನು ಬೇರ್ಪಡಿಸಲು ವ್ಯಕ್ತಿಗೊಂದು ಹೆಸರು ಬೇಕೇಬೇಕೆನ್ನುತ್ತದೆ. ಕಾಡಿನಲ್ಲಿ ಅಲೆಮಾರಿಯಾಗಿ ಬದುಕುತ್ತಿದ್ದ ಮಾನವನಿಗೆ ಆತನ ಪರಿವಾರ ಚಿಕ್ಕದಾಗಿದ್ದು, ಬೇರೆಯವರ ಸಂಪರ್ಕ ಕೂಡ ಕಡಿಮೆಯಾಗಿದ್ದ ಆ ದಿನಗಳಲ್ಲಿ ಹೆಸರಿಟ್ಟು ಕರೆಯಬೇಕೆಂಬ ಸಮಸ್ಯೆ ಇರಲಿಲ್ಲ. ಆತ ಒಂದೆಡೆ ನೆಲೆನಿಂತು ಕುಟುಂಬ, ಗ್ರಾಮರಚನೆ ಅಸ್ತಿತ್ವ ಪಡೆದು, ಬೇರೆ ಬೇರೆಯವರ ಸಂಪರ್ಕವೇರ್ಪಟ್ಟ ದಿನಗಳಿಂದಲೇ ಹೆಸರಿಡುವ ಪರಿ ಬೆಳೆದುಬಂದಿರಬೇಕು. ಅದು ಅನಿವಾರ್ಯ ಕೂಡ. ಈಗ ನಾಮಕರಣವೆಂಬ ಹೆಸರಿನಲ್ಲಿ ಅದ್ದೂರಿಯಾದ ಸಮಾರಂಭಗಳು ನಡೆಯುತ್ತಿವೆ. ಅದಕ್ಕಾಗಿಯೇ ಮಾರುಕಟ್ಟೆಯಲ್ಲೀಗ ಹೆಸರುಗಳನ್ನೊಳಗೊಂಡು ನೂರಾರು ಪುಸ್ತಕಗಳು ಮಾರಾಟವಾಗುತ್ತಿವೆ.



ಆದರೆ ಜಾತಿ ಸಮಾಜದಲ್ಲಿ ಹೆಸರಿಟ್ಟುಕೊಳ್ಳುವ ಸ್ವಾತಂತ್ರ್ಯ ಜನರದ್ದಾಗಿರಲಿಲ್ಲ, ಅದನ್ನು ನಿರ್ಧರಿಸುವುದು ಪುರೋಹಿತಶಾಹಿ. ಮಗು ಹುಟ್ಟಿದ ನಂತರ ಪಂಚಾಂಗ ನೋಡಿ ಪುರೋಹಿತ ಹೆಸರು ಸೂಚಿಸುತ್ತಿದ್ದ. ಆ ಹೆಸರುಗಳು ಇಲ್ಲಿನ ಶ್ರೇಣೀಕೃತ ಸಮಾಜಕ್ಕನುಗುಣವಾಗಿರುತ್ತಿದ್ದವು. ಬ್ರಾಹ್ಮಣರ ಹೆಸರು 'ಜ್ಞಾನ'ವನ್ನು ಸೂಚಿಸುವಂತೆ, ಕ್ಷತ್ರಿಯರ ಹೆಸರು 'ಶೌರ್ಯ'ವನ್ನು ಸೂಚಿಸುವಂತೆ, ವೈಶ್ಯರ ಹೆಸರು 'ಸಂಪತ್ತು' ಸೂಚಿಸುವಂತೆ, ಶೂದ್ರರ ಹೆಸರು 'ಸೇವೆ' ಸೂಚಿಸುವಂತೆಯೂ ಪುರೋಹಿತ ನೋಡಿಕೊಳ್ಳುತ್ತಿದ್ದ. ಪ್ರಾಚೀನ ಕಾಲದ ಭರತನ 'ನಾಟ್ಯಶಾಸ್ತ್ರ' ಯಾವ್ಯಾವ ವೃತ್ತಿಯ-ಜಾತಿಯ ಪಾತ್ರಗಳ ಹೆಸರೇನಿರಬೇಕೆಂದು ವಿವರಿಸುತ್ತದೆ. ಅದನ್ನು ಖ್ಯಾತ ಸಾಹಿತಿಗಳೆನಿಸಿಕೊಂಡವರು ತಮ್ಮ ಕಥೆ, ಕಾದಂಬರಿ, ನಾಟಕಗಳಲ್ಲಿ ಬರುವ ಪಾತ್ರಗಳಿಗೆ ಹೆಸರಿಡುವ ಮೂಲಕ ಇಂದಿಗೂ ಪಾಲಿಸಿಕೊಂಡು ಬರುತ್ತಿದ್ದಾರೆ. ಇದನ್ನು ಸಿನಿಮಾಗಳು, ಟಿವಿ ಧಾರಾವಾಹಿಗಳಲ್ಲಿಯೂ ಕಾಣಬಹುದು. ಹೀಗೆ ನಮ್ಮ ಅರಿವಿಗೆ ಬಾರದಂತೆ ಹೆಸರುಗಳಿಂದಲೇ ಸಾಮಾಜಿಕ ತಾರತಮ್ಯ ಮುಂದುವರಿಯುತ್ತಿದೆ.

ಇನ್ನು ವೈದಿಕ ಸಮಾಜದ ವರ್ಣಾಶ್ರಮಕ್ಕೆ ಒಳಪಡದ ಅಸ್ಪೃಶ್ಯ ಜಾತಿಗಳ ದಲಿತರ ಹೆಸರುಗಳದ್ದು ಇನ್ನೊಂದು ಬಗೆ. ಇವರಿಗೆ ಇಂತಹದ್ದೇ ಹೆಸರೆಂಬುದಿಲ್ಲ. ಆದರೂ ಶೂದ್ರರ ಹೆಸರಿನೊಂದಿಗೆ ಇವರ ಹೆಸರುಗಳು ತಳುಕು ಹಾಕಿಕೊಂಡಿವೆ. ಭೈರೇಗೌಡ-ಭೈರಯ್ಯನಾಗಿ, ಸುಬ್ಬೇಗೌಡ-ಸುಬ್ಬಯ್ಯನಾಗಿ, ಸಿದ್ದೇಗೌಡ-ಸಿದ್ದಯ್ಯನಾಗಿ... ಹೀಗೆ ಮುಂದುವರಿಯುತ್ತವೆ. ಹೆಸರಿಡುವ ಈ ಜನವಿರೋಧಿ ಸಾಂಸ್ಕೃತಿಕ ರಾಜಕಾರಣವು ಹೆಸರನ್ನು ಕೂಗಿ ಕರೆಯುವವರೆಗೂ ಮುಂದುವರಿಯುತ್ತವೆ. ಮೇಲ್ಜಾತಿಯವರು ದಲಿತರ ಹೆಸರನ್ನು ಕರೆಯುವ ಧಾಟಿಯನ್ನು ಗಮನಿಸಬೇಕು. ದೇವನೂರು ಮಹಾದೇವರ "ಮೂಡಲಸೀಮೆಯಲ್ಲಿ ಕೊಲೆ-ಗಿಲೆ ಮುಂತಾಗಿ" ಕಥೆಯಲ್ಲಿ ಬರುವ ಮಾತೊಂದು ಓದುಗರ ಮನಕಲಕಿಬಿಡುತ್ತದೆ. ಶಾಲೆಗೋಗಿ ಬಂದ ಜೀತದಾಳಿನ ಮಗುವೊಂದು ತನ್ನ ತಾಯಿಗೆ "ನೋಡವ್ವ ನೋಡವ್ವ ಪಟೇಲ್ರ ಶಂಭಪ್ಪ ಅವ್ನಲ್ಲ.. ಅವ ನನ್ನ ರಾಜ ಅನ್ನಕ್ಕಿಲ್ವಂತೆ, ನೀವು ಹೊಲಾರು, ಕಲಾ ಅದ್ಕ ನಿನ್ನ ರಾಜ ಅನ್ನಕ್ಕಿಲ್ಲ 'ಗೀಜ' ಅಂತೀನಿ ಅಂದ." ಈ ಮಾತಿನ ಅರ್ಥ ಮೇಲ್ಜಾತಿ ಜನ ದಲಿತರ ಹೆಸರನ್ನು ತಿರುಚುವುದಷ್ಟೇ ಅಲ್ಲ, ಹೆಸರನ್ನು ಪೂರ್ತಿಯಾಗಿಯೂ ಉಚ್ಚರಿಸುವುದಿಲ್ಲ, ಭೈರ, ನಿಂಗ, ಸಿದ್ದ, ಸುಬ್ಬ, ನಂಜಿ ಉತ್ತರ ಕರ್ನಾಟಕದೊಳಗೂ ರಾಮ, ಭೀಮ, ಸಂಗ್ಯಾ, ಬಾಳ್ಯ.. ಹೀಗೆ ಕರೆಯಲಾಗುತ್ತದೆ. ಹೆಸರು ಕರೆಯುವ ಧಾಟಿಯಿಂದಲೇ ಆತನ ಜಾತಿ ಗೊತ್ತಾಗಿಬಿಡುವಂತೆ ನೋಡಿಕೊಳ್ಳಲಾಗುತ್ತದೆ.

ಒಂದೇ ಹೆಸರೂ ಕೂಡ ಜಾತಿ ಸಮಾಜದಲ್ಲಿ ರೂಪಾಂತರ ಹೊಂದುವ ಬಗೆಯನ್ನು ಸೂಚಿಸುವ ಸಿದ್ದನಗೌಡ ಪಾಟೀಲರ ಕವನವೊಂದು ಹೀಗಿದೆ.

ಅಯ್ನಾರ ಹುಡುಗ
'ಬಸಯ್ಯ' ಅಂತ
ಗೌಡರ ಹುಡುಗ
'ಬಸನಗೌಡ' ಅಂತ
ಬಣಜಿಗೇರು
'ಬಸವರಾಜು' ಅಂತ
ಆ ಕುರುಬರ ಹುಡುಗ
'ಬಸಪ್ಪ' ಅಂತ
ನಾ 'ಬಸ್ಯಾ' ಅಂತ
ಯಾಕಂದ್ರ ನಾ 'ಹೊಲ್ಯಾ' ಅಂತ

ದಲಿತರ ಹೆಸರು ಉನ್ನತ ಅರ್ಥವನ್ನು ಸೂಚಿಸುವಂತಿದ್ದರೂ, ಕರೆಯುವಂತಿದ್ದರೂ, ಹಾಗೆ ಕರೆಯದೆ, ಜೀತದಾಳುಗಳಿಗೆ ತಾವೇ ಮರುನಾಮಕರಣ ಮಾಡಿಬಿಡುತ್ತಾರೆ. ಆ ಹೆಸರುಗಳೆಲ್ಲ ಬಹುತೇಕ ಅನ್ವರ್ಥಕ ನಾಮಗಳೇ. ಕೋರ, ಕೆಪ್ಪ, ಕುಂಟ, ಕುಳ್ಳ, ಗಿಡ್ಡ, ಕರಿಯ, ಜಬ್ಬ, ಮಳ್ಳ, ದೊಳ್ಳ ಇತ್ಯಾದಿಯಾಗಿ. ಹೀಗೆ ಕೆಳಜಾತಿ ಹೆಸರುಗಳು ಜಾತಿ ಸಂಸ್ಕೃತಿಯ ಸಮಾಜದಲ್ಲಿ ದಡ್ಡತನ, ಒರಟುತನ, ಕೊಳಕು, ನೀಚತನಗಳ ಪ್ರತೀಕವಾಗಿ ಮೇಲ್ಜಾತಿ ಜನರ ಬಾಯಲ್ಲಿ ಹರಿದಾಡತೊಡಗಿದವು. ಕೆಟ್ಟ ಬೈಗುಳಕ್ಕೂ ಈ ಹೆಸರೇ ಬಳಕೆಗೆ ಬಂದವು. ಹೀಗೆ ಹೆಸರು ಕರೆಯುವುದರಲ್ಲೇ ನಾನು ನಿನಗಿಂತ ಮೇಲು ಎಂಬ ಅಹಂ ಅನ್ನು ಮನಸ್ಸಿನಲ್ಲಿ ತಂದುಕೊಂಡು ವಿಕೃತ ಸಂತೋಷಪಡಲಾರಂಭಿಸಿದರು. ಅದು ಅವರ ಪೀಳಿಗೆಯಿಂದ ಪೀಳಿಗೆಗೆ ಸಾಗಿಬಂತು ಕೂಡ. ಉನ್ನತ ಖಾಸಗಿ ಕಾನ್ವೆಂಟ್‌ನಲ್ಲಿ ಓದಿ ಜಾತಿ ಪದ್ಧತಿಯ ವಿರುದ್ಧ ಚರ್ಚೆಯಲ್ಲಿ ಭಾಗವಹಿಸಿ, ಬಹುಮಾನದೊಂದಿಗೆ ಮನೆಗೆ ಮರಳುವ ಮೇಲ್ಜಾತಿ ಮಗು ಮನೆಮುಂದೆ ಕೆಲಸ ಮಾಡುವ ವಯಸ್ಸಾದ ಜೀವವನ್ನು ಕುರಿತು "ಏನಲೇ ಭೈರ ಚೆನ್ನಾಗಿದ್ದೀಯಾ?" ಅಂದುಬಿಡುತ್ತದೆ ಯಾವುದೇ ಅಳುಕಿಲ್ಲದೆ. ಮನೆಯವರಿಗೂ ಕೂಡ ಅದು ಅಸಹಜವೆನಿಸುವುದೇ ಇಲ್ಲ, ಬೆಳೆಯುವ ಮಕ್ಕಳು ಕೂಡ ಹಿರಿಯರ ನಡವಳಿಕೆಯನ್ನು ಅನುಸರಿಸುವುದರ ಪರಿಣಾಮ ಇದು.

ಹೀಗಾಗಿ ಕೆಳಜಾತಿಗಳು ತಮ್ಮ ಪೂರ್ವಜರ ಹೆಸರೇ ಕೀಳು ಅರ್ಥವನ್ನು ಸೂಚಿಸುತ್ತಿರಬೇಕು ಎಂದು ಭಾವಿಸಿಬಿಟ್ಟಿತು. ಮೇಲ್ಜಾತಿ ಜನರ ಹೆಸರುಗಳು ಶ್ರೇಷ್ಠವೆನಿಸಿಬಿಟ್ಟವು. ಹಾಗಾಗಿ ಮೇಲ್ಜಾತಿಯವರ ಹೆಸರುಗಳನ್ನು ತಮ್ಮ ಮಕ್ಕಳಿಗೆ ಇಡತೊಡಗಿದರು. ಇತ್ತೀಚೆಗೆ ನಾಮಕರಣದ ಸಂದರ್ಭವೊಂದರಲ್ಲಿ ಪರಿಚಯದವರ ಮಗುವಿಗೆ ಶಶಾಂಕ ಎಂದು ಹೆಸರಿಟ್ಟರು. ಆಗ ನಾನು ಅದಕ್ಕಿಂತ ಸೋಮ ಎಂದು ಇಟ್ಟರೆ ಚೆನ್ನಾಗಿರುತ್ತದೆ ಎಂದೆ ಅಷ್ಟೇ. ಅಲ್ಲಿದ್ದವರೆಲ್ಲಾ ಬಿದ್ದುಬಿದ್ದು ನಗಲಾರಂಭಿಸಿದರು. ತಮ್ಮ ಜಾತಿ ಹಿನ್ನೆಲೆಯಲ್ಲಿ ಈ ಹೆಸರು ಸೂಚಿಸುತ್ತಿರಬಹುದೆಂದು ಕೆಲವರು ಗಂಭೀರವಾದರು. ನನಗೆ ಈ ಹೆಸರಿಗೆ ಸಮಾಜದ ಪ್ರತಿಕ್ರಿಯೆ ಹೇಗಿರುತ್ತದೆ ಎಂದು ತಿಳಿಯಬೇಕಿತ್ತಷ್ಟೇ. ಆ ಎರಡೂ ಹೆಸರಿನ ಅರ್ಥವೊಂದೇ. 'ಚಂದ್ರ'ವೆಂದು. ಸೋಮ ತಳಸಮುದಾಯದಿಂದ ಬಂದಿದ್ದು, ಕೀಳರಿಮೆ ಹುಟ್ಟಿಸುತ್ತಿದ್ದರೆ, ಶಶಾಂಕ ಮೇಲ್ವರ್ಗದಿಂದ ಬಂದಿದ್ದು ಮೇಲರಿಮೆಯನ್ನು ಹುಟ್ಟಿಸುತ್ತಿತ್ತು.

ಕಳೆದೆರಡು ದಶಕಗಳಿಂದ ದಲಿತರು ತಮ್ಮ ಮಕ್ಕಳಿಗೆ ಇಟ್ಟ ಹೆಸರುಗಳನ್ನು ಗಮನಿಸಬೇಕು. ಅವೆಲ್ಲ ಹೀಗೆ ಯಾವ್ಯಾವುದೋ ಭಾಷೆಯ ಯಾವ್ಯಾವುದೋ ಅರ್ಥ ಕೊಡುವ ಯಾರ್ಯಾರದೋ ಹೆಸರುಗಳು. ಹೆಸರಿಡುವಲ್ಲಿ ಒಂದು ಎಚ್ಚರಿಕೆಯನ್ನು ತೆಗೆದುಕೊಂಡಂತೆ ಕಾಣುತ್ತದೆ. ಅದೇಂದರೆ ಆ ಹೆಸರು ಮೇಲ್ಜಾತಿಯ ಬಾಯಲ್ಲಿ ವಿಕೃತಗೊಳ್ಳದೆ, ಉಚ್ಚರಿಸಲ್ಪಡುವ ಎರಡೇ ಅಕ್ಷರಗಳುಳ್ಳ ಹೆಸರುಗಳು. ಈ ರೀತಿಯ ನಾಮಕರಣ ಜಾತಿಯನ್ನು ಮುಚ್ಚಿಡುವ ಅಥವಾ ಅದು ನೀಡುವ ಮಾನಸಿಕ ಹಿಂಸೆಯನ್ನು ತಾತ್ಕಾಲಿಕವಾಗಿ ತಡೆಯುವ ತಂತ್ರಗಾರಿಕೆಯೂ ಇರಬಹುದು. ಆದರೆ ಹಾಗೆಂದು ಭಾವಿಸಬೇಕಾಗಿಲ್ಲ, ಮೇಲ್ಜಾತಿ ಜನ ಈಗ ಹೆಸರಿನಿಂದ ಜಾತಿ ಪತ್ತೆಹಚ್ಚುವಲ್ಲಿ ಸ್ವಲ್ಪ ಗೊಂದಲ ಪಡಬಹುದಾದರೂ, ಹೆಸರು ಹೇಳಿದವರ ತಂದೆ-ತಾಯಿ, ಅಜ್ಜ-ಅಜ್ಜಿ ಹೆಸರು ಕೇಳಿಬಿಡುತ್ತಾರೆ. ಹಾಗೆ ಕೇಳುವ ಉದ್ದೇಶ ಬೇರೆ ಏನೆಂದು ಹೇಳಬೇಕಾಗಿಲ್ಲ.

ದಲಿತ ಯುವಕ-ಯುವತಿಯರು ಶಾಲಾಕಾಲೇಜುಗಳಲ್ಲಿ, ಸಮಾರಂಭಗಳಲ್ಲಿ ದೇವಾಲಯಗಳಲ್ಲಿ ತಮ್ಮ ತಂದೆತಾಯಿಯರ ಹೆಸರೇಳಲು ಪಡುವ ಪಾಡು ಈ ಶ್ರೇಣೀಕೃತ ಸಮಾಜ ಹೆಸರಿಗೆ ಹಚ್ಚಿರುವ ಕಳಂಕ ಮತ್ತು ಈ ಹೆಸರಿನೊಳಗೆ ಅಡಗಿರುವ ಕ್ರೌರ್ಯವನ್ನು ಎತ್ತಿತೋರಿಸುತ್ತದೆ. ಹೆಸರು ತಂದಿಟ್ಟಿರುವ ಇನ್ನೊಂದು ಬಗೆಯ ಕ್ರೌರ್ಯವನ್ನು ಇಲ್ಲಿ ಹೇಳಬೇಕೆನಿಸುತ್ತದೆ. ಅದು ಗೋಧ್ರಾ ನಂತರದಲ್ಲಿ ಗುಜರಾತಿನಲ್ಲಿ ನಡೆದ ಮಾರಣಹೋಮಕ್ಕೆ ಸಂಬಂಧಿಸಿದ್ದು. ನರಮೇಧಕ್ಕೆ ಹೊರಟವರಿಗೆ ಯಾರ್ಯಾರನ್ನು ಕೊಲ್ಲಬೇಕೆಂದು ತೋರಿಸುತ್ತಾ ಹೋಗಿದ್ದು ಅವರಿಟ್ಟುಕೊಂಡಿದ್ದ ಹೆಸರುಗಳನ್ನು ಆಧರಿಸಿಯೇ ಎನ್ನುವುದೊಂದು ವಿಪರ್ಯಾಸ. ಹೆಸರು ಕೇಳಿಕೊಂಡೇ ಆತ, ಆಕೆ ಯಾವ ಧರ್ಮಕ್ಕೆ ಸೇರಿದವರು, ಆ ಮನೆ, ಅಂಗಡಿ, ಯಾರಿಗೆ ಸೇರಿದ್ದು ಎಂದು ತಿಳಿದೇ ಕೊಲೆ, ಸುಲಿಗೆ, ದರೋಡೆ ನಡೆಯಿತು. ನಿರಾಶ್ರಿತ ಶಿಬಿರಕ್ಕೆ ಭೇಟಿ ನೀಡಿದ್ದ ಸತ್ಯಶೋಧನಾ ಸಮಿತಿಯೊಂದು ಒಬ್ಬ ಯುವತಿಯ ಘಟನೆಯನ್ನು ಹೀಗೆ ದಾಖಲಿಸಿದೆ: "ನರಹಂತಕನ ಕೈಯಲ್ಲಿ ಸಿಕ್ಕ ಯುವತಿ ಬರ್ಬರವಾಗಿ ಅತ್ಯಾಚಾರಕ್ಕೊಳಗಾದಳು. ಆಕೆ ಕೊನೆಯುಸಿರೆಳೆಯುತ್ತಿರುವಾಗ ಆ ಹಂತಕ ಕೊಲ್ಲುವ ಮೊದಲು ನಿನ್ನ ಹೆಸರೇನೆಂದು ಕೇಳಿಬಿಟ್ಟ. ಆಕೆ ಹೇಳಿದಳು. ದಿಗ್ಗನೆದ್ದ ಆತ 'ಮೊದಲೇ ನಿನ್ಹೆಸರು ಹೇಳಲಿಲ್ಲವೇಕೆ. ಛೆ! ನನ್ನ ಧರ್ಮದವರನ್ನೇ ನಾವು ಅತ್ಯಾಚಾರ ಮಾಡುವುದೇ' ಎಂದು ಚೀರಾಡಿ ಬಿಟ್ಟುಹೋದನಂತೆ. ಹೆಸರೇಳಿ ಬದುಕಿದಳು. ಹೇಳಿದ ಹೆಸರೇನಾದರೂ ಅವನು ಅರಸುತ್ತಾ ಬಂದಿದ್ದೇ ಆಗಿದ್ದರೆ ಅವಳ ಗತಿ ಬೇರೆಯದೇ ಆಗಿರುತ್ತಿತ್ತು."

ದಲಿತರು ತಮ್ಮ ಜಾತಿ ಅವಮಾನದಿಂದ ಹೊರಬರಲು ಹೆಸರು ಬದಲಾಯಿಸಿಕೊಂಡಂತೆ ಅಲ್ಪಸಂಖ್ಯಾತರೂ ಕೂಡ ತಮ್ಮ ಐಡೆಂಟಿಟಿಯನ್ನು ಬದಿಗಿರಿಸಿ ಅಂಗಡಿ ಮುಂಗಟ್ಟುಗಳಿಗೆ ಕರ್ನಾಟಕ ಫ್ಯಾಷನ್ ಸ್ಟೋರ್, ಮಲ್ನಾಡ್ ಹೋಟೆಲ್, ಮಾರ್ಡನ್ ಮಟನ್ ಸ್ಟಾಲ್, ಇಂಡಿಯನ್ ಆಟೋ ವರ್ಕ್ಸ್ ಹೀಗೆ ಹೆಸರಿಡುತ್ತಿರುವುದನ್ನು ನೋಡಿದರೆ ಮುಂದೊಂದು ದಿನ ಹೆಸರು ತಂದೊಡ್ಡುವ ಗಂಡಾಂತರದಿಂದ ಪಾರಾಗುವ ಮುಂದಾಲೋಚನೆಯಂತೆಯೇ ತೋರುತ್ತದೆ. ಗುಜರಾತ್ ನರಮೇಧದ ಸಮಯದಲ್ಲಿ ಪ್ರಕಟಗೊಂಡ ಕವಿ ಬಿ.ಎಂ. ಬಷೀರ್ ಅವರ ಕವನದ ಕೊನೇ ಸಾಲುಗಳು ಹೀಗಿವೆ:

ದೇವರೇ.....
ಇನ್ನು ಮುಂದೆ ಹೆಸರಿರುವ
ಎಲ್ಲಾ ತಾಯಂದಿರೂ ಬಂಜೆಯರಾಗಲಿ
ಕಸದ ತೊಟ್ಟಿಗಳಿಗೆ
ಬಸ್ ನಿಲ್ದಾಣಗಳಿಗೆ
ಗಟಾರಗಳಿಗೆ
ಹೆರಿಗೆ ಬೇನೆ ಕೊಡು
ಧರ್ಮದ ಕಳಂಕವಿಲ್ಲದ
ಒಂದು ಮಗು
ಹೆಸರಿನ ಹಂಗಿಲ್ಲದೆ ಬಾಳಲಿ.

ಹೀಗೆ ಜನ ಬದುಕಿನುದ್ದಕ್ಕೂ ಯಜಮಾನ ಸಂಸ್ಕೃತಿಯೊಂದು ತಳಸಮುದಾಯದ ಮೇಲೆ ನಡೆಸಿದ ದಾಳಿಯು ತನ್ನ ನೆಲದಲ್ಲಿ ತನ್ನತನ ಬಿಟ್ಟು ಬದುಕುವ ಸ್ಥಿತಿಗೆ ಆ ಸಮುದಾಯವನ್ನು ದೂಡಿಬಿಟ್ಟಿತು. ಕವಿಯ ಆಶಯದಂತೆಯೇ ಜಾತಿ, ಧರ್ಮ, ವರ್ಣದ ಕಳಂಕವಿಲ್ಲದ ಮುಂದಿನ ಪೀಳಿಗೆಯಾದರೂ ಹೆಸರಿನ ಹಂಗಿಲ್ಲದೆ ಬಾಳಲಿ. ಹಾಗೆ ಬಾಳಲು ಜನವಿರೋಧಿ ಯಜಮಾನ ಸಂಸ್ಕೃತಿಗೆದುರಾಗಿ ಜನಸಂಸ್ಕೃತಿಗೆ ಜೀವತುಂಬುವ ಕೆಲಸದ ತುರ್ತು ಇಂದಿನ ಅಗತ್ಯವಾಗಿದೆ.

• ರಾಜೇಶ್

# ಪ್ರಳಯಾಂತಕರ ಪ್ರಳಯ ವೃತ್ತಾಂತ




ಲಕ್ಷಾಂತರ ವರ್ಷಗಳ ಹಿಂದೆ ನಮ್ಮ ಸೌರಮಂಡಲದ ...ತರೆ ಗ್ರಹಗಳಂತೆ ನಮ್ಮ ಭೂಮಿಯೂ ಇತ್ತು, ಅಂದರೆ ...ಲ್ಲಿ ಯಾವ ಜೀವರೂಪಗಳೂ ಇರಲಿಲ್ಲ, ಆದರೆ ಒಮ್ಮೆ ಈ ಭೂಮಿಯ ಮೇಲೆ ದೊಡ್ಡದೊಂದು ಉಲ್ಕೆ ಅಪ್ಪಳಿ...ದ್ದರಿಂದ ಭೂಮಿ ತನ್ನ ಆಯತಪ್ಪಿ 23 ಡಿಗ್ರಿಯಷ್ಟು ತನ್ನ ...ಕ್ಷೆಯಲ್ಲಿ ಬದಲಾವಣೆ ಕಂಡಿತು. ಆಗ ಪ್ರಳಯವೇ ಸಂಭವಿಸಿತು. ಆ ಪ್ರಳಯದ ನಂತರವೇ ನಿಧಾನವಾಗಿ ಈ ಭೂಮಿಯಲ್ಲಿ ಜೀವರಾಶಿಗಳು ಸೃಷ್ಟಿಯಾಗಿದ್ದು... ಆದಕ್ಕೇ ನಮ್ಮ ಭೂಮಿಯನ್ನು ಅದೃಷ್ಟಶಾಲಿ ಗ್ರಹ ಎಂದು ವಿಜ್ಞಾನಿಗಳು ಹೇಳುತ್ತಾರೆ.

ನಮ್ಮೆಲ್ಲರ ಅಸ್ತಿತ್ವಕ್ಕೆ ಒಂದು ಪ್ರಳಯವೇ ಕಾರಣವಾಗಿರು...ವಾಗ, ನಮ್ಮ ವಿನಾಶಕ್ಕೂ ಪ್ರಳಯವೇ ಕಾರಣವಾಗಬಹು...ದಲ್ಲವೇ? ಹೌದು, ವಿಜ್ಞಾನಿಗಳು ಹೇಳುವ ಪ್ರಕಾರ ...ಂದೊಮ್ಮೆ ಆದಂತೆ ಮುಂದೊಂದು ದಿನ ಮತ್ತೊಂದು ಉಲ್ಕೆ ನಮ್ಮ ಭೂಮಿಯ ಮೇಲೆ ಅಪ್ಪಳಿಸಿ ಇಡಿ ಗ್ರಹವನ್ನೇ ...ಂದಿ ಉಡಾಯಿಸಬಹುದು. ಆದರೆ ಅಂತಹ ಸಾಧ್ಯತೆ ...ದ್ಯಕ್ಕಿಲ್ಲ. ಇನ್ನೂ ಲಕ್ಷಾಂತರ ವರ್ಷಗಳು ಕಳೆದ ನಂತರ ...ದು ಸಂಭವಿಸಬಹುದು.


ಆದರೂ ಬಹಳಷ್ಟು ಮನುಷ್ಯರಲ್ಲಿ ಪ್ರಳಯದ ಬಗ್ಗೆ ...ತೂಹಲ ಮತ್ತು ಭಯ. ಜನರ ಇಂತಹ ದುರ್ಬಲ ಮನಸ್ಥಿತಿಯನ್ನೇ ಬಂಡವಾಳ ಮಾಡಿಕೊಂಡು 'ಬ್ರಹ್ಮಾಂಡ' ...ಖ್ಯಾತಿಯ ನರೇಂದ್ರ ಶರ್ಮಾನಂತಹ ಬಂಡಲ್ ...ಸಾಮಿಗಳು ಲಾಭ ಮಾಡಿಕೊಳ್ಳುತ್ತಾರೆ. ಇದೇ ಶರ್ಮ ...ತ್ತೀಚೆಗೆ 'ಸದ್ಯದಲ್ಲೇ ಪ್ರಳಯ ಸಂಭವಿಸುತ್ತೆ, ಐದು ...ಲಗಳಲ್ಲಿ ದೀಪ ಹಚ್ಚಿ ಜಗನ್ಮಾತೆಯನ್ನು ಪೂಜಿಸುವವರು ಮಾತ್ರ ಜೀವ ಉಳಿಸಿಕೊಳ್ಳುತ್ತಾರೆ' ಎಂದೆಲ್ಲ ಸುಳ್ಳು ಹೇಳಿದ್ದನಲ್ಲವೇ. ಅಂದಹಾಗೆ ಈ ಶರ್ಮನಿಗೆ ಹೀಗೆಲ್ಲ ...ಳ್ಳು ಹೇಳಲು, ಜನರನ್ನು ದಿಕ್ಕು ತಪ್ಪಿಸಲು ಸ್ಫೂರ್ತಿ ...ಡಿದವನು ಹ್ಯಾರಲ್ಡ್ ಕ್ಯಾಂಪಿಂಗ್ ಎಂಬ ಮತ್ತೊಬ್ಬ ...ುಚ್ಚ.

ಅಮೆರಿಕದವನಾದ ಈ ಕ್ಯಾಂಪಿಂಗ್ "2011ರ ಮೇ ...1ರ ಸಂಜೆ ಆರುಗಂಟೆ ಸರಿಯಾಗಿ ಭೂಮಿಯ ಮೇಲೆ ...ಸುಕ್ರಿಸ್ತ ಪ್ರತ್ಯಕ್ಷನಾಗುತ್ತಾನೆ. ಹಾಗೆ ಬರುವ ಏಸು ತನ್ನೊಂದಿಗೆ ...0 ಕೋಟಿ ಕ್ರಿಶ್ಚಿಯನ್ನರನ್ನು ಮಾತ್ರ ಆರಿಸಿಕೊಂಡು ಸ್ವರ್ಗಕ್ಕೆ ...ದುಕೊಂಡು ಹೋಗುತ್ತಾನೆ. ಆನಂತರ ಭೂಮಿಯ ...ಲೆ ಬೆಂಕಿ, ಬಿರುಗಾಳಿ, ಭೂಕಂಪಗಳು ಸಂಭವಿಸಿ ...ಲ್ಲಿ ಉಳಿದಿರುವ ಕೋಟ್ಯಾಂತರ ಜನರೆಲ್ಲ ...ವಿಗೀಡಾಗುತ್ತಾರೆ. ಅವರ ಶವಗಳು ರಸ್ತೆಗಳ ಮೇಲೆ ...ಲ್ಲಾಡುತ್ತಿರುತ್ತವೆ. ಹೀಗೆ ಐದು ತಿಂಗಳ ಕಾಲ ಈ ...ನಾಶಕಾರಿ ಪ್ರಳಯ ಮುಂದುವರೆಯುತ್ತದೆ. ...ನೆಗೆ ಅಕ್ಟೋಬರ್ 21ರಂದು ಇಡೀ ...ೂಮಿಯೇ ಛಿದ್ರಗೊಳ್ಳುತ್ತದೆ" ಎಂದಿದ್ದ.

ತನ್ನ ಈ ಭವಿಷ್ಯನುಡಿಯನ್ನು ಬೈಬಲ್ ...ನ್ನೇ ಆಧರಿಸಿ ಹೇಳುತ್ತಿದ್ದೇನೆಂದೂ, ಏಸುಕ್ರಿಸ್ತನನ್ನು ...ಬಚೆಗೇರಿಸಿ ಮೇ 21ಕ್ಕೆ ಸರಿಯಾಗಿ ...22,500 ದಿನಗಳಾಗುತ್ತಾವಾದ್ದರಿಂದ ಅವತ್ತೇ ...ಸುಕ್ರಿಸ್ತ ಮತ್ತೆ ಭೂಮಿಯ ಮೇಲೆ ಪ್ರತ್ಯಕ್ಷ ...ಗುತ್ತಾನೆಂದೂ ಕ್ಯಾಂಪಿಂಗ್ ಹೇಳಿದ. ವಿಚಿತ್ರ ...ಂದರೆ ಆತನ ಈ ಭವಿಷ್ಯನುಡಿಯನ್ನು ...ವಿರಾರು ಜನ ಅಮೆರಿಕನ್ನರು ನಂಬಿದರು. ...ಪಾಕಲಿಪ್ಸ್ ಸಂಭವಿಸಿ ತಾವು ಸ್ವರ್ಗಕ್ಕೆ ...ೋಗುತ್ತೇವೆ' ಎಂದೇ ಅವರೆಲ್ಲ ಭಾವಿಸಿದರು. ಅದಕ್ಕೆ ...ರಣ ಅಮೆರಿಕನ್ನರ ಧಾರ್ಮಿಕ ಮತ್ತು ಜನಪ್ರಿಯ ...ಸ್ಕೃತಿಯಲ್ಲಿ ಅಪಾಕಲಿಪ್ಸ್ ಬಗೆಗಿನ ನಂಬಿಕೆಗೆ ಹೆಚ್ಚು ...ನ್ನತೆ ಇರುವುದು. ಈಗಾಗಲೇ ಪ್ರಳಯ ಕುರಿತಂತೆ ...ಲವಾರು ಪುಸ್ತಕಗಳು ಮತ್ತು ಸಿನಿಮಾಗಳು ಅಮೆರಿಕೆಯಲ್ಲಿ ...ಡುಗಡೆಗೊಂಡಿವೆಯಲ್ಲದೆ ಕ್ರಿಶ್ಚಿಯನ್ ಪಾದ್ರಿಗಳೂ ...ೂಮಿಯ ಅಂತ್ಯ ಕುರಿತಂತೆ ಬೈಬಲ್‌ನಲ್ಲಿರುವುದನ್ನು ...ಾದಿಗಳಿಗೆ ಹೇಳುವುದರಿಂದ ಅದನ್ನು ಕೆಲ ಜನ ...ಬುತ್ತಾರೆ.

ಅದರಲ್ಲೂ ಕ್ಯಾಂಪಿಂಗ್ ಸಾಮಾನ್ಯ ಮನುಷ್ಯನಲ್ಲ. ಈಗ 89 ವರ್ಷ ವಯಸ್ಸಾಗಿರುವ ಈತ ವೃತ್ತಿಯಲ್ಲಿ ಇಂಜಿನಿಯರ್ ಆಗಿದ್ದವನು. ಆದರೆ 1958ರಲ್ಲೇ ತನ್ನ ಲಾಭದಾಯಕ ಕಂಪನಿಗಳನ್ನು ಬಂದ್ ಮಾಡಿ ಕ್ರಿಶ್ಚಿಯನ್ ಧರ್ಮದ ಪ್ರಚಾರಕ್ಕೆಂದು ತನ್ನ ಬದುಕನ್ನೇ ಮೀಸಲಿಟ್ಟ. ಬೈಬಲ್‌ನ ಪ್ರತಿ ಪದವೂ ಗೊತ್ತಿರುವ ಕ್ಯಾಂಪಿಂಗ್ ಅದನ್ನು ರೋಚಕವಾಗಿ ವಿವರಿಸಬಲ್ಲ, ಆ ಕಾರಣಕ್ಕೇ ಜನಪ್ರಿಯವಾದವನು. ಆಗ ಈತ ಹಲವರೊಂದಿಗೆ ಸೇರಿ 'ಫ್ಯಾಮಿಲಿ ರೇಡಿಯೋ' ಎಂಬ ಚಾನೆಲ್ ಅನ್ನು ಶುರುಮಾಡಿದ. ಇವತ್ತು ಈ ರೇಡಿಯೋ ಚಾನೆಲ್ ಎಷ್ಟು ಬೆಳೆದಿದೆ ಎಂದರೆ ಅಮೆರಿಕದಾದ್ಯಂತ ಸುಮಾರು 150 ರೇಡಿಯೋ ಮತ್ತು ಟಿವಿ ಚಾನೆಲ್‌ಗಳನ್ನು ಹೊಂದಿದೆ, ಇದರ ಕಾರ್ಯಕ್ರಮಗಳು ಜಗತ್ತಿನ 61 ವಿವಿಧ ಭಾಷೆಗಳಿಗೆ ಅನುವಾದಗೊಂಡು ಇಂಟರ್‌ನೆಟ್‌ನಲ್ಲೂ ಪ್ರಕಟಗೊಳ್ಳುತ್ತವೆ.

ಕ್ಯಾಂಪಿಂಗ್‌ನ 'ಫ್ಯಾಮಿಲಿ ರೇಡಿಯೋ' ಚಾನೆಲ್‌ನ ಕೇಳುಗರು ಮತ್ತು ಪ್ರೇಕ್ಷಕರೂ ದೊಡ್ಡಸಂಖ್ಯೆಯಲ್ಲಿದ್ದು ಅವರು ಧಾರಾಳವಾಗಿ ನೀಡುವ ಹಣದಿಂದಲೇ ಆ ನೆಟ್‌ವರ್ಕ್ ನಡೆಯುತ್ತದೆ. 2009ರಲ್ಲಿ ಫ್ಯಾಮಿಲಿ ರೇಡಿಯೋ ಕೇಳುಗರು 18 ಮಿಲಿಯನ್ ಡಾಲರ್‌ಗಳನ್ನು ದಾನವಾಗಿ ನೀಡಿದ್ದರು.



ಇವತ್ತು ಈ ಚಾನೆಲ್‌ನ ಒಟ್ಟು ಆಸ್ತಿಯ ಮೌಲ್ಯ 200 ಮಿಲಿಯನ್ ಡಾಲರ್‌ಗಳನ್ನು ಮೀರುತ್ತದೆ. ಒಂದು ಅಂದಾಜಿನ ಪ್ರಕಾರ ಮೇ 21ರಂದು ಪ್ರಳಯ ಆಗುತ್ತದೆಂಬ ಸುದ್ದಿಯನ್ನು ಹರಡಲು ಸ್ವತಃ ಫ್ಯಾಮಿಲಿ ರೇಡಿಯೋ 100 ಮಿಲಿಯನ್ ಡಾಲರ್‌ಗಳನ್ನು ವೆಚ್ಚಮಾಡಿದೆಯಂತೆ. ಇಷ್ಟೊಂದು ಹಣ ಬಂದಿದ್ದು ಕೂಡ ಆ ಚಾನೆಲ್‌ನ ವೀಕ್ಷಕರಿಂದ!

ಮೊದಲೇ ಹೇಳಿದಂತೆ ಅಮೆರಿಕದಲ್ಲಿ ಪ್ರಳಯ ಕುರಿತಂತೆ ಹೆಚ್ಚು ಜನರಲ್ಲಿ ನಂಬಿಕೆ ಇರುವುದರಿಂದ ಅದನ್ನೇ ದಂಧೆ ಮಾಡಿಕೊಂಡವರೂ ಹೆಚ್ಚಿನ ಸಂಖ್ಯೆಯಲ್ಲಿ ಸಿಗುತ್ತಾರೆ. ಉದಾಹರಣೆಗೆ ಹತ್ತೊಂಬತ್ತನೆ ಶತಮಾನದ ಪ್ರಾರಂಭದಲ್ಲಿ 'ವಿಲಿಯಂ ಮಿಲ್ಲರ್' ಎಂಬ ರೈತ ಕಂ ಬೈಬಲ್ ವಿದ್ವಾಂಸ 1844ರಲ್ಲಿ ಏಸುಕ್ರಿಸ್ತ ಭೂಮಿಗೆ ಬಂದು ಧರ್ಮನಿಷ್ಠರನ್ನು ರಕ್ಷಿಸುತ್ತಾನೆ ಆನಂತರ ಪ್ರಳಯ ಸಂಭವಿಸುತ್ತದೆ ಎಂದಿದ್ದ. ಅದನ್ನು ನಂಬಿದ ಅದೆಷ್ಟೋ ಜನ ತಮ್ಮ ಆಸ್ತಿಪಾಸ್ತಿಗಳನ್ನು ಮಾರಿ ಅಮೆರಿಕ ಪೂರ್ತಿ ಅಪಾಕಲಿಪ್ಸ್ ಬಗ್ಗೆ ಮಾಹಿತಿಯನ್ನು ಹರಡಲು ತಮ್ಮ 'ಉಳಿದ ಸಮಯ'ವನ್ನು ಉಪಯೋಗಿಸಿದ್ದರು. ಆದರೆ 1844ರಲ್ಲಿ ಎಂತಹದ್ದೂ ಸಂಭವಿಸಲಿಲ್ಲ; ಆದರೆ ತಾವು ತಪ್ಪು ಮಾಡಿದ್ದೇವೆಂದು ಒಪ್ಪಿಕೊಳ್ಳಲು ಅವರ್‍ಯಾರೂ ಸಿದ್ಧರಿರಲಿಲ್ಲ. ಆಗ ಏಸುಕ್ರಿಸ್ತನ ಪುನರಾಗಮನ ಎಂದಾಗುತ್ತದೆಂದು ಅವರ ನಡುವೆಯೇ ಭಿನ್ನಾಭಿಪ್ರಾಯಗಳು ಭುಗಿಲೆದ್ದು ಅವರೆಲ್ಲ ಕ್ರೈಸ್ತ ಧರ್ಮದ ಬೇರೆಬೇರೆ ಟಿಸಿಲುಗಳಾಗಿ ಹೊಮ್ಮಿದರು. ಇವತ್ತು 'ಹಿಂದೂಧರ್ಮ'ದಲ್ಲಿ ಇರುವಷ್ಟು ಜಾತಿ-ಪಂಥಗಳು ಕ್ರೈಸ್ತ ಧರ್ಮದಲ್ಲೂ ಇವೆ ಎಂದರೆ ಅಚ್ಚರಿಯಾಗುತ್ತದೆ. ಅಂದಹಾಗೆ ಅಂದಿನಿಂದ ಇಂದಿನ ತನಕ 'ಅಪಾಕಾಲಿಪ್ಸ್ ಸಂಭವಿಸಲಿದೆ' ಎಂದು ಅದೆಷ್ಟೋ ಜನ ಭವಿಷ್ಯ ನುಡಿದು, ಅದು ನಿಜವಾಗದಿದ್ದಾಗ ಮುಖ ಮುಚ್ಚಿಕೊಂಡು ನಾಪತ್ತೆಯಾಗಿದ್ದಾರೆ. ಆದರೆ ಈ ಕ್ಯಾಂಪಿಂಗ್ ಅವರೆಲ್ಲರಿಗಿಂತ ಮಹಾನ್ ಭಂಡ.

ಈ ಹಿಂದೆ ಇದೇ ಕ್ಯಾಂಪಿಂಗ್ '1994' ಎಂಬ ಪುಸ್ತಕ ಬರೆದು 1994ರ ಸೆಪ್ಟೆಂಬರ್ 6 ರಂದು ಏಸುಕ್ರಿಸ್ತ ಮತ್ತೆ ಆಗಮಿಸುತ್ತಾನೆಂದೂ, ಆನಂತರ ಪ್ರಳಯ ಆಗುತ್ತದೆಂದೂ ಹೇಳಿದ್ದ. ಅದನ್ನು ನಂಬಿದ ಬಹಳಷ್ಟು ಜನ ಅವತ್ತು ಕ್ಯಾಲಿಫೋರ್ನಿಯಾದ ಪ್ರಮುಖ ಜಾಗದಲ್ಲಿ ಸೇರಿದ್ದರು. ಏಸುಕ್ರಿಸ್ತನ ಭೇಟಿಗೆಂದು ಅವರೆಲ್ಲ ಅಚ್ಚುಕಟ್ಟಾದ ಉಡುಪುಗಳನ್ನು ಧರಿಸಿ ತಮ್ಮ ಬೈಬಲ್‌ಗಳನ್ನು ಆಕಾಶಕ್ಕೆ ತೆರೆದು ಕಾದು ನಿಂತಿದ್ದರು. ಅವತ್ತೂ ಏನೂ ಆಗಲಿಲ್ಲ, ಆಗ ಈ ಕ್ಯಾಂಪಿಂಗ್ "ಇದು ಪ್ರಾಥಮಿಕ ಸಂಶೋಧನೆ. ಲೆಕ್ಕಾಚಾರದಲ್ಲಿ ಎಲ್ಲೋ ತಪ್ಪಾಗಿದೆ, ಇದನ್ನು ಪರಿಶೀಲಿಸುತ್ತೇನೆ" ಎಂದಿದ್ದ. ಹೀಗೆ ಹತ್ತು ವರ್ಷಗಳ ಕಾಲ ಮತ್ತೆ 'ಬೈಬಲ್ ಸಂಶೋಧನೆ'ಗೆ ಮೀಸಲಿಟ್ಟ ಕ್ಯಾಂಪಿಂಗ್ 2005ರಲ್ಲಿ 'ಟೈಮ್ ಹ್ಯಾಸ್ ಎನ್ ಎಂಡ್' ಎಂಬ ಮತ್ತೊಂದು ಪುಸ್ತಕ ಬರೆದು ಅದರಲ್ಲಿ "2011ರ ಮೇ 21ರಂದು ಪ್ರಳಯ ಗ್ಯಾರಂಟಿ" ಎಂದ.

ಮೊನ್ನೆ ಆಗಿದ್ದನ್ನು ನೋಡಿದರೆ ಅಭಿವೃದ್ಧಿ ಮತ್ತು ಆಧುನಿಕತೆ ಅಮೆರಿಕನ್ನರಲ್ಲಿ ಅರಿವನ್ನು ಮೂಡಿಸಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಮತ್ತೆ ಕ್ಯಾಂಪಿಂಗ್‌ನನ್ನು ನಂಬಿದ ಅದೆಷ್ಟೋ ಜನ ತಮ್ಮ ಆಸ್ತಿ ಪಾಸ್ತಿಗಳನ್ನು ಮಾರಿ ಕ್ರಿಸ್ತನ ಪುನರಾಗಮನ ಮತ್ತು ಪ್ರಳಯದ ಬಗ್ಗೆ ಪ್ರಚಾರ ಮಾಡಲು ಹೊರಟರು. ಅಂಥವರಲ್ಲಿ ಜೆಫ್ ಹಾಪ್ಕಿನ್ಸ್ ಎಂಬಾತ ಒಬ್ಬ. ಈತ ತನ್ನ ಜೀವಮಾನದ ಉಳಿತಾಯವನ್ನೆಲ್ಲ ಈ ಪ್ರಚಾರ ಕಾರ್ಯಕ್ಕೆ ಉಪಯೋಗಿಸಿದ. "ಬೈಬಲ್ ಬೋಧಿಸಿರುವ ಧಾರ್ಮಿಕ ಕೆಲಸದಲ್ಲಿ ತೊಡಗಿದ್ದೇನೆ" ಎಂದೇ ನಂಬಿದ. ಕೊನೆಗೆ ಕಳೆದ ಮೇ 21ರಂದು ಸ್ವರ್ಗಕ್ಕೇರಲು ಸಿದ್ಧನಾಗಿ ನಿಂತ. ಆದರೆ ಆತ ಸ್ವರ್ಗಕ್ಕೂ ಏರಲಿಲ್ಲ, ಪ್ರಳಯ ಸಂಭವಿಸಿ ಇತರೆ ಜನರೂ ಸಾಯಲಿಲ್ಲ.

"ಈ ಪ್ರಚಾರ ಕಾರ್ಯದಲ್ಲಿ ನಾನು ಬಹಳಷ್ಟು ಜನರ ಗೇಲಿಗೆ, ತಮಾಷೆಗೆ ಗುರಿಯಾಗಿದ್ದೆ, ಆದರೀಗ ನನ್ನ ಕಪಾಳಕ್ಕೆ ಯಾರೋ ಹೊಡೆದಂತೆ ಅನ್ನಿಸುತ್ತಿದೆ" ಎಂದು ಹಾಪ್ಕಿನ್ಸ್ ಮರುಗಿದ್ದಾನೆ.

ಕೀತ್ ಬಾವರ್ ಎಂಬ ಟ್ರಾಕ್ಟರ್ ಡ್ರೈವರ್ ಕೂಡ ಪ್ರಳಯ ಸಂಭವಿಸಿ ಎಲ್ಲರೂ ಸಾಯುವ ಮುನ್ನ ಒಮ್ಮೆ ಗ್ರಾನ್ಡ್ ಕ್ಯಾನ್ಯನ್ ಅನ್ನು ನೋಡೋಣ ಎಂದು ತನ್ನ ಹೆಂಡತಿ ಮತ್ತು ಮಕ್ಕಳೊಂದಿಗೆ ಹೋದ. ಅಷ್ಟೇ ಅಲ್ಲ, ಹೇಗಿದ್ದರೂ ಎಲ್ಲ ಅಂತ್ಯಗೊಳ್ಳುತ್ತೆ ಎಂಬ ದೃಢವಾದ ನಂಬಿಕೆಯಿಂದ ಅಪಾರ ಸಾಲಸೋಲ ಮಾಡಿದ. ಆದರೀಗ ನೋಡಿದರೆ ಆತ ಸಂಸಾರ ಸಮೇತ ವಾಪಸ್ ಬಂದು ಎಲ್ಲರಂತೆ ಜೀವನ ಸಾಗಿಸಬೇಕಿದೆ, ಮಾಡಿದ್ದ ಸಾಲಗಳನ್ನು ತೀರಿಸಬೇಕಿದೆ. "ನನ್ನ ಮುಂದೆ ಈಗಿರುವ ಪರಿಸ್ಥಿತಿಗಿಂತ ಪ್ರಳಯದ ಆಗಮನವೇ ಚೆನ್ನಾಗಿರುತ್ತೆ ಅನ್ನಿಸುತ್ತಿದೆ" ಎಂದು ಆತ ತನ್ನ ಬದುಕಿನ ವಿಪರ್ಯಾಸದ ಬಗ್ಗೆ ತಮಾಷೆ ಮಾಡಿದ್ದಾನೆ.



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ರಾಬರ್ಟ್ ಎಂಬಾತ ಕೂಡ ಸುಮಾರು 70 ಲಕ್ಷ ರೂಪಾಯಿಗಳಷ್ಟು ಹಣವನ್ನು ಕ್ಯಾಂಪಿಂಗ್‌ನ ಭವಿಷ್ಯ ನುಡಿಯ ಪ್ರಚಾರಕ್ಕೆ ವೆಚ್ಚ ಮಾಡಿದ್ದ. ಕೊನೆಗೆ ಮೇ 21ರಂದು ಆರು ಗಂಟೆಗೆ ನ್ಯೂಯಾರ್ಕ್ ನಗರದ ಪ್ರಖ್ಯಾತ ಟೈಂಸ್ ಸ್ಕ್ವೇರ್‌ನಲ್ಲಿ ಕಾದು ನಿಂತಿದ್ದ. ಆರು ಗಂಟೆ ಬಂದುಹೋಯಿತು. ಏನೇನೂ ಆಗಲಿಲ್ಲ, ಆಗ ಪತ್ರಕರ್ತರೊಬ್ಬರು ರಾಬರ್ಟ್‌ನನ್ನು ಪ್ರಶ್ನಿಸಿದಾಗ "ಯಾಕೆ ಪ್ರಳಯ ಸಂಭವಿಸಲಿಲ್ಲ ಅಂತ ನನಗೆ ಅರ್ಥವಾಗುತ್ತಿಲ್ಲ" ಎಂದು ದುಃಖಿಸಿದ.


ಹೀಗೆ ತಾನು ನುಡಿದಿದ್ದ ಭವಿಷ್ಯವಾಣಿ ಸುಳ್ಳಾಗಿದ್ದರ ಬಗ್ಗೆ ಸ್ವತಃ ಕ್ಯಾಂಪಿಂಗ್ ಏನನ್ನುತ್ತಾನೆ ಎಂದು ಕೆಲವರು ಕಾದಿದ್ದರು. ಆದರೆ ಒಂದು ದಿನ ಯಾರ ಕೈಗೂ ಸಿಗದೆ ಮೌನಿಯಾಗಿದ್ದ ಕ್ಯಾಂಪಿಂಗ್ ಮೇ 23ರಂದು ಪ್ರತ್ಯಕ್ಷನಾಗಿ "ಮೇ 21ರಂದು ಏನೂ ನಡೆದಿಲ್ಲ ಎಂದು ಭಾವಿಸಬೇಡಿ. ಆ ದಿನ ಎಲ್ಲೆಡೆ ಒಂದು ಅದೃಷ್ಯವಾದ ಒಂದು ಆಧ್ಯಾತ್ಮಿಕ ಪ್ರಕ್ರಿಯೆ ನಡೆದಿದೆ. ನಾನು ಮೊದಲೇ ಹೇಳಿದಂತೆ 2011ರ ಅಕ್ಟೋಬರ್ 21ರಂದು ಖಂಡಿತವಾಗಿಯೂ ಇಡೀ ಭೂಮಿ ಛಿದ್ರವಾಗಲಿದೆ" ಎಂದು ಘೋಷಿಸಿದ್ದಾನೆ.

ಅಂದಹಾಗೆ, ಈ ಕ್ಯಾಂಪಿಂಗ್ ಎಂಬ ಮನುಷ್ಯನನ್ನು ಅಮೆರಿಕಾದ ಸಾವಿರಾರು ಜನ ನಂಬಬಹುದು. ಆದರೆ 68 ವರ್ಷಗಳಿಂದ ಆತನ ಪತ್ನಿಯಾಗಿರುವ ಒಬ್ಬಾಕೆಯನ್ನು ಬಿಟ್ಟರೆ ಆತನ ಆರು ಜನ ಮಕ್ಕಳಾಗಲಿ, 28 ಜನ ಮೊಮ್ಮಕ್ಕಳಾಗಲಿ, 38 ಜನ ಮರಿಮೊಮ್ಮಕ್ಕಳಾಗಲಿ ಯಾರೂ ಆತನನ್ನು ನಂಬುವುದಿಲ್ಲ!

ಧಾರ್ಮಿಕ ಅಂಧತ್ವ ಇರುವವರೆಗೂ, ಯಾರೋ ಹೇಳಿದ್ದನ್ನು ಜನ ಪ್ರಶ್ನಿಸದೆ ನಂಬುವವರೆಗೂ, ಅಮೆರಿಕದ ಕ್ಯಾಂಪಿಂಗ್ ಮತ್ತು ಕರುನಾಡಿನ ನರೇಂದ್ರ ಶರ್ಮಾನಂತಹ ಮೋಸಗಾರರು ಇದ್ದೇ ಇರುತ್ತಾರೆ....

# ಜಮಖಂಡಿ: ಬೆತ್ತಲೆ ಸಿಡಿಯಲ್ಲಿ ಸವದಿ ಶಿಷ್ಯ





ಗದ್ದಿ ಗೌಡರ್ ಮತ್ತು ರುದ್ರಪ್ಪನೊಂದಿಗೆ

ತವನಪ್ಪ ರಾವಳ ಕಾಮುಕ ಮಾತ್ರವಲ್ಲ, ಪಕ್ಕಾ ವಿಕೃತ ಆಸಾಮಿ. ಭಾರತಿಯಂಥ ಲೆಕ್ಕವಿಲ್ಲದಷ್ಟು ಹೆಂಗಸರನ್ನ ಈತ ಬಲೆಗೆ ಕೆಡವಿಕೊಂಡು ಕಾಡಿಸಿದ ಉದಾಹರಣೆಗಳಿವೆ. ಇಂಥ ಅಡ್ನಾಡಿ ಕೆಲಸಗಳನ್ನೆಲ್ಲ ವಿಡಿಯೋ ರೆಕಾರ್ಡಿಂಗ್ ಮಾಡಿಕೊಂಡು ಸ್ನೇಹಿತರಿಗೆ ತೋರಿಸುವುದು, ಅಶ್ಲೀಲ ಸಂಭಾಷಣೆಗಳನ್ನು ಕೇಳಿಸುವುದು ರಾವಳನ ಹಳೇ ಕಾಯಿಲೆ. ಸದ್ಯ ಭಾರತಿಯೊಂದಿಗಿನ ಭಾನಗಡಿಯನ್ನು ಕೂಡಾ ಈತನೇ ಚಿತ್ರೀಕರಿಸಿದ್ದಾನೆಂಬುದು ಸ್ಪಷ್ಟ ವಿಚಾರ.

ಬಿಗಟ್ಟಿನ ನಾರಿಯರನ್ನೆಲ್ಲ ಸಹೋದರಿಯರಂತೆ ನೋಡಿ ಅಂತ ಠರಾವು ಹೊರಡಿಸುವ, ಹಿಂದೂ ಯುವತಿ ಅನ್ಯಧರ್ಮೀಯನನ್ನು ಪ್ರೀತಿಸಿದರೂ ಲಂಗೋಟಿಗೆ ಬೆಂಕಿ ತಗುಲಿದಂತಾಡುವವರ ಬೆಂಬಲಕ್ಕೆ ನಿಲ್ಲುವ ಬಜೆಪಿ ಮಂದಿ ಮತ್ತೊಮ್ಮೆ ಬೆತ್ತಲಾಗಿದ್ದಾರೆ. ಆರೆಸ್ಸೆಸ್‌ನ 'ಆದರ್ಶ'ಗಳನ್ನ ಕೈಗಡ ತೆಗೆದುಕೊಂಡಂತಿರುವ ಬಿಜೆಪಿಯೊಳಗೇ ಹಾಲಪ್ಪನಂಥ ಅತ್ಯಾಚಾರಿ ಅಡಗಿಕೊಂಡಿದ್ದದ್ದು, ರೇಣುಕಾಚಾರ್ಯನೆಂಬ ಸ್ತ್ರೀಪೀಡಕ ಸಚಿವನಾಗಿ ಹೋರಿಯಂತೆ ಗುಟುರು ಹಾಕುತ್ತಿರುವುದು ಆ ಪಕ್ಷದ ಅಸಲೀಯತ್ತಿಗೆ ಹಿಡಿದಿರುವ ಕೈಗನ್ನಡಿ: ಸದ್ಯ ದೇಶಭಕ್ತರ ಪಕ್ಷದ ಮಾನ ಉತ್ತರ ಕರ್ನಾಟಕ ಸೀಮೆಯ ಹಾದಿಬೀದಿಗಳಲ್ಲಿ ಉರುಳಾಡಲಾರಂಭಿಸಿದೆ.

ಈಗ ಜಮಖಂಡಿ ತಾಲ್ಲೂಕಿನ ತುಂಬಾ ಹರಿದಾಡುತ್ತಿರುವ ಅಶ್ಲೀಲ ವಿಡಿಯೋ ಥರಥರದ ಸಂಚಲನವೆಬ್ಬಿಸಿದೆ. ಯಾಕೆಂದರೆ ಈ ದೃಶ್ಯಾವಳಿಯಲ್ಲಿ ಮುಂದು ಮಧಾರಿ ತವನಪ್ಪ ರಾವಳ ಎಂಬಾತನೇ ಹೀರೋ ಆಗಿ ಮಿಂಚಿದ್ದಾನೆ. ಈತ ಶಾಸಕ ಸಿದ್ದು ಸವದಿಯ ಅತ್ಯಾಪ್ತ ಸ್ನೇಹಿತ. ಸಂಸದ ಪಿ.ಸಿ.ಗದ್ದಿಗೌಡನ ಪರಿಚಾರಕ! ಥೇಟು ಹಾಲಪ್ಪನ ಹಾದಿಯನ್ನೇ ಹಿಡಿದಿರುವ ರಾವಳ ತನ್ನ ಸ್ನೇಹಿತನ ಹೆಂಡತಿಯೊಂದಿಗೇ 'ಖಾಸಗಿ' ಕಾರ್ಯಕ್ರಮ ಹಮ್ಮಿಕೊಂಡು, ಅದರ ವಿಡಿಯೋ ದೃಶ್ಯಾವಳಿಗಳನ್ನು ಕಂಡೋರ ಮೊಬೈಲಿಗೆ ಕಳುಹಿಸಿ ಅಸಹ್ಯದ ಅಲೆ ಎಬ್ಬಿಸಿಬಿಟ್ಟಿದ್ದಾನೆ. ಇದುವರೆಗೆ ಬಂದಿರುವ ಸಕಲ ಕಾಮಸೂತ್ರಗಳ ಒಟ್ಟಾರೆ ಪ್ರಯೋಗದಂತಿರುವ ಈ ವಿಡಿಯೋ ಪಡ್ಡೆಗಳ ಮೊಬೈಲ್‌ಗಳಲ್ಲಿ ಸುಗ್ಗಿಯಂತೆ ಸರಿಯಹತ್ತಿದೆ.

ಈ ಪರಿ ರಾಡಿಯೆಬ್ಬಿಸಿರುವ ರಾವಳ ಸಾಕ್ಷಿಗೆಂಬಂತೆ ಹಿಟ್ಟಿನ ಗಿರಣಿಯಿಟ್ಟುಕೊಂಡು ವ್ಯವಹಾರ ನಡೆಸುತ್ತಿರುವಾತ. ಅಧಿಕೃತವಾಗಿ ಒಬ್ಬಳು ಹೆಂಡತಿ ಹಾಗೂ ಎದೆಮಟ್ಟ ಬೆಳೆದ ಮೂವರು ಮಕ್ಕಳ ತಂದೆಯಾದ ರಾವಳ ಲಾಗಾಯ್ತಿನಿಂದಲೂ ಸೆರಗೆಳೆಯುವ ಚಟ ಬೆಳೆಸಿಕೊಂಡವನು. ವಿಪರೀತ ಹಣ ಮಾಡೋ ಖಯಾಲಿ ಅಂಟಿಸಿಕೊಂಡು, ಬಂದ ಹಣ ಕರಗಿಸಲು ಹಡಬೆ ಹಾದಿಗಳನ್ನು ಕಂಡುಕೊಂಡಿರುವ ಈತ ಅದೊಂದು ರೀತಿಯಲ್ಲಿ ಹೈಟೆಕ್ ಹಾದರವನ್ನೇ ದಂಧೆಯಾಗಿಸಿಕೊಂಡಿದ್ದಾನೆ. ಸಂಸದ ಗದ್ದಿಗೌಡರ, ಶಾಸಕ ಸಿದ್ದು ಸವದಿಯಂಥ ರಾಜಕಾರಣಿಗಳ ಇಷ್ಟಾರ್ಥ ಪೂರೈಸುವುದು ಈತನ ಆಮದನಿಯ ಮೂಲ. ಕಂಡಕಂಡೋರಿಗೆ ಉಂಡೇನಾಮ ತಿಕ್ಕಿ ಅದೆಲ್ಲವನ್ನ ಇಂಥಾ ಲಿಂಕುಗಳಿಂದಲೇ ದಕ್ಕಿಸಿಕೊಳ್ಳುವುದು ರಾವಳನಿಗೆ ಕರತಲಾಮಲಕ. ತೀರಾ ಹಿಟ್ಟಿನ ಗಿರಣಿ ಇಟ್ಟುಕೊಂಡಿರುವ ಈತ 25-30 ಕೋಟಿಗೆ ತೂಗುತ್ತಾನೆಂದರೆ ಈತನ 'ವ್ಯವಹಾರ'ಗಳು ಎಂಥವಿರಬಹುದೋ ಯೋಚಿಸಿ. ರಾವಳ ಜಮಖಂಡಿ ಸುತ್ತಲ ಪ್ರತಿಷ್ಠಿತ ಏರಿಯಾಗಳಲ್ಲಿ ಕೋಟಿ ಸುರಿದು ಬಂಗಲೆಗಳನ್ನು ಕಟ್ಟಿ ಅದನ್ನೆಲ್ಲಾ ಗದ್ದಿಗೌಡರನಂಥವರ ರಾತ್ರಿ ಸೇವೆಗಳಿಗೆಂದೇ ಮೀಸಲಿಟ್ಟಿದ್ದಾನೆ.

ಈ ರೀತಿ ವಾಮಮಾರ್ಗದಿಂದ ಕೋಟ್ಯಾಧೀಶನಾದ ರಾವಳನಿಗೆ ತೀಟೆ-ತೆವಲುಗಳು ವಿಪರೀತವಾಗಿ ಕೆದರಲಾರಂಭಿಸಿದವು. ಇದು ಯಾವ ರೀತಿ ವಿಕೋಪಕ್ಕಿಟ್ಟುಕೊಂಡಿತ್ತೆಂದರೆ, ಸ್ನೇಹಿತರ ಹೆಂಡತಿಯರನ್ನೇ ಪಳಗಿಸಿಕೊಳ್ಳುವಷ್ಟರ ಮಟ್ಟಿಗೆ ರಾವಳ ಕಾಮುಕನಾಗಿ ಬದಲಾದ. ಇಂಥವನಿಗೆ ಕೆಲವರ್ಷಗಳ ಹಿಂದೆ ಪರಿಚಯವಾದವನು ಬನಹಟ್ಟಿಯವನೇ ಆದ ರುದ್ರಪ್ಪ ಮಾಲಾಪುರೆ. ಇವರಿಬ್ಬರ ನಡುವಿನ ಸ್ನೇಹ ಪರಸ್ಪರರ ಮನೆಗೂ ಹೋಗಿ ಬರುವಷ್ಟರಮಟ್ಟಿಗೆ ಬಲಗೊಂಡಿತ್ತು. ಹರುಕು ಬುದ್ಧಿಯ ರಾವಳ ರುದ್ರಪ್ಪನ ಮನೆಯಲ್ಲೇ ಠಿಕಾಣಿ ಹೂಡಲಾರಂಭಿಸಿದ. ಇದಕ್ಕೆ ಕಾರಣ ಸ್ನೇಹಿತ ರುದ್ರಪ್ಪನ ರೂಪವತಿ ಹೆಂಡತಿ!

ಈಕೆಯ ಹೆಸರು ಭಾರತಿ. ಗಂಡ ರುದ್ರಪ್ಪನ ಕುಟುಂಬ ಬಹುಹಿಂದಿನಿಂದಲೂ ನೇಕಾರಿಕೆಯನ್ನೇ ಕಸುಬಾಗಿ ಸ್ವೀಕರಿಸಿತ್ತು, ಆದರ್‍ಯಾಕೋ ಇತ್ತೀಚೆಗೆ ಅದು ಗೋತಾ ಹೊಡೆದಿತ್ತು, ಚುರುಕುತನದ ಭಾರತಿ ಸಂಸಾರ ಭಾರವನ್ನು ಸರಿಪಡಿಸಲು ಟೈಲರಿಂಗ್ ಕೆಲಸ ಶುರುವಿಟ್ಟುಕೊಂಡು ಈ ಭಾಗದಲ್ಲಿ ಬ್ಲೌಸ್ ಭಾರತಿ ಅಂತಲೇ ಹೆಸರಾಗಿದ್ದಳು. ಈ ರೀತಿ ಬಡತನದ ಬೇಗೆಯಲ್ಲಿ ಬೇಯುತ್ತಿದ್ದ ಮೂರು ಮಕ್ಕಳ ತಾಯಿ ಭಾರತಿಯನ್ನು ಸ್ನೇಹಿತನ ಹೆಂಡತಿಯೆಂಬ ಖಬರೂ ಇಲ್ಲದಂತೆ ರಾವಳ ಪಳಗಿಸಿಕೊಳ್ಳಲಾರಂಭಿಸಿದ. ಇದು ಮನೆಯಿಂದ ಲಾಡ್ಜುಗಳವರೆಗೆ ವಿಸ್ತರಿಸಿ ವಿಪರೀತಕ್ಕಿಟ್ಟುಕೊಂಡಿತ್ತು, ಈ ಬಗ್ಗೆ ರುದ್ರಪ್ಪನಿಗೆ ತಿಳಿದರೂ ಕೂಡಾ ಆತ ಏನೂ ಮಾಡಲಾಗದ ಸ್ಥಿತಿ ತಲುಪಿದ.

ಕಳೆದ ಮಾರ್ಚ್ ತಿಂಗಳಲ್ಲಿ ಜಮಖಂಡಿಯ ಪ್ರತಿಷ್ಠಿತ ಜೈನ್ ಲಾಡ್ಜ್‌ನಲ್ಲಿ ತ್ರಿಬಲ್ ಬೆಡ್‌ರೂಂ ಅನ್ನು ಬುಕ್ ಮಾಡಿದ ರಾವಳ ಭಾರತಿಯೊಂದಿಗೆ ಅಹೋರಾತ್ರಿ ಕಾರ್ಯಕ್ರಮ ಹಮ್ಮಿಕೊಂಡಿದ್ದ. ಈ ಸಂದರ್ಭದಲ್ಲಿ ವಿಕೃತ ಬುದ್ಧಿ ಪ್ರದರ್ಶಿಸಿದ ಈತ ಬಹುತೇಕ 'ಭಂಗಿ'ಗಳನ್ನು ವಿಡಿಯೋ ರೆಕಾರ್ಡ್ ಮಾಡಿದ್ದ. ಕೆಲದಿನಗಳ ತರುವಾಯ ಅದನ್ನ ತನ್ನ ಅಡ್ನಾಡಿ ಸ್ನೇಹಿತರಿಗೆ ತೋರಿಸಿ ಅವರ ಮೊಬೈಲುಗಳಿಗೂ ಕಳಿಸಿದ್ದ. ಅದು ಮೆಲ್ಲಗೆ ಜಿಲ್ಲಾದ್ಯಂತ ಪಸರಿಸಿಕೊಂಡಿತು.

ಈ ಘಟನೆಯ ಸಂಬಂಧ ಊರು ತುಂಬಾ ಮಾನ ಹರಾಜಾದರೂ ಬ್ಲೌಸ್ ಭಾರತಿ ತಲೆಕೆಡಿಸಿಕೊಂಡಂತಿಲ್ಲ, ಬದಲಾಗಿ 'ನನ್ನ ಗಂಡನೇ ಚಿತ್ರೀಕರಣ ಮಾಡಿಕೊಂಡ' ಅಂತ ಬಿಡುಬೀಸಾಗಿ ಹೇಳಲಾರಂಭಿಸಿದಳು. ಆಕೆಯಲ್ಲಿ ಹುಡುಕಾಡಿದರೂ ಪಾಪಪ್ರಜ್ಞೆ ಕಾಣಸಿಗುತ್ತಿಲ್ಲ. ಅವಳ ಪರಿಚಿತರೇ ಹೇಳೋ ಪ್ರಕಾರ ಭಾರತಿ ಇಂಥದ್ದಾವುದಕ್ಕೂ ತಲೆಕೆಡಿಸಿಕೊಳ್ಳುವವಳಲ್ಲ.



ಸಿದ್ದು ಸವದಿ

ಇನ್ನೊಂದೆಡೆ ಭಾರತಿಯ ಗಂಡ ರುದ್ರಪ್ಪ ಊರು ಬಿಟ್ಟಿದ್ದಾನೆ. ರಾವಳನ ಕ್ರಿಮಿನಲ್ ಮೈಂಡು, ಬ್ಲಾಕ್‌ಮೇಲ್ ವೃತ್ತಾಂತಗಳ ಅರಿವಿರುವವರು ಆತನೇ ರುದ್ರಪ್ಪನನ್ನು ಹೆದರಿಸಿ ಬೆಂಗಳೂರಿಗಟ್ಟಿದ್ದಾನೆಂದು ಮಾತಾಡಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಪೊಲೀಸರು ಕೂಡಾ ನಿಖರವಾಗಿ ಏನನ್ನೂ ಹೇಳದಿರುವುದು ಆತ ಬದುಕಿದ್ದಾನೆಂಬ ಬಗ್ಗೆಯೇ ಗುಮಾನಿ ಹುಟ್ಟುವಂತೆ ಮಾಡಿದೆ.



ಸಿಪಿಐ ಜೋಗಿನ್

ತವನಪ್ಪ ರಾವಳ ಕಾಮುಕ ಮಾತ್ರವಲ್ಲ, ಪಕ್ಕಾ ವಿಕೃತ ಆಸಾಮಿ. ಭಾರತಿಯಂಥ ಲೆಕ್ಕವಿಲ್ಲದಷ್ಟು ಹೆಂಗಸರನ್ನ ಈತ ಬಲೆಗೆ ಕೆಡವಿಕೊಂಡು ಕಾಡಿಸಿದ ಉದಾಹರಣೆಗಳಿವೆ. ಇಂಥ ಅಡ್ನಾಡಿ ಕೆಲಸಗಳನ್ನೆಲ್ಲ ವಿಡಿಯೋ ರೆಕಾರ್ಡಿಂಗ್ ಮಾಡಿಕೊಂಡು ಸ್ನೇಹಿತರಿಗೆ ತೋರಿಸುವುದು, ಅಶ್ಲೀಲ ಸಂಭಾಷಣೆಗಳನ್ನು ಕೇಳಿಸುವುದು ರಾವಳನ ಹಳೇ ಕಾಯಿಲೆ. ಸದ್ಯ ಭಾರತಿಯೊಂದಿಗಿನ ಭಾನಗಡಿಯನ್ನು ಕೂಡಾ ಈತನೇ ಚಿತ್ರೀಕರಿಸಿದ್ದಾನೆಂಬುದು ಸ್ಪಷ್ಟ ವಿಚಾರ.

ಈ ಹಿಂದೆ ರಾವಳ ದುಡ್ಡಿಲ್ಲದೆ ಬಿಕಾರಿಯಂತಿದ್ದನಲ್ಲಾ? ಆಗಲೂ ಕೂಡ ಸೆರಗೆಳೆಯೋ ಚಾಳಿಗೇನೂ ಬರವಿರಲಿಲ್ಲ. ಹೀಗೆ ಬಿಕಾರಿಯಂತೆ ಹಿಟ್ಟು ರುಬ್ಬುತ್ತಿದ್ದ ರಾವಳನಿಗೆ ಚಂದ್ರಕಾಂತ ಸರಬ ಎಂಬಾತ ಸ್ನೇಹಿತನಾಗಿದ್ದ. ತದನಂತರ ಹಣ ಮಾಡುವ ದಂಧೆ-ಐಡಿಯಾಗಳನ್ನೆಲ್ಲಾ ಕಲಿಸಿಕೊಟ್ಟಿದ್ದೂ ಈತನೇ. ಅದನ್ನ ಸರಿಯಾಗಿ ಕಾರ್ಯರೂಪಕ್ಕೆ ತಂದು ಕೋಟಿ ಕೋಟಿ ಎಣಿಸಿದ ರಾವಳ ಚಂದ್ರಕಾಂತನ ಹೆಂಡತಿಯೊಂದಿಗೇ ಚಕ್ಕಂದವಾಡಲಾರಂಭಿಸಿದ! ಇದಕ್ಕೆಂದೇ ಚಂದ್ರ ಕಾಂತನಿಗೆ ಅಪಾರ್ಟ್‌ಮೆಂಟೊಂದನ್ನು ಇನಾಮಾಗಿ ಕೊಟ್ಟಿದ್ದ!

ಇಂಥ ಹಡೆಬಿಟ್ಟಿ ಕೆಲಸಗಳನ್ನೇ ಹಾಸಿಹೊದೆಯುತ್ತಾ ಬಂದ ರಾವಳ ಅದೆಲ್ಲವನ್ನು ದಕ್ಕಿಸಿಕೊಳ್ಳಲೋಸ್ಕರವೇ ಬಿಜೆಪಿ ಪಕ್ಷವನ್ನು ನೆಚ್ಚಿಕೊಂಡ. ಸಿದ್ದು ಸವದಿಯನ್ನ ವಿಪರೀತ ಓಲೈಸಿಕೊಳ್ಳಹತ್ತಿದ ಈತ ಚುನಾವಣೆ ಸಂದರ್ಭದಲ್ಲಿ ಹಣದ ಹೊಳೆ ಹರಿಸತೊಡಗಿದ. ಸವದಿ ಸಹ ರಾವಳನ ಸೇವೆಗಳಿಂದ ಖುಷಿಯಾದ. ಇವರಿಬ್ಬರ ನೆಂಟಸ್ಥನ ಜಮಖಂಡಿ ಸೀಮೆಯಲ್ಲೆಲ್ಲಾ ಜಾಹೀರಾಗಿರುವ ಸತ್ಯ. ಆದರೆ ರಾವಳನ ಕಾಮುಕತನ ಯಾವಾಗ ಹೊರಬಿತ್ತೋ ಆವಾಗಿನಿಂದಲೇ ಸವದಿ ಉಲ್ಟಾ ಹೊಡೆಯಲಾರಂಭಿಸಿದ. 'ರಾವಳನಿಗೂ ಬಿಜೆಪಿಗೂ ಸಂಬಂಧವೇ ಇಲ್ಲ' ಅಂತ ಒದರಿದ ಈತ ಜೋಕರ್‌ನಂತೆಯೇ ಕಾಣಹತ್ತಿದ್ದಾನೆ. ಈತನ ಮಾತಿಗೆ ಬಿಜೆಪಿ ನಗರ ಘಟಕದ ಅಧ್ಯಕ್ಷ ಬಸವಯ್ಯನೆಂಬ ಕಿಸಬಾಯಿದಾಸನೂ ಅನುಮೋದಿಸಿ ಯಡವಟ್ಟು ಮಾಡಿಕೊಂಡಿದ್ದಾನೆ.

ಇದೆಲ್ಲ ಏನೇ ನಡೆದರೂ ರಾವಳನ ಕಾಮುಕತನದ ವಿಡಿಯೋದಿಂದಾಗಿ ರಬಕವಿ-ಬನಹಟ್ಟಿಯ ಜನ ರೊಚ್ಚಿಗೆದ್ದಿದ್ದಾರೆ. ಪಡ್ಡೆಗಳೊಂದಷ್ಟು ಮಂದಿ ಈ ಅಶ್ಲೀಲ ದೃಶ್ಯಗಳನ್ನು ಚಪ್ಪರಿಸುತ್ತಿದ್ದರೆ ಮಾನವಂತರು ತೀರಾ ಸಿಡಿಮಿಡಿಗೊಂಡಿದ್ದಾರೆ. ಇದೆಲ್ಲವನ್ನು ಮನಗಂಡ ಸಿದ್ದು ಸವದಿ ರಾವಳನಿಗೆ ಊರು ಬಿಡುವಂತೆ ಸೂಚಿಸಿದ್ದನಾದರೂ ಡಿವೈಎಸ್ಪಿ ರವಿನಾರಾಯಣ, ಸಿಪಿಐ ಗೋಪಾಲ ಜೋಗಿನರೊಂದಿಗೆ ಸೇರಿ ರಾವಳನನ್ನು ಬೆಳಗಾವಿಯ ಅಡ್ಡಾದಿಂದಲೇ ಹಿಡಿದು ತಂದು ಜೈಲಿಗೆ ಗದುಮಿದ್ದಾರೆ. ಆದರೆ ಇಲ್ಲೂ ಕೂಡ ಗೇಮ್ ನಡೆದಿರುವ ಗುಮಾನಿಗಳಿವೆ. ಯಾಕೆಂದರೆ ಭಾರತಿ ಅಥವಾ ಅವಳ ಗಂಡನ ಕಡೆಯಿಂದ ದೂರು ಪಡೆದು ರಾವಳನನ್ನು ಬಂಧಿಸಿಲ್ಲ. ಇದು ರಾವಳನಿಗೆ ಬಚಾವಾಗಲು ಸಹಕರಿಸುವ ಸ್ಕೆಚ್ಚೆಂದೇ ಜನ ಮಾತಾಡಿಕೊಳ್ಳುತ್ತಿದ್ದಾರೆ.

ತವನಪ್ಪ ರಾವಳ ಹೆಚ್ಚುಕಡಿಮೆ ಉಮೇಶ್ ಶೆಟ್ಟಿಯಂಥ ವಿಕೃತ ಕ್ರಿಮಿಗೇ ಸೆಡ್ಡು ಹೊಡೆಯೋ ಕ್ಯಟಗರಿಯವನು. ಬಡತನವೋ, ಬಯಕೆಯೋ ಅಂತೂ ಸಾಕಷ್ಟು ಹೆಂಗಳೆಯರು ಇವನ ತೆವಲಿಗೆ ಬಲಿಯಾಗಿದ್ದಾರೆ. ಸರಿಯಾದೊಂದು ತನಿಖೆ ನಡೆಸಿ ತಕ್ಕ ಶಿಕ್ಷೆ ವಿಧಿಸಿದರೆ ಇನ್ನೊಂದಷ್ಟು ಅಮಾಯಕ ಹೆಂಗಸರ ಮಾನ-ಬದುಕುಗಳಾದರೂ ಬಚಾವಾದಾವು.

ಪೊಲೀಸ್ ಇಲಾಖೆಯಿಂದ ಈ ರೀತಿಯ ನಿಷ್ಠುರ ಕ್ರಮವನ್ನು ನಿರೀಕ್ಷಿಸಬಹುದೇ?

• ವಿ.ಪಿ.ಮೇಘರಾಜ್

## ಬಡ್ಡಿ ದುಡ್ಡಿಗೆ ಬದುಕೇ ಚೆಂದಿ!

ತವನಪ್ಪ ರಾವಳ ನೇಕಾರ ಸಮುದಾಯದವನು. ರಬಕವಿ-ಬನಹಟ್ಟಿ ಭಾಗದಲ್ಲಿ ಈ ಸಮುದಾಯದ ಪ್ರಾಬಲ್ಯ ಗಣನೀಯವಾಗಿದೆ. ಇವರಲ್ಲಿ ಬಹುತೇಕರು ನೇಕಾರಿಕೆಯನ್ನೇ ನೆಚ್ಚಿಕೊಂಡಿದ್ದಾರೆ. ಆದರೆ ಇತ್ತೀಚಿನ ವಹಿವಾಟಿನ ಏರಿಳಿತ ಎಲ್ಲರನ್ನೂ ಹಿಂಡಿಹಿಪ್ಪೆ ಮಾಡಿವೆ.

ಅಡ್ನಾಡಿ ರಾವಳ ತನ್ನದೇ ಜನಾಂಗದವರ ತಲ್ಲಣಗಳನ್ನು ತೀಟೆ-ತೆವಲಿಗೆ ಬಳಸಿಕೊಂಡಿದ್ದು ಮಾತ್ರ ತೀರಾ ಅಸಹ್ಯದ ವಿಚಾರ. ಕಷ್ಟದಲ್ಲಿರುವ ನೇಕಾರರಿಗೆ 'ಬಡ್ಡಿಗೆ' ಹಣ ಕೊಡಲಾರಂಭಿಸಿದ ಈತ ಎಲ್ಲರನ್ನೂ ಕಾಡಿಸಲಾರಂಭಿಸಿದ. ಚೆಂದನೆಯ ಹೆಂಗಸರು, ಹುಡುಗಿಯರಿರುವ ಕುಟುಂಬಕ್ಕೆ ಕೊಂಚ ಧಾರಾಳವಾಗೇ ಹಣ ಕೊಟ್ಟು ಕೆಡವಿಕೊಳ್ಳುತ್ತಿದ್ದ.

ಪರಿಸ್ಥಿತಿ ಎಷ್ಟು ಹೀನಾಯವಾಗಿತ್ತೆಂದರೆ ನೇಕಾರ ಸಮುದಾಯದ ಹಿರೀಕರನೇಕರು ತಮ್ಮ ಹೆಣ್ಮಕ್ಕಳನ್ನ ರಾವಳ ಕಾಡಿಸುತ್ತಿದ್ದರೂ ಪ್ರತಿಭಟಿಸುವ ಶಕ್ತಿಯನ್ನೇ ಕಳಕೊಂಡಿದ್ದರು. ಅದಕ್ಕೆ ಕಾರಣ ಬಡ್ಡಿಯ ಮುಲಾಜು. ಇದನ್ನೇ ಬಳಸಿಕೊಂಡು ಬೇಕಾಬಿಟ್ಟಿ ಆಟವಾಡಿದ ಈತ ಸದ್ಯ ಸರಳ ಹಿಂದಿದ್ದಾನೆ. ಈತನಿಗೆ ಸರಿಯಾದ ಶಿಕ್ಷೆ ವಿಧಿಸದೆ ಬಿಟ್ಟು ಕಳಿಸಿದರೆ ನೊಂದ ಜನರಿಗೆ ಮಹಾಮೋಸ ಮಾಡಿದಂತಾಗುತ್ತದೆ.

# ಯಡ್ಡಿ ಸರ್ಕಾರದ ಭೂದಾಹ

# ಹಂಪಿಯಲ್ಲಿ ಅನಧಿಕೃತ ರೆಸಾರ್ಟ್

ಗಣಿಕಳ್ಳರ ಗ್ಯಾಂಗ್..




ಆನಂದ್ ಸಿಂಗ್ ಸಂಬಂಧಿ ಅಕ್ರಮವಾಗಿ ಕಟ್ಟಿಸಿರುವ ರೆಸಾರ್ಟ್



ಅದೆಂತಹ ದುರಂತ ಘಳಿಗೆಯಲ್ಲಿ ಬಿಜೆಪಿ ಸರ್ಕಾರ ರಾಜ್ಯದ ಅಧಿಕಾರ ಹಿಡಿಯಿತೋ ಗೊತ್ತಿಲ್ಲ, ದಿನಕ್ಕೊಂದು ಹಗರಣಗಳು ಕರ್ನಾಟಕದ ವರ್ಚಸ್ಸನ್ನು ಇನ್ನಿಲ್ಲದಂತೆ ಹೈರಾಣಗೊಳಿಸುತ್ತಿವೆ. ಭ್ರಷ್ಟಾಚಾರ ಹರಡಿರುವ ಪರಿಗೆ ಅಭಿವೃದ್ಧಿ ಬೆದರಿ ಯಡ್ಡಿಯ ಬಾಯಿ ಸೇರಿದಂತಿದೆ. ದಿನಬೆಳಗಾದರೆ ಸಾಕು ಯಾವುದೋ ಸಚಿವರದ್ದೋ, ಎಂಎಲ್‌ಎಯದ್ದೋ ಹೆಸರು ಹೊಚ್ಚಹೊಸ ಹಗರಣದೊಂದಿಗೆ ತಳುಕು ಹಾಕಿಕೊಂಡಿರುವ ಸುದ್ದಿ ಕಿವಿಗೆ ರಾಚುತ್ತದೆ. ಇವತ್ಯಾರ ಸರದಿ ಅಂತ ಜನ ಕಾಯುವಂತಾಗಿದ್ದರೆ, 'ಮೇರಾ ನಂಬರ್ ಕಬ್ ಆಯೇಗಾ' ಅಂತ ಹಗರಣದ ಸರ್ಟಿಫಿಕೇಟ್ ಹಿಡಿದ ಸಚಿವ ಮಹಾಶಯರುಗಳು ಪರೇಡ್ ನಡೆಸುವಂತಾಗಿದೆ. ಆಪರೇಷನ್ ಅನ್ನೋ ಕೆಸರಿನ ಕಮಲದ ಹೆಸರಿನಿಂದ ಬಂದಿರುವ ಈ ಸರ್'ಖಾರ' ಬಹುಶಃ ಕರ್ನಾಟಕ ರಾಜಕೀಯ ಇತಿಹಾಸದ ಪರಮ ಕೇವಲ ಸರ್ಕಾರವಿರಬೇಕೇನೋ.

ರಾಜ್ಯದ ಇಂಚಿಂಚು ನೆಲವನ್ನು ಹೊಂಚಿ ತಿನ್ನುವ ಅಜೆಂಡಾ ಹೊತ್ತ ಯಡ್ಡಿ ಪಾಳಯದ ಮತ್ತೋರ್ವ ಶಾಸಕನ ಹೆಸರು ಕೇವಲ(!) ಒಂದೂವರೆ ಎಕರೆ ಜಮೀನಿನ ಅನಧಿಕೃತ ಒತ್ತುವರಿಯೊಂದಿಗೆ ಜೋತುಬಿದ್ದಿದೆ. ಅದು ಕೂಡ ನಮ್ಮದೆಂದು ಎದೆ ತಟ್ಟಿ ಹೇಳಲು ಉಳಿದಿರುವ ಒಂದೇ ಒಂದು ಹಂಪಿಯ ಭೂಮಿಯಲ್ಲಿ. ಬೆಂಗಳೂರಿನಲ್ಲಿ ಇರುವ ವಿಧಾನಸೌಧ ಈಗ ಹೆಸರಿಗೆ ಮಾತ್ರ. ಸರ್ಕಾರದ ಅಧಿಕಾರ ಬಳ್ಳಾರಿಗೆ ಶಿಫ್ಟಾಗಿ ಅದ್ಯಾವ ಕಾಲವೋ ಆಗಿಹೋಗಿದೆ. ಅಂತಹ ಪವರ್‌ಫುಲ್ ಮಣ್ಣಿನ ವಿಜಯನಗರ ಕ್ಷೇತ್ರದ ಎಂಎಲ್‌ಎ ಆನಂದ್ ಸಿಂಗ್ ಸಂಬಂಧಿಯೊಬ್ಬರು ಹಂಪಿಯಲ್ಲಿ ನಿರ್ಮಿಸಿರುವ ಭವ್ಯ ರೆಸಾರ್ಟ್ ಇರುವುದು ನಿಷೇಧಿತ 'ಕೋರ್ ಜೋನ್'ನ ವಲಯದಲ್ಲಿ.

## ಗಣಿ ಮಾಫಿಯಾದ ಗೂಡಿಂದ

ವಿಜಯನಗರ ಕ್ಷೇತ್ರದ ಶಾಸಕನಾಗಿರುವ ಬಿ.ಎಸ್. ಆನಂದ್ ಸಿಂಗ್ ಗಣಿಧಣಿಗಳ ಆಪ್ತ ವಲಯದಲ್ಲಿರುವುದು ಮಾತ್ರವಲ್ಲದೆ ಸ್ವತಃ ಶ್ರೀ ಬಾಲಾಜಿ ಮಿನರಲ್ಸ್ ಎಂಬ ಗಣಿ ಕಂಪನಿಯ ಮಾಲೀಕರಾಗಿದ್ದು, ಐಎಲ್‌ಸಿ ಐರನ್ ಅಂಡ್ ಸ್ಟೀಲ್ ಕಂಪನಿಯ ಹೆಚ್ಚುವರಿ ನಿರ್ದೇಶಕರಾಗಿದ್ದಾರೆ. ಬಳ್ಳಾರಿ ಮಣ್ಣಿಗೆ ಚೀನಾದಲ್ಲಿ ಬೇಡಿಕೆ ಬಂದ ದಿನದಿಂದ, ಗಣಿ ಧೂಳಿನ ಮರೆಯಲ್ಲಿ ನಡೆಯದ ಅಕ್ರಮಗಳೇ ಇಲ್ಲ. ಕಾಯ್ದೆ, ಕಾನೂನುಗಳೆಲ್ಲ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿ ದೇಶದ ಸಂಪತ್ತು ನಗ್ನವಾಗಿ ಸಾಗರದಲ್ಲಿ ತೇಲುತ್ತಾ ಹೋಗುತ್ತಿದೆ. ಒಂದಲ್ಲ ಅಂತ ಎರಡೆರಡು ಮೈನಿಂಗ್ ಕಂಪನಿಗಳಲ್ಲಿ ಬೇರು ಬಿಟ್ಟುಕೊಂಡಿರುವ 'ಶ್ರೀಮಾನ್' ಆನಂದ್ ಸಿಂಗ್‌ರ ಬೆನ್ನಿನಲ್ಲೂ ಹತ್ತಾರು ಅಕ್ರಮ ಅಧ್ಯಾಯಗಳು ಮುದ್ರಣಗೊಂಡಿವೆ.

ಗಣಿ ಮತ್ತು ಖನಿಜ ಕಾಯ್ದೆ 1957 ರ ಸೆಕ್ಷನ್ 8(2) ರ ಪ್ರಕಾರ ಯಾವುದೇ ಒಂದು ಕಂಪನಿಗೆ ಗಣಿ ಪರವಾನಗಿಯನ್ನು 20 ವರ್ಷಗಳಿಗಿಂತ ಹೆಚ್ಚಿನ ಕಾಲಾವಧಿಗೆ ವಿಸ್ತರಿಸಿ ನವೀಕರಿಸಬಾರದು ಎಂದು ಉಲ್ಲೇಖಿಸಲಾಗಿದೆಯಾದರೂ ಈ ನಿಯಮಕ್ಕೆ ವ್ಯತಿರಿಕ್ತವಾಗಿ ಆನಂದ್ ಸಿಂಗ್‌ನ ಶ್ರೀ ಬಾಲಾಜಿ ಮಿನರಲ್ಸ್ ಕಂಪನಿಗೆ 30 ವರ್ಷಗಳ ಪರವಾನಗಿ ನೀಡಲಾಗಿತ್ತು, ಮೊದಲ ಹಂತದಲ್ಲಿ 1987 ರಿಂದ 1997 ರ 10 ವರ್ಷಗಳವರೆಗೆ ಪರವಾನಗಿ ನೀಡಲಾಗಿದ್ದು, ನಂತರ 1997 ರಿಂದ 2007 ರವರೆಗೆ ಅಂದರೆ ಒಟ್ಟಾರೆ 20 ವರ್ಷಗಳವರೆಗೆ ವಿಸ್ತರಿಸಲಾಗಿತ್ತು, ಆದರೆ, ಈ ಮೊದಲಿನ 1987 ರಿಂದ 1997 ರವರೆಗಿನ ಪರವಾನಗಿಯ ಉಲ್ಲೇಖವೇ ಇಲ್ಲದಂತೆ 2007 ರಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು 1999 ರಿಂದ 20 ವರ್ಷಗಳವರೆಗೆ ಪರವಾನಗಿ ಎಂಬ ವಿಚಿತ್ರ ಆದೇಶವನ್ನು ಹೊರಡಿಸಿ ಒಟ್ಟಾರೆ 30 ವರ್ಷಗಳವರೆಗೆ ಶ್ರೀ ಬಾಲಾಜಿ ಮಿನರಲ್ಸ್ ಕಂಪನಿಗೆ ಭೂಗರ್ಭದ ಲೂಟಿ ಹೊಡೆಯಲು ಅನುಮತಿ ನೀಡಿತ್ತು, ಇದರ ಹಿಂದೆ ನಡೆದಿರಬಹುದಾದ ಕತ್ತಲಾಟದತ್ತ ಬೆಳಕು ಚೆಲ್ಲುವ ಅಗತ್ಯವೇ ಇಲ್ಲ.

ರಾಜ್ಯ ಗಣಿ ಮತ್ತು ಭೂಗರ್ಭ ಇಲಾಖೆಯ ಪೇಪರುಗಳಲ್ಲಿರುವ ಅಂಕಿ ಅಂಶಗಳನ್ನು ನಂಬಬಹುದಾದರೆ ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆ ನಡೆಸಲು ನೀಡಿರುವ ಪರವಾನಗಿಗಳ ಸಂಖ್ಯೆ 59. 2006 ರ ಮಾರ್ಚ್‌ನ ಸಮೀಕ್ಷೆಯಂತೆ ನಮ್ಮ ದೇಶದಿಂದ ಸುಮಾರು 8,600 ಕೋಟಿ ಮೌಲ್ಯದ ಕಬ್ಬಿಣದ ಅದಿರು ರಫ್ತಾಗುತ್ತಿದ್ದರೆ, ಅದರಲ್ಲಿ ಕರ್ನಾಟಕದ ಪಾಲು ಶೇ. 21 ರಷ್ಟು ಅಂದರೆ ಹೆಚ್ಚುಕಡಿಮೆ 1800 ಕೋಟಿಗಳಷ್ಟು. ಆದರೆ ಇದೆಲ್ಲ ಜನರ ಮುಂದಿಡುವ ನಂಬರ್‌ಗೇಮ್‌ಗಳಷ್ಟೇ. ಅಲ್ಲಿ ನಡೆಯುವ ವಹಿವಾಟಿನ ಮೊತ್ತವನ್ನು ಅರಗಿಸಿಕೊಳ್ಳುವಷ್ಟು ಶಕ್ತಿ 'ಆಮ್ ಆದ್ಮಿ'ಗಿಲ್ಲ ಎಂಬುದು 2010 ರ ಮಾರ್ಚ್ 20 ರಂದು ಬೇಲಿಕೇರಿಯಲ್ಲಿ ಸೀಜ್ ಆದ ಅನಧಿಕೃತ ಕಬ್ಬಿಣ ಅದಿರು ಕೂಗಿ ಕೂಗಿ ಹೇಳುತ್ತದೆ. ಅವತ್ತು ಅಲ್ಲಿ ಲೋಕಾಯುಕ್ತದವರು ವಶಪಡಿಸಿಕೊಂಡ ಸುಮಾರು 400 ಕೋಟಿ ಬೆಲೆಬಾಳುವ ಕಬ್ಬಿಣದ ಅದಿರು ಸಾಗಾಣಿಕೆಗೆ ನಯಾಪೈಸೆಯ ಪರವಾನಗಿಯನ್ನು ತೆಗೆದುಕೊಂಡಿರಲಿಲ್ಲ, ಅದರಲ್ಲಿ ಆನಂದ್ ಸಿಂಗ್ ಒಡೆತನದ ಕಂಪನಿಯ ಪಾಲೂ ಸಾಕಷ್ಟಿತ್ತು.

ಇನ್ನು ಈ ಆನಂದ್ ಸಿಂಗ್‌ರ ಶ್ರೀ ಬಾಲಾಜಿ ಮೈನಿಂಗ್ ಕಂಪನಿಯು ಎಂ.ಎಸ್.ಪಿ.ಎಲ್. ಎಂಬ ಮತ್ತೊಂದು ಕಂಪನಿಗೆ ನೀಡಲಾಗಿದ್ದ ವ್ಯಾಸನಕೆರೆ ವ್ಯಾಪ್ತಿಯ ಜಾಗದಲ್ಲಿ ಅಕ್ರಮಗಣಿಗಾರಿಕೆಯನ್ನು ನಡೆಸಲು ಹೋಗಿ ತಕ್ಕ ಶಾಸ್ತಿಯನ್ನು ಅನುಭವಿಸಿದ್ದು ಮಾತ್ರವಲ್ಲ ಆನಂದ್ ಸಿಂಗ್‌ರ ವಿರುದ್ಧ 25 ಆಗಸ್ಟ್ 2008 ರಂದು ದೂರನ್ನು ದಾಖಲಿಸಲಾಗಿತ್ತು, ಹಣ ಮತ್ತು ಅಧಿಕಾರದ ಮುಂದೆ 'ನ್ಯಾಯ' ಎಂಬ ಪದವೇ ಗಣಿಯ ಆಳದಲ್ಲೆಲ್ಲೋ ಹೂತುಹೋಗಿದೆಯೇನೋ ಎಂಬಂತಹ ಸ್ಥಿತಿಯಲ್ಲಿ ಇಂತಹ ಕಂಪ್ಲೇಂಟುಗಳು ಜಸ್ಟ್ ಟೈಮ್ ವೇಸ್ಟ್ ಅಷ್ಟೆ.

## ವಿಜಯನಗರದಲ್ಲಿ ರಜಪೂತರ ದರ್ಬಾರು


ಯಡಿಯೂರಪ್ಪ ಹಸಿರು ಶಲ್ಯದ ಕೆಳಗೆ ಪ್ರಮಾಣವಚನ ಓದಿದ್ದರ ಪರಿಣಾಮವಿರಬೇಕು ಈ ಸರ್ಕಾರಕ್ಕೆ ಭೂಮಿಯ ಮೇಲೆ ಎಲ್ಲಿಲ್ಲದ ಪ್ರೀತಿ. ಸ್ವತಃ ಮುಖ್ಯಮಂತ್ರಿಯೇ ಭೂ ಹಗರಣಗಳ ಡೀನೋಟಿಫಿಕೇಶನ್ ಎಪಿಸೋಡ್‌ನಲ್ಲಿ ಮಿಂಚುತ್ತಿರಬೇಕಾದರೆ ಶಾಸಕರು, ಸಚಿವರುಗಳು ಸುಮ್ಮನಿದ್ದಾರೆಯೇ? ಕನಿಷ್ಠ ಇತಿಹಾಸದ ಬೆಲೆಯನ್ನು ಅರಿಯದಷ್ಟು ಭೂದಾಹಿಯಾ ಈ ಸರ್ಕಾರ ಎಂಬ ಅನುಮಾನವನ್ನು 90 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಶಾಸಕ ಆನಂದ್ ಸಿಂಗ್‌ನ ಸಂಬಂಧಿಯ ರೆಸಾರ್ಟ್ ಹುಟ್ಟಿಸುತ್ತದೆ.



1986 ರಲ್ಲಿ ವಿಶ್ವಸಂಸ್ಥೆಯ 'ವಿಶ್ವ ಪಾರಂಪರಿಕಾ ಪಟ್ಟಿ'ಯಲ್ಲಿ ಸ್ಥಾನ ಪಡೆದ ನಂತರ ಹಂಪಿಯ ಏಳು ಕಿಲೋಮೀಟರ್ ವ್ಯಾಪ್ತಿಯನ್ನು ಕೋರ್ ಜೋನ್ ಎಂದು ಗುರುತಿಸಿ ಅದನ್ನು ಹಂಪಿ ವಿಶ್ವ ಪಾರಂಪಾರಿಕ ಪ್ರದೇಶದ ನಿರ್ವಹಣಾ ವಲಯ (HWHAMZ) ದ ಒಡೆತನಕ್ಕೆ ಒಪ್ಪಿಸಲಾಗಿದೆ. ನಂತರದ ಮೂರು ಕಿಲೋಮೀಟರ್ ವ್ಯಾಪ್ತಿಯನ್ನು ತಟಸ್ಥ ಪ್ರದೇಶ ಎಂದು ಗುರುತಿಸಲಾಗಿದೆ. ಈ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಅನಧಿಕೃತ ಒತ್ತುವರಿ ಅಥವಾ ಕಟ್ಟಡ ನಿರ್ಮಾಣಗಳನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲಾಗಿರುತ್ತದೆ. ಆದರೆ ಆನಂದ್ ಸಿಂಗ್‌ನ ಸಂಬಂಧಿ ಧರ್ಮೇಂದ್ರ ಸಿಂಗ್ ಎಂಬುವವರಿಗೆ ಈ ವ್ಯಾಪ್ತಿಯಲ್ಲಿ ರೆಸಾರ್ಟ್ ನಿರ್ಮಿಸಲು ಅನುಮತಿ ನೀಡಿರುವ ಎಚ್.ಡಬ್ಲ್ಯೂ.ಎಚ್. ಎ.ಎಂ. ಝಡ್‌ನ ಕ್ರಮ ಸ್ಥಳೀಯರ ಹಾಗೂ ಇತಿಹಾಸಕಾರರ ಆರೋಪಕ್ಕೆ ಗುರಿಯಾಗಿದೆ.

ಕಳೆದ ತಿಂಗಳಷ್ಟೇ ಉದ್ಘಾಟನೆಯಾದ ಈ ರೆಸಾರ್ಟ್ ಸುಮಾರು ಒಂದೂವರೆ ಎಕರೆ ಭೂಮಿಯನ್ನು ಒಳಗೊಂಡಿದ್ದು ಕಮಲಾಪುರದ ಬಳಿ ನಿರ್ಮಿಸಲಾಗಿದೆ. ಇದಕ್ಕಿಂತ ದೊಡ್ಡ ದುರಂತವೆಂದರೆ ಈ ರೆಸಾರ್ಟ್ ತಲೆ ಎತ್ತಿರುವ ಸ್ಥಳದಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಶಿಲಾ ಶಾಸನಗಳಿದ್ದು, ಕೇವಲ ರೆಸಾರ್ಟ್‌ಗೆ ಜಾಗ ಮಾಡಿಕೊಡಲು ಅವುಗಳನ್ನೆಲ್ಲ ಸ್ಥಳಾಂತರಿಸಲಾಗಿರುವ ಅನುಮಾನ ಅನೇಕ ಇತಿಹಾಸಕಾರರು ಹಾಗೂ ಸಂಶೋಧಕರನ್ನು ಕಾಡುತ್ತಿದೆ. ಸುಮಾರು ವರ್ಷಗಳಿಂದ ಆ ಸ್ಥಳದಲ್ಲಿ ವಾಸವಿರುವ ಜನ ಸಣ್ಣ ಮನೆಯೊಂದನ್ನು ನಿರ್ಮಿಸಿಕೊಳ್ಳಲು ಮುಂದಾದರೂ ಕಾನೂನಿನ ಮಂತ್ರ

ಗಣಿದುಡ್ಡಿನಲ್ಲಿ ಧರ್ಮಸ್ಥಳಕ್ಕೊಂದು ಆನೆ ನೀಡಿದ ಸಿಂಗ್...



ಪಠಿಸುವ ಆಡಳಿತ ವರ್ಗ ಇಂತಹ ಬೃಹತ್ ರೆಸಾರ್ಟ್ ನಿರ್ಮಾಣಕ್ಕೆ ಅನುವು ಮಾಡಿಕೊಟ್ಟಿರುವುದು ಸ್ಥಳೀಯರಲ್ಲಿ ಆಕ್ರೋಶವನ್ನು ಹುಟ್ಟಿಸಿದೆ. ಸೂಕ್ತ ದಾಖಲಾತಿಗಳೊಂದಿಗೇ ಲೋಕಾಯುಕ್ತರನ್ನು ತಟ್ಟಿರುವ ಸ್ಥಳೀಯರ ಪ್ರಶ್ನೆಗಳಿಗೆ ಉತ್ತರಿಸಬೇಕಾದ ಆಡಳಿತ ವರ್ಗದ ಅಧಿಕಾರಿಗಳು ಒತ್ತುವರಿಯ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲ ಅಂತ ಗಾಳಿಯಲ್ಲಿ ಗುಂಡು ಹಾರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಯಡ್ಡಿ ಸರ್ಕಾರ ಅತ್ತ ಅರಬ್ಬೀ ಸಮುದ್ರಕ್ಕೋ ಇಲ್ಲ ಇತ್ತ ಬಂಗಾಳ ಕೊಲ್ಲಿಗೋ ಹಾರಿಕೊಳ್ಳುವವರೆಗೆ ಅಧಿಕಾರಿಗಳಿಗೆ ಇಂತಹ ಒತ್ತುವರಿಯ ಬಗ್ಗೆ ಮಾಹಿತಿ ತಿಳಿಯುವುದಿಲ್ಲ ಅನ್ನಿಸುತ್ತೆ.

ಜಮೀನಿನ ವಿವಾದವೇ ಕಾವು ಹೆಚ್ಚಿಸಿಕೊಳ್ಳುತ್ತಿರುವಾಗ ಆ ರೆಸಾರ್ಟ್‌ನ ವಿನ್ಯಾಸವೂ ಆಕ್ಷೇಪಗಳಿಗೆ ಗುರಿಯಾಗಿದೆ. ವಿಜಯನಗರ ಸಾಮ್ರಾಜ್ಯದ ಕೇಂದ್ರವಾಗಿದ್ದ ಹಂಪಿಗೆ ತನ್ನದೇ ಆದ ಸಾಂಸ್ಕೃತಿಕ ಹಿನ್ನೆಲೆ ಇದೆ. ಅದಕ್ಕೊಂದಷ್ಟು ಸ್ವಂತಿಕೆ ಇದೆ. ಆದರೆ ಶಾಸಕರ ಸಂಬಂಧಿ ನಿರ್ಮಿಸಿರುವ ರೆಸಾರ್ಟ್ ಉತ್ತರ ಭಾರತದ ರಜಪೂತರ ಶೈಲಿಯಲ್ಲಿರುವುದು ಮಾತ್ರವಲ್ಲ ರಜಪೂತ್ ಫೋರ್ಟ್ ಎಂಬ ಹೆಸರನ್ನೆ ಹೊಂದಿದೆ. ಅಲ್ಲಿಗೆ ವ್ಯವಹಾರದ ಮುಂದೆ ಈ ಮಂದಿಗೆ ಯಾವುದೂ ಬೇಡ; ತೋರಿಕೆಗೆ ಮಾತ್ರ ಸಾಂಸ್ಕೃತಿ, ಧರ್ಮ ಅನ್ನೋ ಪದಗಳನ್ನು ಬಡಬಡಿಸುತ್ತಾರೆ ಎಂಬುದು ಖಾತ್ರಿಯಾಯ್ತು. ಇಂತಹ ನೂರಾರು ರೆಸಾರ್ಟ್‌ಗಳು ಸಾಂಸ್ಕೃತಿಕ ಹಿನ್ನೆಲೆಯಿರುವ ಹಂಪಿಯ ಸುತ್ತ ಮೈಚೆಲ್ಲಿಕೊಂಡಿರುವುದು ದುರಂತವೇ ಸರಿ.

## ರೆಸಾರ್ಟ್‌ನಲ್ಲಿ ಗಾಮನಿಯರು

ಹಂಪಿಯ ರೆಸಾರ್ಟ್‌ಗಳಿಗೂ, ವಾರಾಂತ್ಯದಲ್ಲಿ ಬೆಂಗಳೂರಿನಿಂದ ಹೊರಡುವ ಇನೋವಾ ಕಾರುಗಳಿಗೂ ಮಸ್ತ್ ಮಸ್ತ್ ಸಂಬಂಧವಿದೆ. ಶುಕ್ರವಾರದ ಸಂಜೆ ಬೆಂಗಳೂರಿನ ಬಳ್ಳಾರಿ ರಸ್ತೆಯಲ್ಲಿ ಹಾದುಹೋಗುವ long trip ಕಾರುಗಳಿಗೆ ಕೈ ಹಾಕಿ ಒಳ ಇಣುಕಿದರೆ, ಹಲವು ಹತ್ತಾದರೂ ಕಿರುತರೆ ನಟಿಯರ ಇಲ್ಲವೆ ಚಲನಚಿತ್ರಗಳ ಸೈಡ್ ಆರ್ಟಿಸ್ಟ್‌ಗಳ ಮುಖ ಕಣ್ಣಿಗೆ ಬೀಳುವುದು ಗ್ಯಾರಂಟಿ. ಹಾಗೆ ಹೊರಟ ಕಾರುಗಳ ಗಾಲಿಗಳಿಗೆ ಬ್ರೇಕ್ ಅಂತ ಬೀಳುವುದು ಅದೇ ಹಂಪಿ ರೆಸಾರ್ಟ್‌ಗಳ ಬಾಗಿಲ ಮುಂದೆ. ಇಂತಿಷ್ಟು ಅಂತ ಭರ್ಜರಿ ಅಮೌಂಟನ್ನು ಫಿಕ್ಸ್ ಮಾಡಿಕೊಂಡು ಹೊರಡುವ ಇಂತಹ ಟೀಮು ಅಲ್ಲಿ ಗಣಿ ಪಾಳಯದ ಮಂದಿಗೆ ತಮ್ಮಿಂದಾದ ಸೇವೆ ಮಾಡಿ ವಾಪಸಾಗುವುದು ರೊಟೀನಾಗಿದೆ.

ಇಂತಹ ಭಯಂಕರ ಹಿನ್ನೆಲೆಯುಳ್ಳ ರೆಸಾರ್ಟ್‌ವೊಂದಕ್ಕೆ ಹಂಪಿಯ ನಿಷೇಧ ಸ್ಥಳದಲ್ಲಿ ಅವಕಾಶ ಕಲ್ಪಿಸುವುದೂ ಮತ್ತು ಆ ರೆಸಾರ್ಟ್‌ನ ಮಾಲೀಕ ಭ್ರಷ್ಟ ಲೇಬಲ್ ಅಂಟಿಸಿಕೊಂಡಿರುವ ಬಿಜೆಪಿ ಸರ್ಕಾರದ ಶಾಸಕನೊಬ್ಬನ ಸಂಬಂಧಿಯಾಗಿರುವುದೂ ಹೊಸ ಅಧ್ಯಾಯವೊಂದರ ಪ್ರಾರಂಭವಾಗಿದೆ.

## 'ಗರೀಬಿ' ನಾಡಲ್ಲಿ 'ಐಷಾರಾಮಿ' ಜೀವನ

ಕರ್ನಾಟಕದ ಅಷ್ಟೂ ಸಂಪತ್ತನ್ನು ತಕ್ಕಡಿಯ ಒಂದು ಕಡೆಗಿಟ್ಟು, ಬಳ್ಳಾರಿಯ ಸಂಪತ್ತನ್ನು ಮತ್ತೊಂದು ಕಡೆಗಿಟ್ಟರೆ, ಬಳ್ಳಾರಿ ಭಾಗವೇ ತುಸು ಕೆಳಗಿಳಿದಿರುತ್ತದೆ. ಆದರೆ ಸಂಪತ್ತು ಕೆಲವರ ಬಳಿ ಮಾತ್ರ ಕೇಂದ್ರೀಕೃತವಾಗಿದ್ದು ಇಡಿಯಾಗಿ ವಿಶ್ಲೇಷಿಸುವುದಾದರೆ ಬಳ್ಳಾರಿಯಲ್ಲಿ ಬಡವರ ಕೂಗೇ ಹೆಚ್ಚು, ಅಂತವರ ನಡುವೆ ಈ ಗಣಿ ಮಂದಿ ಅದೆಷ್ಟು ಐಷಾರಾಮಿಯಾಗಿರುತ್ತಾರೆಂಬುದನ್ನು ಅವರ ಸಂಚಾರ ಸಾರೇಟುಗಳೇ ಸಾರುತ್ತಿವೆ.

ಜನಾರ್ದನ ರೆಡ್ಡಿ ತನ್ನದೇ ಹೆಲಿಕಾಪ್ಟರ್‌ನೊಂದಿಗೆ ಮೂರು ಇಂಪೋರ್ಟೆಡ್ ಕಾರುಗಳ ಮಾಲೀಕರಾಗಿದ್ದಾರೆ, ಜಿಂದಾಲ್ ಸ್ಟೀಲ್ ಕಂಪನಿಯ ಸಜ್ಜನ್ ಜಿಂದಾಲ್ ತನಗಾಗಿ ಮೂರು ಹೆಲಿಕಾಪ್ಟರ್‌ಗಳನ್ನು ಹಾರಾಡಿಸುತ್ತಿದ್ದಾರೆ. ಅದೇ ರೀತಿ ಬಳ್ಳಾರಿಯ ವಿಭೂತಿಗಿಡ್ಡ ಗಣಿಯ ಎಸ್.ಕೆ. ಮೋದಿಯೂ ತನ್ನದೇ ಆದ ಹೆಲಿಕಾಪ್ಟರ್ ಹೊಂದಿದ್ದಾರೆ, ಎಂ.ಎಸ್.ಪಿ.ಎಲ್.ನ ಬಾಲ್ದೋಟಾ ಕೂಡ ಸ್ವಂತಕ್ಕೆ ಹೆಲಿಕಾಪ್ಟರ್ ಉಳ್ಳವರಾಗಿದ್ದಾರೆ. ಇನ್ನುಳಿದಂತೆ ಶಾಸಕ ಆನಂದ್ ಸಿಂಗ್, ಎಚ್.ಆರ್. ಗವಿಯಪ್ಪ, ಗಣಿ ಮಾಲೀಕರಾದ ದಿನೇಶ್ ಕುಮಾರ್, ಲಕ್ಷ್ಮಣ್ ಮುಂತಾದವರು ಐಷಾರಾಮಿ ಇಂಪೋರ್ಟೆಡ್ ಕಾರುಗಳನ್ನು ಹೊಂದಿದ್ದಾರೆ.

# ಬೆಂಗಳೂರಿನ ಲಾಡ್ಜಿನಲ್ಲಿ ಪುಣೆಯ ಕನ್ನಿಕೆ

# ಎಂಟೇ ದಿನಕ್ಕೆ 1.80 ಲಕ್ಷ ಗಳಿಕೆ


ಮಾಧುರಿ

"ಇನ್ನೆಂದಿಗೂ ಭಾರತದಲ್ಲಿ ನೀವು ಒಂಟಿಯಲ್ಲ. ಕಾಲ್ ಮಾಡಿ 91888888888, ಕನ್ಯಾಕುಮಾರಿಯಿಂದ ಕಾಶ್ಮೀರದ ತನಕ ಯಾವುದೇ ವಸ್ತು ಅಥವಾ ಮಾಹಿತಿಯನ್ನು ಉಚಿತವಾಗಿ ಪಡೆಯಿರಿ. Just dial.com.!

ನಾವು ಮಾಡೆಲ್ ಹುಡುಗಿಯರಿಂದ ಕೇವಲ ಪುರುಷರಿಗೆ ಮಾತ್ರ ಬಾಡಿ ಮಸಾಜ್ ಸೇವೆಯನ್ನು ಕಲ್ಪಿಸುತ್ತೇವೆ. ನಿಮಗೆ ಬೇಕಾದ ದರದಲ್ಲಿನ ನಮ್ಮ ಸೇವೆಯನ್ನು ಎಂಜಾಯ್ ಮಾಡಿ. ಕರೆ ನೀಡಿ 984444868.

ಹಾಯ್; ಇದು ಅರ್ಚನಾ. ನನ್ನ ನಂಬರ್.... ನಿಮಗೆ ನನ್ನ ಫ್ರೆಂಡ್‌ಶಿಪ್ ಬೇಕಾ?

ಇದು ಪ್ರತಿನಿತ್ಯ ನಿಮ್ಮ ಮೊಬೈಲಿಗೆ ಬಂದುಬೀಳುವ ಘರೇವಾರಿ ಎಸ್ಸೆಮ್ಮೆಸ್ಸುಗಳು. ನಾವು ಬಯಸದೇ ಹೋದರೂ ಈ ಬಗ್ಗೆ ಯಾವುದೇ ಆಸಕ್ತಿಯಿಲ್ಲದಿದ್ದರೂ ಪ್ರತಿನಿತ್ಯ ಇಂಥ ಬೇಕಾಬಿಟ್ಟಿ ಮೆಸೇಜುಗಳು ನಮ್ಮ ಮೊಬೈಲಿಗೆ ಬರುತ್ತಲೇ ಇರುತ್ತವೆ. ಸುಮ್ಮನೆ ಕುತೂಹಲಕ್ಕೆಂದು ಕೊಟ್ಟ ನಂಬರಿಗೆ ಫೋನ್ ಮಾಡಿ ನೋಡಿದರೆ ಅತ್ತಲಿಂದ ಯುವತಿಯೊಬ್ಬಳು ಮಾತಾಡಿ ನಿಮ್ಮ ಅಭಿರುಚಿ, ಯೋಗ್ಯತೆ, ದುಡ್ಡಿನ ತೂಕ, ವಯಸ್ಸು ಎಲ್ಲವನ್ನೂ ಅಳೆದು ಎಂಥಾ ಸಂಗಾತಿ ಬೇಕು, ಅದು ಸಿಗುತ್ತಾ ಯಾವ ರೇಟಿಗೆ, ಎಲ್ಲಿಗೆ ಬರಬೇಕು; ಇತ್ಯಾದಿ ಎಲ್ಲವನ್ನೂ ಫಿಕ್ಸ್ ಮಾಡಿಬಿಡುತ್ತಾಳೆ.

ಇದು ಬೆಂಗಳೂರು ಕೇಂದ್ರಿತವಾಗಿ ಸದ್ದಿಲ್ಲದೇ ಜರುಗುವ ಮೈ ಕಾಯಕದ ಒಂದು ರೀತಿಯಷ್ಟೆ. ತೀರ ಇತ್ತೀಚಿಗೆ ಅಂದರೆ ಮೊನ್ನೆ ಮೇ 23 ರಂದು ಜಯಮಹಲ್ ಏರಿಯಾದ 'ಸ್ಪಾ' ಹೆಸರಿನ ಮಸಾಜ್ ಪಾರ್ಲರ್ ಒಂದರ ಮೇಲೆ ದಾಳಿ ನಡೆಸಿದ ಪೊಲೀಸರಿಗೆ ಬರೋಬ್ಬರಿ 18 ಮಂದಿ ಯುವತಿಯರು ಸಿಕ್ಕಿಬಿದ್ದರು. ಎಲ್ಲರೂ 18 ರಿಂದ 25ರ ಹರೆಯದ ಮಧ್ಯಮ ವರ್ಗ ಯುವತಿಯರು. ಇವರ ಜೊತೆ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ-ಡಿಆರ್‌ಡಿಓನ ಗ್ಯಾಸ್ ಟರ್ಬೈನ್ ರೀಸರ್ಚ್ ಸೆಂಟರ್‌ನ ನಿರ್ದೇಶಕ ಟಿ. ಮೋಹನ್‌ರಾವ್ ಕೂಡ ಸಿಕ್ಕಿಬಿದ್ದ. ರಕ್ಷಣಾ ಇಲಾಖೆಯ ಉನ್ನತ ಅಧಿಕಾರಿಯೊಬ್ಬ ಈ ರೀತಿ ವೇಶ್ಯಾವಾಟಿಕೆಯಲ್ಲಿ ಸಿಕ್ಕಿಬಿದ್ದ ಘಟನೆಯ ತನಿಖೆಗೆಂದೇ ಬ್ರಿಗೇಡಿಯರ್ ಅಜಯ್ ಗುಪ್ತಾ ನೇತೃತ್ವದ ಮಿಲಿಟರಿ ಅಧಿಕಾರಿಗಳ ತಂಡವೊಂದು ಬೆಂಗಳೂರಿಗೆ ಬರಬೇಕಾಯಿತು!

ಅದೇ ದಿನ ಸಿಸಿಬಿಯ ಎಸಿಪಿ ಆರ್. ಲಕ್ಷ್ಮಣ್ ತಂಡ ಬ್ರಿಗೇಡ್ ರಸ್ತೆಯ ಆಸ್ಟಾರ್ಟ್ ಮತ್ತು ಶೇಷಾದ್ರಿಪುರ ಮುಖ್ಯ ರಸ್ತೆಯ ದಿ ಗ್ರ್ಯಾಂಡ್ ಮೆರಿಡಿಯನ್ ಹೋಟೆಲಿನ ಮೇಲೆ ನಡೆಸಿದ ದಾಳಿಗೆ ನಾಲ್ವರು ಯುವತಿಯರು ಸೆರೆಯಾದರು. ದೆಹಲಿ ಮತ್ತು ಪುಣೆ ಮೂಲದ ಈ ಯುವತಿಯರನ್ನು ರಾಜೇಶ್ ಎಂಬಾತ ಬೆಂಗಳೂರಿಗೆ ಕರೆತಂದಿದ್ದ. ಕುಮಾರ್ ಈತನ ಲೋಕಲ್ ಏಜೆಂಟ್. ಇವರದು ಅತ್ಯಂತ ಹೈಟೆಕ್ ಮೈ ದಂಧೆ. www.bangaloreescorts.com ಎಂಬುದು ಇವರ ವೆಬ್‌ಸೈಟು. ದೇಶದ ನಾನಾಭಾಗಗಳಿಂದ ಬೆಂಗಳೂರಿಗೆ ಬರುವ ಶ್ರೀಮಂತರು, ಕಂಪೆನಿ ಎಕ್ಸಿಕ್ಯೂಟೀವ್‌ಗಳು ಮತ್ತು ಅಧಿಕಾರಿಗಳಿಗೆಂದೇ ಎಸ್ಕಾರ್ಟ್ಸ್ ಸೇವೆಯ ಹೆಸರಲ್ಲಿ ಮೈಕಸುಬು ಶುರುಹಚ್ಚಿಕೊಂಡಿದ್ದ ಈ ಗ್ಯಾಂಗ್ ಇದಕ್ಕೆಂದೇ ಅಧಿಕೃತವಾದ ವೆಬ್‌ಸೈಟೊಂದನ್ನು ಆರಂಭಿಸಿ ಆ ಮೂಲಕ ಇಂಟರ್‌ನೆಟ್ ವೇಶ್ಯಾವಾಟಿಕೆ ಜಾಲವನ್ನು ಶುರುಹಚ್ಚಿಕೊಂಡಿದ್ದು ಬೆಂಗಳೂರಿನ ಅಸಂಖ್ಯಾತ ಮೈಕಸುಬು ಕಂಪೆನಿಗಳ ಅಗಾಧ ವಹಿವಾಟಿಗೆ ಸಣ್ಣ ಸ್ಯಾಂಪಲ್ ಅಷ್ಟೆ.


ವೇಶ್ಯಾವಾಟಿಕೆ ನಡೆಯುತ್ತಿದ್ದ ಬಂಗಲೆ


ಇಂಥದೊಂದು ಜಾಲಕ್ಕೆ ಅದೆಂಗೋ ಹೆಜ್ಜೆಯಿಟ್ಟ ಪುಣೆಯ ಯುವತಿ ಅನಿತಾ (ಹೆಸರು ಬದಲಿಸಿದೆ) ಅಲ್ಲಿನ ಸಂಪ್ರದಾಯಸ್ಥ ಚಿತ್ಪಾವನ ಬ್ರಾಹ್ಮಣರ ಕುಟುಂಬದ ಹುಡುಗಿ. ಪದವೀಧರೆ. ತಂದೆ ಮಹಾರಾಷ್ಟ್ರದ ನಿವೃತ್ತ ಅಧಿಕಾರಿ. ಅಣ್ಣ ವಿದೇಶದಲ್ಲಿ ನೌಕರಿ ಮಾಡುತ್ತಿದ್ದಾನೆ. ನಟಿಯಾಗಬೇಕೆಂಬ ಆಸೆಯಿತ್ತಂತೆ. ಅದಕ್ಕೆಂದೇ ಮಾಡೆಲಿಂಗ್‌ಗೆ ಕಾಲಿಟ್ಟವಳು ಮರಾಠಿ, ಹಿಂದಿ ಚಿತ್ರರಂಗದ ಸಾಕಷ್ಟು ಸಿನಿಮಾ ಕಂಪನಿಗಳು, ಡೈರೆಕ್ಟರುಗಳು, ನಿರ್ಮಾಪಕರು, ಏಜೆಂಟರ ಮನೆಬಾಗಿಲು ಕಾದು ಕೊನೆಗೆ ಪಾರ್ಟ್‌ಟೈಮ್ ಗಳಿಕೆಗೆಂದು ಈ ಎಸ್ಕಾರ್ಟ್ಸ್ ಕಾಯಕಕ್ಕೆ ಬಿದ್ದಿದ್ದಾಳೆ.

ಸದ್ಯ ಶೇಷಾದ್ರಿಪುರದ ಗ್ರ್ಯಾಂಡ್ ಮೆರಿಡಿಯನ್ ಹೋಟೆಲಿನಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದ ಅನಿತಾ ಬೆಂಗಳೂರಿಗೆ ಬಂದ ಕೇವಲ 8 ದಿನಗಳ ಅವಧಿಯಲ್ಲಿ ಗಳಿಸಿದ್ದು ಒಂದು ಲಕ್ಷದ ಎಂಭತ್ತು ಸಾವಿರ ರೂಪಾಯಿಗಳು!

ಅಂದರೆ ಪ್ರತಿನಿತ್ಯದ ಖಮಾಯಿ ದಿನಕ್ಕೆ 23 ಸಾವಿರ ರೂಪಾಯಿ. ಐಟಿ ಕಂಪೆನಿಯಲ್ಲೋ, ಸಿನಿಮಾ ನಟಿಯಾಗೋ ದುಡಿದಿದ್ದರೆ ಖಂಡಿತಾ ಈ ಪಾಟಿ ಸಂಪಾದನೆ ಸಾಧ್ಯವಿರಲಿಲ್ಲ, ಮಾಡೆಲಿಂಗ್ ವೃತ್ತಿಯಲ್ಲೂ ಇಷ್ಟೊಂದು ಲಾಭವಿಲ್ಲ ನಿಜ. ಪಾಪ; ತನ್ನ ಎಂಟು ದಿನದ ಗಳಿಕೆಯಾದ 1.80 ಲಕ್ಷವನ್ನು ಆಕೆ ಕುಮಾರ ಪಾರ್ಕ್‌ನ ಎಚ್‌ಡಿಎಫ್‌ಸಿ ಬ್ಯಾಂಕ್ ಶಾಖೆಯ ಮೂಲಕ ತನ್ನ ಅಕೌಂಟಿಗೆ ಹಾಕಿದ್ದಳು. ಈಗ ಸಿಸಿಬಿ ಪೊಲೀಸರು ಆಕೆಯ ಬ್ಯಾಂಕ್ ಖಾತೆಯನ್ನೇ ಮುಟ್ಟುಗೋಲು ಹಾಕಿಕೊಳ್ಳಲು ಯತ್ನಿಸುತ್ತಿದ್ದಾರೆ. ಪಾಪಿ ಸೊತ್ತು ಏನೆಂದರೂ ಪರಾಯಿ ಪಾಲೇ.....!

ಇದು ಕೇವಲ ಒಂದು ವೆಬ್‌ಸೈಟ್ ಅಥವಾ ಒಂದು ಮೊಬೈಲ್ ಸಂಖ್ಯೆಯ ಕತೆಯಷ್ಟೇ ಅಲ್ಲ, ಘರೇವಾರಿ ಮಸಾಜ್ ಅಡ್ಡೆಗಳು ಎಂತೆಂಥದೋ 'ಸ್ಪಾ'ಗಳ ಹೆಸರಲ್ಲಿ ಇಂದಿರಾನಗರ, ಜಯನಗರ, ಎಚ್‌ಎಸ್‌ಆರ್ ಲೇಔಟ್, ಹೆಣ್ಣೂರು ಮೇನ್ ರೋಡ್, ಸರ್ಜಾಪುರ ಇತ್ಯಾದಿ ಔಟರ್‌ರಿಂಗ್ ರೋಡ್ ಸುತ್ತಮುತ್ತ ತಲೆ ಎತ್ತಿವೆ. ಪ್ರತಿನಿತ್ಯ ಸಾವಿರಾರು ಎಸ್ಸೆಮ್ಮೆಸ್ಸುಗಳನ್ನು ರವಾನಿಸಿ ಗಿರಾಕಿಗಳನ್ನು ಸೆಳೆಯುವುದು ಒಂದು ರೀತಿಯಾದರೆ ಮತ್ತೊಂದು ಇಂಟರ್‌ನೆಟ್‌ನ ಅಗಣಿತ ವೆಬ್‌ಸೈಟುಗಳ ಮೂಲಕ.


ಅಶೋಕ್



ಕೊಲ್ಕತ್ತಾ, ಬಾಂಬೆ, ದೆಹಲಿ, ಲಕ್ನೋ ಮತ್ತು ಬಿಹಾರದ ಮೂಲದ ನೂರಾರು ಯುವತಿಯರನ್ನು ಬೆಂಗಳೂರಿಗೆ ಕರೆತಂದು ಮನೆ ಮಾಡಿಟ್ಟು ದಂಧೆಗೆ ಬಳಸುವ ಹೈಟೆಕ್ ಮೈಕಸುಬು ಸದ್ಯ ಬೆಂಗಳೂರಿನ ಹೆಸರನ್ನು ದೇಶದ ನಂಬರ್ ಒನ್ ಸೆಕ್ಸ್ ಜಾಯಿಂಟ್ ಆಗಿ ಚಾಲ್ತಿಗೆ ತಂದುಬಿಟ್ಟಿವೆ. ಹಿಂದಾದರೆ ಪಿಂಪ್‌ಗಳಿರುತ್ತಿದ್ದರು. ಮುಖತಃ ಸಿಕ್ಕಿ ರೇಟು ನಿಗದಿಪಡಿಸುತ್ತಿದ್ದರು. ಪ್ರತಿಷ್ಠಿತ ಹೋಟೆಲುಗಳು ಇಂಥ ಕಸುಬಿನಿಂದ ಸಾಕಷ್ಟು ದೂರ ಉಳಿಯುತ್ತಿದ್ದವು. ಈಗ ಹಾಗಲ್ಲ, ಪ್ರತಿಷ್ಠಿತ ವಿಟ್ರಿಯಾ, ಗ್ರ್ಯಾಂಡ್ ಮೆರಿಡಿಯನ್, ಚಾನ್ಸರಿ, ಲೇ ಮೆರಿಡಿಯನ್‌ಗಳೇ ಕರೆಕರೆದು ರೂಮು ಕೊಡುತ್ತಿವೆ. ಸಿನಿಮಾನಟಿಯರೇ ಸಿಕ್ಕಿಬೀಳುತ್ತಿದ್ದಾರೆ. ಬೆಂಗಳೂರೀಗ ಐಟಿ ಹಬ್. ದೇಶದ ನಾನಾ ಭಾಗಗಳಿಂದ ಬಂದ ಸಾಫ್ಟ್‌ವೇರ್ ತಜ್ಞರು, ಟೆಕ್ಕಿಗಳು, ಐಟಿ ಸುಖಿಪುರುಷರಿಗೆ ಮೋಜು ಬೇಕು. ರೊಕ್ಕಕ್ಕೆ ತಕ್ಕಂತೆ ಮಸ್ತಿ ಮಾಡಬೇಕು. ಅದಕ್ಕೆಂದೇ ಬೇಕಾಬಿಟ್ಟಿ ಮಸಾಜ್ ಪಾರ್ಲರುಗಳು, ಸ್ಪಾಗಳು, ಬ್ಯೂಟಿ ಕ್ಲಿನಿಕ್, ಯೋಗ ಮತ್ತು ಆಯುರ್ವೇದಿಕ್ ಸೆಂಟರ್, ಅರೋಮಾ ಥೆರಪಿ, ಹೋಮಿಯೋ ಥೆರಪಿ, ಬಾಡಿ ಮಸಾಜ್ ಇತ್ಯಾದಿ ಚಿತ್ರವಿಚಿತ್ರ ಹೆಸರಿನ ಸೆಕ್ಸ್ ಅಡ್ಡೆಗಳು ತಲೆ ಎತ್ತಿವೆ.

ಕೆಲದಿನಗಳ ಹಿಂದೆ ಅರ್ಧ ಡಜನ್ ರಷ್ಯನ್ ಯುವತಿಯರನ್ನು ಇದೇ ಸಿಸಿಬಿ ಪೊಲೀಸರು ಬಂಧಿಸಿದಾಗಲೇ ಅದು ಬೆಂಗಳೂರಿನ ಮೈದಂಧೆಗೆ ಎಂಥಾ ಡಿಮ್ಯಾಂಡು ಸೃಷ್ಟಿಯಾಗಿದೆ ಎಂಬುದರ ಸೂಚನೆಯಾಗಿತ್ತು, ಥಾಯ್ ಮಸಾಜ್, ಬೆಲ್ಲಿನೀಸ್, ಬಾಡಿ ಟು ಬಾಡಿ, ಸ್ಟೀಮ್ ಥೆರಪಿಗಳ ಹೆಸರಲ್ಲಿ ಪ್ರತಿನಿತ್ಯ ಕಂಡಕಂಡವರ ಮೊಬೈಲಿಗೆ ಮೆಸೇಜುಗಳು ರವಾನೆಯಾಗತೊಡಗಿದವು. ಆಗ ಸಿಸಿಬಿಯ ಮಹಿಳೆ ಮತ್ತು ಮಾದಕ ದ್ರವ್ಯ ಘಟಕಕ್ಕೆ ಡಿಸಿಪಿಯಾಗಿದ್ದದ್ದು ಮುಲ್ಲಾ ಮುಲ್ಲಾ ಸಾಹೇಬರ ಹೃದಯ ವೈಶಾಲ್ಯವೋ ಎಂಬಂತೆ ಬೆಂಗಳೂರೊಂದರಲ್ಲೇ ಆಗ ಇಂಥ 45 ಮಸಾಜ್ ಪಾರ್ಲರುಗಳಿದ್ದವು. ಇವುಗಳ ಪೈಕಿ ಸರಿಸುಮಾರು 25 ರಷ್ಟು ನಗರದ ಹೊರವಲಯದಿಂದ ಆಪರೇಟ್ ಮಾಡುತ್ತಿದ್ದವು.

ರಿಯಲ್ ಎಸ್ಟೇಟ್ ನೆಲಕಚ್ಚಿ, ಲ್ಯಾಂಡ್ ದಂಧೆ ಸೊರಗಿ ಭೂಸಂಬಂಧಿ ಆದಾಯ ಕುಸಿತ ಕಂಡ ಹೊತ್ತಲ್ಲೇ ಅದರ ವಿಕಟ ರೂಪವೆಂಬಂತೆ ಹುಟ್ಟಿಕೊಂಡಿದ್ದು ಹೈಟೆಕ್ ಸೆಕ್ಸ್. ಅಮಾವಾಸ್ಯೆಗೋ ಹುಣ್ಣಿಮೆಗೋ ಒಮ್ಮೆ ಸಿಸಿಬಿ ಪೊಲೀಸರು ವೇಶ್ಯಾವಾಟಿಕೆಯಲ್ಲಿ ತೊಡಗಿದ್ದಾರೆಂದು ಪಾಪದ ಹೆಣ್ಣು ಮಕ್ಕಳನ್ನು ಎಳೆದೊಯ್ದು ಜೈಲಿಗೆ ದಬ್ಬುತ್ತಿದ್ದ ದೃಶ್ಯಾವಳಿಯಷ್ಟೇ ಈ ಕುರಿತು ಹೊರಪ್ರಪಂಚಕ್ಕೆ ಸಿಗುತ್ತಿದ್ದ ಮಾಹಿತಿಯಾಗಿತ್ತು, ಇವರೆಲ್ಲರೂ ತಮ್ಮ ಹೊಟ್ಟೆಪಾಡಿಗೆಂದು ಮೈ ಮಾರಾಟಕ್ಕಿಟ್ಟ ನತದೃಷ್ಟೆಯರೇ ಹೊರತು ಇಂಥ ಹತಭಾಗಿಯರನ್ನಿಟ್ಟು ಲಕ್ಷಲಕ್ಷ ಗಳಿಸುತ್ತಿದ್ದ ಪಿಂಪ್‌ಗಳು, ಏಜೆಂಟರ‍್ಯಾರೂ ಸಿಗುತ್ತಿರಲಿಲ್ಲ.

ಅಸಲಿಗೆ ಬೆಂಗಳೂರಿನ ಹೈಟೆಕ್ ಸೆಕ್ಸ್ ದಂಧೆಯ ಕಾರಣ ಪುರುಷರೇ ಬೇರೆ.

ಅವರಿಗೆ ಪ್ರಭಾವವಿದೆ. ರೌಡಿಗಳ ರಕ್ಷಣೆಯಿದೆ. ಪೊಲೀಸ್ ಇಲಾಖೆಯ ಪ್ರಭಾವಿಗಳ ನೆರಳಿದೆ. ಸಿಕ್ಕಿಬಿದ್ದು ಜೈಲುಪಾಲಾಗುವುದು ನತದೃಷ್ಟ ಹೆಣ್ಣುಮಕ್ಕಳಷ್ಟೇ ಹೊರತು ಈತನಕ ಯಾರೇ ಒಬ್ಬ ಏಜೆಂಟ್, ಪಿಂಪ್, ದಂಧೆಕೋರನನ್ನು ಏಕೆ ಪೊಲೀಸರು ಜೈಲಿಗೆ ದಬ್ಬಿಲ್ಲ?

## ರಾಮಯ್ಯ ಕಾಲೇಜ್ ಸುತ್ತ ರಾಸಲೀಲಾ ಮೇಳ



ಇದೀ ಬೆಂಗಳೂರಿನ ಮೈದಂಧೆಯ ತೂಕವೇ ಒಂದಾದರೆ ಅದಕ್ಕೆ ಸರಿಸಮನಾಗಿ ತೂಗುವುದು ಎಂ.ಎಸ್. ರಾಮಯ್ಯ ಕಾಲೇಜು ಸುತ್ತಮುತ್ತಲ ಸೆಕ್ಸ್ ರ‍್ಯಾಕೆಟ್. ಮಲ್ಲೇಶ್ವರದ ಜಯಣ್ಣ ಎಂಬ ಹಳೇ ಪಂಟರ್ ಇದರ ಅಧಿನಾಯಕ. ಎಂ.ಎಸ್. ರಾಮಯ್ಯ ಕಾಲೇಜಿನ ಪಕ್ಕದಲ್ಲೇ ಈತನ ರಾಯಲ್ ಮಸಾಜ್ ಅಡ್ಡೆಯಿದೆ. ರಾಮಯ್ಯ ಕಾಲೇಜಿನಲ್ಲಿ ವ್ಯಾಸಂಗಕ್ಕೆಂದು ದೇಶದ ನಾನಾಭಾಗಗಳಿಂದ ಬಂದ ಶೋಕಿಲಾಲ ವಿದ್ಯಾರ್ಥಿಗಳೇ ಈತನ ಪ್ರಮುಖ ಗಿರಾಕಿಗಳು.

ಇಂಥ ಶ್ರೀಮಂತರ ಮಕ್ಕಳಿಗೆ ಲೋಕಲ್ ಐಟಂ ಎಂದು ಜಯಣ್ಣ ಶುರುಹಚ್ಚಿಕೊಂಡ ಸರಬರಾಜು ದಂಧೆಯ ಮರೆಯಲ್ಲೇ ದೀಪು ಮತ್ತು ಸೂರಿ ಎಂಬ ಹಳೇ ರೌಡಿಗಳಿಬ್ಬರು ಕಾರ್ಯಾಚರಣೆಗಿಳಿದಿದ್ದಾರೆ. ಡಬ್ಬಲ್ ಮರ್ಡರ್ ಕೇಸಿನ ಕುಖ್ಯಾತಿ ಇವರ ಬೆನ್ನಿಗಿದೆಯಾದ್ದರಿಂದ ಯಾರೂ ಮಿಸುಕಾಡುವಂತಿಲ್ಲ, ಪರದೇಶಿ ವಿದ್ಯಾರ್ಥಿಗಳಿಗೆ ಲೋಕಲ್ ಐಟಮ್ಮು ಮಾತ್ರವಲ್ಲದೇ ಲೋಕಲ್ ಶೋಕಿಲಾಲರಿಗೆ ರಾಮಯ್ಯ ಕಾಲೇಜಿನ ಹುಡುಗಿಯರನ್ನೂ ಒದಗಿಸುತ್ತೇವೆಂಬುದು ಇವರ ಬಿಜಿನೆಸ್ ಟೆಕ್ನಿಕ್ಕು. ವ್ಯವಹಾರ ಪೂರ್ತಿ ಮೊಬೈಲು, ಇಂಟರ್‌ನೆಟ್ಟುಗಳ ಮೂಲಕವೇ ನಡೆಯುತ್ತದೆ.

ರಾಮಯ್ಯ ಕಾಲೇಜ್ ಸುತ್ತಮುತ್ತ ನಾಯಿಕೊಡೆಗಳಂತೆ ಹುಟ್ಟಿಕೊಂಡ ಸ್ಪಾ, ಮಸಾಜ್ ಪಾರ್ಲರ್, ಬಾಡಿಕೇರ್, ಹೆಲ್ತ್‌ಕೇರ್ ಹೆಸರಿನ ಸೆಕ್ಸ್ ಅಡ್ಡೆಗಳನ್ನು ಗಮನಿಸಿದರೆ ಮಲ್ಲೇಶ್ವರದ ಜಯಣ್ಣ ಮತ್ತು ದೀಪು-ಸೂರಿ ಗ್ಯಾಂಗ್‌ನ ತಾಕತ್ತು ಗೊತ್ತಾಗುತ್ತದೆ. ಅದೇನು ಮರ್ಮವೋ ಗೊತ್ತಿಲ್ಲ, ಪೊಲೀಸರು ಮಾತ್ರ ಈತನಕ ಇವರ‍್ಯಾರನ್ನೂ ಮುಟ್ಟಿಲ್ಲ, ಬಹುಶಃ ಮುಟ್ಟುವುದೂ ಇಲ್ಲ!



ಸೆರೆ ಸಿಕ್ಕ ಗೋವಾ ಹುಡುಗಿಯರು

ಸದ್ಯ ಬಿಜೆಪಿಯ ರಾಮರಾಜ್ಯದ ಪರಿಣಾಮವೋ ಎಂಬಂತೆ ಇಂಥ ನೂರಕ್ಕೂ ಅಧಿಕ ಸೆಕ್ಸ್ ಜಾಯಿಂಟುಗಳು ಬೆಂಗಳೂರಿನಲ್ಲಿ ತಲೆ ಎತ್ತಿವೆ. ಇದಲ್ಲದೇ 60 ಕ್ಕೂ ಅಧಿಕ ಲೈವ್‌ಬ್ಯಾಂಡ್ ಅಡ್ಡೆಗಳು ಬೇರೆ. ಹೆಸರಿಗೆ ಲೈವ್‌ಬ್ಯಾಂಡ್ ಅಲ್ಲದಿದ್ದರೂ ಇಲ್ಲಿ ಬಾರ್‌ಗರ್ಲ್ಸ್ ಇರುತ್ತಾರೆ. ನೆಪಕಷ್ಟೇ ಇವರು ಪರಿಚಾರಿಕೆಯರು. ಅಬ್ಬರದ ಸಂಗೀತಕ್ಕೆ ಡ್ಯಾನ್ಸ್ ಮಾಡುತ್ತಾ, ಗಿರಾಕಿಗಳಿಗೆ ಕಂಪೆನಿ ಕೊಡುತ್ತಾ ವ್ಯವಹಾರ ಕುದುರಿಸುವುದು ಈ ದಂಧೆಯ ಮತ್ತೊಂದು ಟೆಕ್ನಿಕ್.

ರೆಸಿಡೆನ್ಸಿ ರಸ್ತೆಯಲ್ಲಿ ಮಿಲನ್ ರೆಸಿಡೆನ್ಸಿ ಎಂಬ ಬ್ಯಾಂಡ್ ಅಡ್ಡೆ ನಡೆಸುವ ರಾಜು ಶೆಟ್ಟಿ ಈ ದಂಧೆಯ ಪ್ರಮುಖ ಏಜೆಂಟನಾದರೆ ಈತನ ಗುರು ಸುಧಾಕರ್ ಶೆಟ್ಟಿ ಒಬ್ಬನೇ ಪಲ್ಲವಿ ಟಾಕೀಸ್ ಕಾಂಪ್ಲೆಕ್ಸ್‌ನಲ್ಲಿ ಒಂದಲ್ಲ ನಾಲ್ಕು ಅಡ್ಡೆಗಳ ಮಾಲೀಕ. ಇವರ್‍ಯಾರೂ ಈತನಕ ಜೈಲು ಕಂಡಿಲ್ಲ. ಇವರಿಗಿಂತಲೂ ಹೈಟೆಕ್ಕಾಗಿ ದಂಧೆ ನಡೆಸುವವನು ಸಂಜಯ್‌ನಗರ-ಡಾಲರ್ಸ್ ಕಾಲನಿಯ ಸೂರಜ್. ಈತನದು ಇಂಟರ್‌ನೆಟ್ ಮತ್ತು ಮೊಬೈಲ್ ಮೂಲಕ ವ್ಯವಹಾರ. ಈತನಿಗಿಂತಲೂ ಖತರ್‌ನಾಕ್ ಕಸುಬುದಾರ ಫ್ರೇಜರ್‌ಟೌನಿನ ರಾಹುಲ್ ರಾಯ್ ಎಂಬ ಡಾಕ್ಟರ್. ಕೊಲ್ಕತ್ತಾ ಮೂಲದ ಈತ ಹೆಸರಿಗಷ್ಟೇ ಕ್ಲಿನಿಕ್ ನಡೆಸುತ್ತಾನೆ. ಹಿಂದೆ ವೇಶ್ಯಾವಾಟಿಕೆಯ ಆರೋಪದ ಮೇಲೆ ಜೈಲು ಕಂಡಿದ್ದ. ಹೊರಬಂದವನೇ ಪೊಲೀಸರನ್ನು ಸರಿಮಾಡಿಕೊಂಡು ಹಿಂದಿಗಿಂತಲೂ ವ್ಯವಸ್ಥಿತವಾಗಿ ಅಬ್ಬರದ ದಂಧೆ ಆರಂಭಿಸಿದ್ದಾನೆ. ಈತನಿಗೆ ಹೋಲಿಸಿದರೆ ಆರ್.ಟಿ. ನಗರ, ಸಂಜಯ್ ನಗರದ ವ್ಯಾಪ್ತಿಯಲ್ಲಿ ಎಸ್ಕಾರ್ಟಿಂಗ್ ನಡೆಸುವ ಉತ್ತರ ಪ್ರದೇಶ ಮೂಲದ ಪಂಡಿತ್ ಇನ್ನೂ ದೊಡ್ಡ ಕುಳ.

ಪ್ರತಿನಿತ್ಯ ಅಸಂಖ್ಯಾತ ಎಸ್ಸೆಮ್ಮೆಸ್ಸುಗಳನ್ನು ರವಾನಿಸಿ ಗಿರಾಕಿಗಳಿಗೆ ಬಲೆ ಬೀಸುತ್ತಾನೆ. ಬಂದ ಫೋನ್ ಕರೆಗಳನ್ನು ಸ್ವೀಕರಿಸಲೆಂದೇ ಐವರು ರಿಸೆಪ್ಷನಿಸ್ಟುಗಳನ್ನು ನೇಮಿಸಿದ್ದಾನೆ. ಅವರ ಇಂಥಾ ಜಾಗಕ್ಕೆ ಬರಹೇಳುತ್ತಾರೆ. ಹಾಗೇ ಹೇಳಿದ ಜಾಗಕ್ಕೆ ಬಂದರೆ ಕಾರೊಂದರಲ್ಲಿ ಮಧ್ಯೆ ಹುಡುಗಿಯರನ್ನು ಕೂರಿಸಿ ಅವರ ರಕ್ಷಣೆಗೆಂದು ಮೂರ್‍ನಾಲ್ಕು ಬೈಕುಗಳ ಬಾಡಿಗಾರ್ಡುಗಳಿರುತ್ತಾರೆ. ರೇಟು ಕುದುರಿದರಷ್ಟೇ ವ್ಯವಹಾರ. ರೇಟು ಗಿಟ್ಟದೇ ಹೋದರೆ ಮರುಮಾತಾಡದೇ ವಾಪಸ್ಸು ಹೋಗುತ್ತಾರೆ.

ಇದು ಪಂಡಿತ್‌ನ ವ್ಯಾಪಾರಿ ಕೌಶಲ್ಯವಾದರೆ ಕೆ.ಆರ್. ಪುರಂನ ಮೋಯಿನ್ ಕಮ್ಮನಹಳ್ಳಿ ಸಿಗ್ನಲ್ಲಿನಲ್ಲಿ ವಿಕ್ಕಿ ಮಸಾಜ್ ಎಂಬ ಅಡ್ಡೆ ತೆರೆದಿದ್ದಾನೆ. ಜೊತೆಗೆ ಶೇಷಾದ್ರಿಪುರ ಸರ್ಕಲ್ಲಿನಲ್ಲಿ ಕ್ರೇಜಿ ಮಸಾಜ್, ಎಚ್.ಎಸ್.ಆರ್. ಲೇಔಟಿನ ಬಿಡಿಎ ಕಾಂಪ್ಲೆಕ್ಸ್ ಪಕ್ಕ ಚಾಂದಿನಿ ಮಸಾಜ್ ಎಂಬ ಇನ್ನೆರಡು ಅಡ್ಡೆಗಳನ್ನೂ ಮೋಯಿನ್ ನಡೆಸುತ್ತಾನೆ. ಈತನ ಶಿಷ್ಯರಾದ ಅಮಿತ್ ಮತ್ತು ಸೂರಜ್ ಸೇರಿಕೊಂಡು ಬೆಂಗಳೂರಿನುದ್ದಕ್ಕೂ ಇಂಥ ಇಪ್ಪತ್ತು 'ಸ್ಪಾ'ಗಳನ್ನು ತೆರೆದಿದ್ದಾರೆ. ಸನ್‌ಶೈನ್ ಸ್ಪಾ, ಏಷಿಯನ್ ಸ್ಪಾ, ಪೆನೀಷಿಯಾ ಮಸಾಜ್, ಜ್ಯೂಲಿಯಾ, ಸೋಫಿಯಾ, ಲೀಸಾ ಇತ್ಯಾದಿ ಅಸಂಖ್ಯಾತ 'ಸ್ಪಾ'ಗಳಲ್ಲಿ ನಡೆಯುವುದು ಅದೇ ಹೈಟೆಕ್ ಸೆಕ್ಸ್!

ಗರುಡಾಮಾಲ್ ಮತ್ತು ಬ್ರಿಗೇಡ್ ರಸ್ತೆಯನ್ನೇ ತನ್ನ ನೆಲೆಯನ್ನಾಗಿಸಿಕೊಂಡು ಸೆಕ್ಸ್ ರ್‍ಯಾಕೇಟ್ ನಡೆಸುವ ವಿಜಯ್ ಎಂಬಾತ ಖದೀಮ ಉದಯ್ ಗರುಡಾಚಾರ್‌ನ ಪರಮಾಪ್ತ. ಗೋರಿಪಾಳ್ಯದ ಸಲೀಮ್ ಸರ್ಜಾಪುರ ರಸ್ತೆಯಲ್ಲಿ ಅಂಕಿತಾ ಮಸಾಜ್ ನಡೆಸಿ ಎಷ್ಟು ಬೇಗ ಕುಬೇರನಾದನೆಂದರೆ ಒಂದೇ ವರ್ಷಕ್ಕೆ ಮಾರುತಹಳ್ಳಿಯಲ್ಲಿ ಅಭಿ ಮತ್ತು ಸಂಜಯ್ ಹೆಸರಿನ ಇನ್ನೆರಡು ಮಸಾಜ್ ಪಾರ್ಲರುಗಳನ್ನು ತೆರೆದ. ಹೆಬ್ಬಾಳದ ಬಿಗ್ ಬಜಾರ್ ಬಳಿ ಇನ್ನೊಂದು, ಬಿಟಿಎಂ ಲೇಔಟಿನಲ್ಲಿ ಮತ್ತೊಂದು, ರೇಸ್‌ಕೋರ್ಸ್ ರಸ್ತೆಯಲ್ಲಿ ಮಗದೊಂದು ಹೀಗೆ ಕೇವಲ ಮೂರೇ ವರ್ಷದ ಅವಧಿಯಲ್ಲಿ ಇಂಥ ಏಳು ಸೆಕ್ಸ್ ಅಡ್ಡೆಗಳನ್ನು ತೆರೆದ ಸಲೀಮ್‌ನನ್ನು ಈತನಕ ಯಾರೇ ಒಬ್ಬ ಪೊಲೀಸ್ ಅಧಿಕಾರಿ ಏಕೆ ಮುಟ್ಟಿಲ್ಲ?

ಶಿವಮೊಗ್ಗದ ಶಿವು ಎಂಬಾತ ನಿಮಗೆ ಮೌಂಟ್ ಕಾರ್ಮೆಲ್ ಕಾಲೇಜಿನ ಹುಡುಗಿಯರು ಬೇಕಾ? ಎಂದು ರಾಜಾರೋಷವಾಗಿ ಎಸ್ಸೆಮ್ಮೆಸ್ ಕಳಿಸುತ್ತಾನೆ. ಈತನ ಶಿಷ್ಯರೇ ಬಸವೇಶ್ವರ ನಗರದ ವಾಟರ್ ಟ್ಯಾಂಕ್ ವಾಸಿ ಕುಳ್ಳಾ ವಿಜಿ, ಮಂಗಳೂರಿನ ಯೂಸೂಫ್ ಮತ್ತು ಮಲೆಯಾಳಿ ವಿಜಿ ಎಂಬ ವೈಟ್‌ಕಾಲರ್ ಸರಬರಾಜುದಾರರು. ಇವರಿಗೆ ಗಾಂಧಿನಗರದ ಎಕ್ಸ್‌ಟ್ರಾ ನಟಿಯರ ಬ್ರೋಕರ್ ದಾಡಿ ಸುಭಾಷ್ ಸಬ್ ಏಜೆಂಟ್.

ಇಂಥ ಅದೆಷ್ಟೋ ಪಿಂಪ್‌ಗಳು ಏಜೆಂಟರು, ದಂಧೆಕೋರರನ್ನು ರಾಜಾರೋಷವಾಗಿ ವ್ಯವಹರಿಸಲು ಬಿಟ್ಟು, ಪಾಪದ ಹೆಣ್ಣುಮಕ್ಕಳನ್ನು ಹಿಡಿದು ಪೊಲೀಸರು ಜೈಲಿಗೆ ದಬ್ಬುತ್ತಾರೆ. ಸದ್ಯ ಪುಣೆಯ ಹುಡುಗಿ ತನ್ನ ಮೈಮಾರಿ ಗಳಿಸಿದ 1.80 ಲಕ್ಷವನ್ನು ಮುಟ್ಟುಗೋಲು ಹಾಕಿಕೊಂಡ ಪೊಲೀಸರ ಪೌರುಷ ಕೋಟಿಕೋಟಿ ದುಡಿದ ಇಂಥ ದಂಧೆಕೋರರ ಮೇಲೆ ಏಕಿಲ್ಲ?

ಅಸಹಾಯಕ ಹೆಣ್ಣುಮಕ್ಕಳನ್ನು ಬಲಿಹಾಕಿ ಅವರನ್ನು ದಂಧೆಗಿಳಿಸಿದವರನ್ನು ರಕ್ಷಿಸುವುದು ಯಾವ ನ್ಯಾಯ? ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಆಯಾ ಪೊಲೀಸ್ ಠಾಣೆಯನ್ನು ಇಂತಿಷ್ಟು ರೇಟಿಗೆಂದು ಮಾರಿಕೊಂಡ ಯಡ್ಡಿ ಮಕ್ಕಳ ದುರಾಶೆಯ ಪರಿಣಾಮವಿದು. ಕೊಲೆ ನಡೆದರಷ್ಟೇ ಪೊಲೀಸರಿಗೆ ಕೆಲಸ. ವೇಶ್ಯಾವಾಟಿಕೆಗಳಿದ್ದಷ್ಟೂ ಪೊಲೀಸ್ ಠಾಣೆಗಳಿಗೆ ಆದಾಯ. ಲಕ್ಷಲಕ್ಷ ತೆತ್ತು ಆಯಾ ಠಾಣೆಗಳಿಗೆ ಇನ್ಸ್‌ಪೆಕ್ಟರಾಗಿ ಬಂದವರಿಗೆ ರೇಪು, ವರದಕ್ಷಿಣೆ ಸಾವು, ಗ್ಯಾಂಗ್‌ವಾರ್, ಲೈವ್ ಬ್ಯಾಂಡ್, ಯಾವುದೂ ನಡೆಯದೇ ಹೋದರೆ ಹಾಕಿದ ಬಂಡವಾಳ ಗಿಟ್ಟುವುದಾದರೂ ಹೇಗೆ?

ಅದಕ್ಕೇ ಪಾಪದ ಹೆಣ್ಣುಮಕ್ಕಳನ್ನು ಹಿಡಿದು ಜೈಲಿಗೆ ಹಾಕುವುದು ಮತ್ತು ಲೆಕ್ಕಕ್ಕೆ ತೋರಿಸಿ, ಮತ್ತಷ್ಟು ಖಯಾಯಿಗೆ ದಾರಿ ಮಾಡಿಕೊಳ್ಳುವುದು. ರಾಮರಾಜ್ಯವೆನ್ನಿ, ಸರಾಮಿರಾಜ್ಯವೆನ್ನಿ, ಬಿಜೆಪಿಯ ಲೆಕ್ಕಕ್ಕೆ ಎರಡೂ ಒಂದೇ....!

-ರಾ. ಸೋಮನಾಥ್.

# 'ಕರ್ನಾಟಕ ರತ್ನ ಪ್ರಶಸ್ತಿ ವೇಸ್ಟಾಯಿತಲ್ಲ ಸಾರ್'

ಸುಮಾರು ಎರಡು ಸಾವಿರ ದಲಿತರು ಬೌದ್ಧರಾಗಿ ಮತಾಂತರಗೊಳ್ಳುತ್ತಾರೆಂದು ಗೊತ್ತಾದ ಕೂಡಲೇ ಪೇಜಾವರ ಶ್ರೀಗಳು ಗಲಿಬಿಲಿಗೊಂಡು "ದಲಿತರೇ ಎಚ್ಚರ, ನಿಮ್ಮ ಹಬ್ಬ ಹರಿದಿನ, ತಮಟೆ ಹಲಗೆ ಅಸಾದಿ ಎಲ್ಲವನ್ನು ಕಳೆದುಕೊಳ್ಳುತ್ತೀರಿ. ಬೌದ್ಧರಾಗಬೇಡಿ. ಅದು ಭಿಕ್ಷುಕರ ಧರ್ಮ. ಯಾಚಕರ ಧರ್ಮ ಬಿಟ್ಟುಹೋಗಬೇಡಿ. ಬಾಣಲೆಯಿಂದ ಬೆಂಕಿಗೆ ಹಾರಬೇಡಿ" ಎಂದು ಕೂಗಿಕೊಂಡರಂತಲ್ಲಾ, ಪೇಜಾವರರ ಆಕ್ರಂದನ ಕೇಳಲಾಗದೆ ಕೆಲ ದಲಿತರು ಹಿಂದೆ ಮುಂದೆ ನೋಡಲಾಗಿ, ಪೇಜಾವರರು "ನೋಡಿ, ನಿಮಗಾಗಿ ನಾನು ವೈಷ್ಣವ ದೀಕ್ಷೆಯನ್ನು ನೀಡಲಿದ್ದೇನೆ. ಈ ದೀಕ್ಷೆಯಿಂದ ನೀವು ಉತ್ತಮ ಮಾನವರಾಗಿ ಬೇಳೆ ಹುಳಿಯ ಭೋಜನ ಮಾಡುತ್ತ ಜೊತೆಗೆ ಪತ್ರೊಡೆ ಕೋಸಂಬರಿ ಪುಳಿಯೋಗರೆ ಮೊಸರನ್ನ ಸವಿಯುತ್ತ ಹಾಯಾಗಿರಬಹುದು. ವೈಷ್ಣವ ದೀಕ್ಷೆ ಪಡೆಯುವವರು ಮಾಂಸ ಮದ್ಯ ಮುಟ್ಟಕೂಡದು. ಅದನ್ನು ವರ್ಜಿಸಿದವರಿಗೆ ದೀಕ್ಷೆ" ಎಂದರಂತಲ್ಲಾ, ಇದನ್ನು ಕೇಳಿಸಿಕೊಂಡ ದಲಿತರು "ಮಾಂಸ ತಿನ್ನದೇ ಹೋದರೆ ನಾವು ನಿಮ್ಮವರಂತಾಗಬೇಕಾಗುತ್ತದೆ. ಆಗ ನಮ್ಮ ಹೆಂಗಸರು ನಮ್ಮನ್ನು ಮೂಸಿಯೂ ನೋಡುವುದಿಲ್ಲ. ನಿಮ್ಮ ನರಿಪುರಾಣ ಸಾಕುಹೋಗಯ್ಯ. ನಾವು ನಮ್ಮ ಊಟ ತಮಟೆ ಜೊತೆಗೇ ಬೌದ್ಧ ಧರ್ಮ ಸೇರುತ್ತೇವೆ" ಎಂದು ಹೋಗೇಬಿಟ್ಟರಂತಲ್ಲಾ, ಥೂತ್ತೇರಿ!

*******

ಕನ್ನಡನಾಡಿನ ಸಂಸ್ಕೃತಿಯ ಪ್ರತೀಕವಾದ ಕರ್ನಾಟಕ ರತ್ನ ಪ್ರಶಸ್ತಿ ಹೊಡೆದಿರುವ ನಮ್ಮ ಕನ್ನಡ ಕಲಿ ದೇಜಗೌರನ್ನ ಅಭಿನಂದಿಸಿ, ಒಂದೆರಡು ಪ್ರಶ್ನೆ ಕೇಳಬೇಕೆನಿಸಿತಲ್ಲಾ, ಈ ಬಗ್ಗೆ ಯಾವ ಪೂರ್ವ ತಯಾರಿಯೂ ಇಲ್ಲದೆ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್‌ಟೋನ್ : "ಬೆಳಗಾಗಿ ನಾನೆದ್ದು ಯಾರ್‍ಯಾರ ನೆನದೇನು, ಎಳ್ಳು ಜೀರಿಗೆ ಬೆಳಿಯೋಳ ಎದ್ದೊಂದು ಗಳಿಗೆ...."

"ಹಲೋ ಯಾರು?"

"ನಾನು ಸಾರ್, ಯಾಹೂ ಅಂತ ಪತ್ರಕರ್ತ."

"ಯಾವ ಪತ್ರಿಕೆ."

"ಗೌರಿ ಲಂಕೇಶ್ ಪತ್ರಿಕೆ"

"ಆವ್ರುರು ಸಿನುಮಾನೂ ತಗಿತರಲ್ವಾ?"

"ಆಕೆ ಕವಿತಾ ಲಂಕೇಶ್ ಅಂತ ಸಾರ್."

"ಓಹೋ. ಎರಡು ಜನ ಹೆಣ್ಣುಮಕ್ಕಳಲ್ಲವ ಲಂಕೇಶರಿಗೆ. ಒಳ್ಳೆದು. ಏನು ವಿಷಯ?"

ಥೂತ್ತೇರಿ

ಯಾಹೂ

"ತಮಗೆ ಕರ್ನಾಟಕ ರತ್ನ ಪ್ರಶಸ್ತಿ ಬಂತಲ್ಲ, ಅದ್ಕೆ ಅಭಿನಂದನೆಗಳು ಸಾರ್."

"ಥ್ಯಾಂಕ್ಸ್ ಫೋನ್ ಮಾಡಿದ್ಕೆ"

"ಸಾರ್, ಈ ಪ್ರಶಸ್ತಿ ಕೊಡೋದಕ್ಕೆ ಅನುಸರಿಸೊ ಮಾನದಂಡಗಳೇನು ಸಾರ್?"

"ಕನ್ನಡಕ್ಕೆ ಮತ್ತು ಕರ್ನಾಟಕಕ್ಕೆ ನಾವು ಸಲ್ಲಿಸಿರತಕ್ಕಂತ ಸೇವೆ, ಸಾಧನೆಗಳನ್ನ ಪರಿಗಣಿಸಿ ಕೊಡ್ತರೆ ಅಂತ ನಾನು ತಿಳಕೊಂಡಿದ್ದಿನಿ."

"ಸೇವೆ ಅಂದ್ರೇನು ಸಾರ್?"

"ಸೇವೆ ಅಂದ್ರೆ, ಅರ್ಪಣಾ ಮನೋಭಾವದಿಂದ ಫಲಾಪೇಕ್ಷೆ ಇಲ್ಲದೆ ಮಾಡತಕ್ಕಂತಹ ಕಾರ್ಯ."

"ಅಂತದನ್ನ ನೀವೇನು ಮಾಡಿದ್ದೀರಿ ಸಾರ್?"




"ಅದನ್ನ ಪ್ರಶಸ್ತಿ ಕೊಟ್ಟವರನ್ನ ಕೇಳಿ. ಆದ್ರು ನಿಮ್ಮಂತ ಅಜ್ಞಾನಿಗಳಿಗೆ ಒಂದಿಷ್ಟು ತಿಳಿವಳಿಕೆ ಕೊಡಬೇಕಾಗಿದೆ. ಈ ಮಾನಸ ಗಂಗೋತ್ರಿಯನ್ನ ಕುವೆಂಪು ನಂತರ ಕಟ್ಟಿದೋನು ನಾನು. ಇಲ್ಲಿನ ಗೋಡೆಗಳು, ಕಂಬಗಳು ಮತ್ತು ಕಟ್ಟಡಗಳಿಗೆಲ್ಲಾ ನನ್ನ ಶ್ರಮ ಗೊತ್ತು."

"ಕೆಲವು ಕಟ್ಟಡಗಳನ್ನು ತೋರಿಸಿ ಕಂಟ್ರ್ಯಾಕ್ಟರ್‌ಗಳು ಇದೇ ಮಾತೇಳ್ತಾರಲ್ಲ ಸಾರ್."

"ನನ್ನನ್ನ ಕಂಟ್ರ್ಯಾಕ್ಟರ್‌ಗೆ ಹೋಲಿಸಬೇಡಿ. ನಾನು ಉಪಕುಲಪತಿಯಾಗಿದ್ದವನು."

"ದೇವೇಗೌಡ್ರು, ಇದೇ ತರ ನಾನು ಪ್ರಧಾನಿಯಾಗಿದ್ದೋನು ಅಂತರೆ ಸಾರ್?"

"ಕೆಲವು ಸಂದರ್ಭದಲ್ಲಿ ಅನಿವಾರ್ಯವಾಗಿ ಹೇಳಬೇಕಾಗುತ್ತೆ, ಏನು ಮಾಡಕ್ಕಾಗಲ್ಲ"

"ನಿಮ್ಮನ್ನ ಸಾಹಿತ್ಯ ಲೋಕದ ದೇವೇಗೌಡ ಅಂತಾರಲ್ಲ ಯಾಕ್ ಸಾರ್?"

"ಯಾರು ಹಾಗೇಳ್ತರೆ ಅಂತ ನನಿಗ್ಗೊತ್ತು, ಅಂತ ಅಲ್ಪಮತಿಗಳ ಬಗ್ಗೆ ನಾನೇನು ಹೇಳಕ್ಕೋಗಲ್ಲ."

"ದೇವೇಗೌಡ್ರು ಭ್ರಷ್ಟರ ಬಗ್ಗೆ ನಾನೇನೂ ಹೇಳಕ್ಕೋಗಲ್ಲ ಅಂತಾರಲ್ಲಾ, ಅಂಗೇಳ್ತೀರಲ್ಲ ಸಾರ್."

"ಆ ಕಾಲದಿಂದ್ಲೂ ನಮ್ಮನ್ನ ಕಂಡರಾಗದ ಸಣ್ಣ ಜನಗಳು ಏನೇನೂ ಟೀಕೆ ಮಾಡಿದಾರೆ. ಇಂದೂ ಮಾಡ್ತಾರೆ. ಮುಂದೂ ಮಾಡ್ತಾರೆ. ಅದಕ್ಕೆಲ್ಲಾ ನಾವು ತಲೆಕೆಡಿಸಿಕೊಬಾರ್ದು."

"ತೇಜಸ್ವಿಯವರು ನಿಷ್ಕಾರಣವಾಗಿ ಯಾರನ್ನು ಟೀಕೆ ಮಾಡಿದೋರಲ್ಲ, ಅಂಥವರೂ ಕೂಡ ನಿಮ್ಮ ಕಾರ್ಯವೈಖರಿಗೆ ಹೆದರಿದ್ದು ಸುಳ್ಳೆ."

"ಒಳ್ಳೆಯವರ ಹೊಟ್ಟೇಲಿ ಒಳ್ಳೆ ಮಕ್ಕಳು ಹುಟ್ಟಲ್ಲ"

"ನಿಮ್ಮ ಮಗನ ತರ?"

"ನನ್ನ ಮಗ ಏನು ಮಾಡಿದಾನೆ?"

"ಇದೇನ್ ಸಾರ್ ಹಿಂಕೇಳ್ತೀರಿ? ಆತ ಮಾಡಿರೊ ಭ್ರಷ್ಟಾತಿಭ್ರಷ್ಟ ಕೆಲಸಗಳನ್ನ ಮುಚ್ಚಾಕೋದಕ್ಕೆ ನೀವು ಪಟ್ಟ ಪಾಡನ್ನ ನಾವು ಕಣ್ಣಾರೆ ಕಂಡೊ. ಕಡೆಗೆ ನೀವು ಪುಟ್ಟಪರ್ತಿ ಮೊರೆಹೋಗಿದ್ದನ್ನ ನೋಡಿ ನೀವು ಕುವೆಂಪು ಶಿಷ್ಯರಾಗಿದ್ದಕ್ಕೂ ಸಾರ್ಥಕ ಅನ್ಕಕೊಂಡು ಸುಸ್ತಾದೊ ಸಾರ್."

"ಸಾಯಿಬಾಬಾರನ್ನ ನಾನು ಪೂಜ್ಯ ಭಾವನೆಯಿಂದ ನೋಡೋದು ನನ್ನ ವೈಯಕ್ತಿಕ ವಿಷಯ. ಅದಕ್ಕೂ ಕುವೆಂಪು ಬಗೆಗಿನ ನನ್ನ ಭಕ್ತಿಗೂ ಏನು ಸಂಬಂಧ?"

"ನಲ್ಲೂರು ಪ್ರಸಾದನ ತರ ಮಾತಾಡಬೇಡಿ ಸಾರ್. ನಾವು ಏಕಕಾಲಕ್ಕೆ ದೆವ್ವನಿಗೂ ದೇವನಿಗೂ ನಿಷ್ಠರಾಗಿರೋಕ್ಕಾಗಲ್ಲ. ಕುವೆಂಪುರವರ ವೈಚಾರಿಕ ಕ್ರಾಂತಿಯ ಮುಂಚೂಣಿ ನಾಯಕರಂಗೆ ಕಾಣ್ತಿದ್ದ ನೀವು, ಬೂದಿಬಾಬನ ಭಕ್ತರೂ ಆಗಿದ್ದುದು ಈ ನಾಡಿನ ದುರಂತ."

"ಅಷ್ಟಕ್ಕೂ ನೀವು ಕುವೆಂಪುರವರನ್ನ ಏನು ತಿಳಕೊಂಡಿದ್ದಿರಿ. ಅವರೂ ಕೂಡ ಪುನರ್ಜನ್ಮ ಕರ್ಮಫಲಗಳನ್ನೆಲ್ಲಾ ನಂಬುತ್ತಿದ್ರು. ಕೃಷ್ಣನಿಗೆ ದೋಸೆ ತಿನ್ನಿಸಿದ್ದಿನಿ ಅಂತ ದಾಖಲಿಸಿದ್ದಾರೆ ಗೊತ್ತ. ಆ ದಿಸೆಯಲ್ಲಿ ನನಿಗೆ ಕುವೆಂಪು ಸಾಯಿಬಾಬ ಎಲ್ಲಾ ಒಂದೇ ಸ್ಥಾನದಲ್ಲಿ ಕಾಣ್ತಾರೆ."

"ಕರ್ನಾಟಕ ರತ್ನ ಪ್ರಶಸ್ತಿ ವೇಸ್ಟಾಯಿತಲ್ಲ ಸಾರ್?"


"ಯಾಕ್ರಿ ಹಾಗಂತೀರ?"

"ಮತ್ತೆ ಕುವೆಂಪು ಎಲ್ಲಿ, ಸಾಯಿಬಾಬ ಎಲ್ಲೀ? ಅವರಿಬ್ಬರನ್ನ ಒಂದೇ ತರ ನೋಡ್ತಿರಲ್ಲ ಸಾರ್. ನನಿಗೇನೊ ನಿಮ್ಮ ಕೈಗೆ ಕುವೆಂಪು ಸಿಕ್ಕಿದ್ದು ಕಾಂಗ್ರೆಸ್‌ನೋರ ಕೈಗೆ ಗಾಂಧಿ ಸಿಕ್ಕಿದಂಗಾಯ್ತು. ತೇಜಸ್ವಿ ಹೋರಾಡಿ ನಿಮ್ಮಿಂದ ಕುವೆಂಪುರವರ ಪಾರ್ಥೀವ ಶರೀರ ಬಿಡಿಸಿಗಂಡೋಗಿ ಕುಪ್ಪಳ್ಳಿಲಿ ಸಮಾದಿ ಮಾಡಿದ್ರು. ಈಗ ನಾವು ಕುವೆಂಪುರವರನ್ನ ನಿಮ್ಮಿಂದ ಸಂಪೂರ್ಣ ಬಿಡಿಸಿಕೊಬೇಕಾಗ್ಯದೆ ಸಾರ್. ಯಾಕೆಂದ್ರೆ ಒಂದೊಂದು ಸತಿ ಜಾತಿ ಎತ್ತಿಕಟ್ಟಿ ಮಾತಾಡ್ತಿರಿ, ಭ್ರಷ್ಟ ಮಗನ ಪರ ಬೀದಿಲೆ ಉಪವಾಸ ಕೂರ್ತಿರಿ. ಕುವೆಂಪು ಹೆಸರೇಳಿಕೊಂಡು ಕಾಂಪ್ಲೆಕ್ಸ್ ಕಟ್ಟಿಸಿ, ಬಾಡಿಗೆ ಕೊಡ್ತಿರಿ. ಬಾಡಿಗೆ ತಡ ಆದ್ರೆ ಚಡಪಡುಸ್ತಿರಂತೆ. ಆದರೂ ಒಂದು ಕೆಟ್ಟ ಸರಕಾರ ನಿಮ್ಮನ್ನ ಕರ್ನಾಟಕ ರತ್ನ ಅಂದುಬಿಡ್ತು, ಯಾಕೆಂದ್ರೆ ಅದಕೂ ಅನಿವಾರ್ಯತೆಯಿತ್ತು. ಒಂದುಕಾಲ್ದಲ್ಲಿ ತುಕ್ಕೆ ಎತ್ತಿನಷ್ಟು ಒಳ್ಳೆ ಮನುಷ್ಯರಾಗಿದ್ರಿ ನೀವು. ಅಲ್ಲ ಹಾಳಾಗೋಗ್ಲಿ, ಇನ್ನು ಮುಂದಾದ್ರು ಆ ಪ್ರಶಸ್ತಿಗೆ ಗೌರವ ಬರೊತರ ಇರಿ ಸಾರ್. ಸಾರ್? ಹಲೋ? ಹಲೋ? ಹಲೋ?....."

ಥೂತ್ತೇರಿ!!!

# ಕಾರ್ಬನ್ ಜಾನಿ ಅಂತ ಯಾಕಂತಾರೆಂದರೆ

"ಇನ್ಸ್‌ಪೆಕ್ಟರ್ ಜನಾರ್ದನ ಕೆಲಕಾಲ ಟ್ರಾಫಿಕ್ ಪೊಲೀಸ್ ಆಗಿದ್ದ. ಆಗ ಯಾರಾದರೂ ಟ್ರಾಫಿಕ್ ರೂಲ್ಸ್ ಉಲ್ಲಂಘಿಸಿದರೆ ಅಂತವರನ್ನು ಹಿಡಿದು ದಂಡ ವಸೂಲಿ ಮಾಡುತ್ತಿದ್ದ. ಆದರೆ ರಸೀದಿ ಬರೆಯುವಾಗ ಎಂದೂ ಕಾರ್ಬನ್ ಕಾಪಿ ಹಾಕುತ್ತಿರಲಿಲ್ಲ, ಅಂದರೆ ಕೊಡುವ ರಸೀದಿ ಸರ್ಕಾರದ್ದೇ ಆದರೂ ವಸೂಲಾದ ಫೈನಲ್ ಮೊತ್ತ ಸರ್ಕಾರಕ್ಕೆ ಸೇರದೆ ಜಾನಿ ಜೇಬಿಗೆ ಹೋಗುತ್ತಿತ್ತು. ಆಗಿನಿಂದಲೂ ಇವನಿಗೆ ಇಲಾಖೆಯಲ್ಲಿ ಕಾರ್ಬನ್ ಜಾನಿ ಎಂಬ ಅಡ್ಡ ಹೆಸರಿದೆ.



# ಗೃಹ ಸಚಿವರೆ.... 'ಕಾರ್ಬನ್ ಜಾನಿ' ಜೊತೆಗೂ ಡೀಲಾ?

ರಾಜ್ಯದ ಗೃಹ ಸಚಿವ ಆರ್.ಅಶೋಕ್ ಹೀನ, ಅಸಹ್ಯ ಕೆಲಸವೊಂದನ್ನು ಮಾಡಿದ್ದಾರೆ.

ದಕಾಯಿತರಿಂದ ಲಂಚ ಕಿತ್ತು ಸಿಕ್ಕಿಬಿದ್ದಿದ್ದ ಮೈಕೋಲೇಔಟ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಜನಾರ್ದನನ ಸಸ್ಪೆಂಡ್ ಆದೇಶ ರದ್ದು ಮಾಡಿದ್ದಾರೆ. ಈ ಖದೀಮನ ವಿರುದ್ಧ ನಡೆಯಬೇಕಿದ್ದ ಇಲಾಖಾ ತನಿಖೆಗೆ ಬ್ರೇಕ್ ಹಾಕಿಸಿದ್ದಾರೆ. ಇದಿಷ್ಟೇ ಅಲ್ಲ ಇನ್ಸ್‌ಪೆಕ್ಟರ್ ಜನಾರ್ದನ ಅಲಿಯಾಸ್ 'ಕಾರ್ಬನ್ ಜಾನಿ'ಯನ್ನು ಈಗ ಅತಿ ಗಣ್ಯವ್ಯಕ್ತಿಗಳ ಸೆಕ್ಯೂರಿಟಿ ವಿಭಾಗಕ್ಕೆ ತಂದು ಕೂರಿಸಿಬಿಟ್ಟಿದ್ದಾರೆ.

ಹೀಗೆ ಕಡುಭ್ರಷ್ಟ ಎನಿಸಿಕೊಂಡಿದ್ದ, ಲಂಚ ತಗೊಂಡು ರೆಡ್‌ಹ್ಯಾಂಡಾಗಿ ಸಿಕ್ಕಿ ಬಿದ್ದಿದ್ದ ಕಾರ್ಬನ್ ಜಾನಿಯನ್ನು ರಕ್ಷಿಸುವ ಕೆಲಸವನ್ನು ಗೃಹ ಸಚಿವ ಅಶೋಕ್ ಮಾಡಿದ್ದಾರೆ.

ಈ ಅಸಹ್ಯಕರ ಘಟನೆಯು ಇಡೀ ರಾಜ್ಯದ ಪೊಲೀಸ್ ಇಲಾಖೆಯನ್ನೇ ಬೆಚ್ಚಿ ಬೀಳಿಸಿದೆ.

ಜೈಲಿಗೆ ಹೋಗೇಹೋಗುತ್ತಾನೆ ಎಂದು ಎಲ್ಲರೂ ಅಂದುಕೊಳ್ಳುತ್ತಿರುವಾಗ ಇನ್ಸ್‌ಪೆಕ್ಟರ್ ಜನಾರ್ದನ್ ಮತ್ತೆ ಡ್ಯೂಟಿಗೆ ಬಂದಿರುವುದು ಆಶ್ಚರ್ಯಕರವಾಗಿದೆ.

ಈ ಜನಾರ್ದನ್ ಎಂತವನೆಂದು ಹೇಳಲು ಮುತ್ತೂಟ್ಟು ಫೈನಾನ್ಸ್ ದರೋಡೆ ಪ್ರಕರಣವನ್ನು ಇಲ್ಲಿ ಪ್ರಸ್ತಾಪಿಸಲೇಬೇಕು. ಇದು ಜೀವನಭೀಮಾ ನಗರದಲ್ಲಿದೆ.

## ಮುತ್ತೂಟ್ಟು ಕಳ್ಳನೊಂದಿಗೆ ಜಾನಿ ಶಾಮೀಲಾದ

2010ರ ಜೂನ್ 18ರಂದು ಬೆಂಗಳೂರಿನ ತಾವರೆಕೆರೆ ಮೈನ್ ರೋಡಿನಲ್ಲಿರುವ 'ಮುತ್ತೂಟ್ಟು ಮಿನಿ ನಿಧಿ' ಆಫೀಸ್‌ನಲ್ಲಿ ಒಂದು ಭಾರೀ ಡಕಾಯಿತಿ ಆಯಿತು. ಅದೇ ದಿನ ಮುತ್ತೂಟ್ಟು ಫೈನಾನ್ಸ್ ಕಂಪೆನಿಯ ಶಾಖಾ ಮ್ಯಾನೇಜರ್ ರವಿಚಂದ್ರ ಶೆಟ್ಟಿ ಕಾಣೆಯಾಗಿದ್ದರು. ಆಗ ಮೈಕೋಲೇಔಟಿನ ಠಾಣೆಯಲ್ಲಿ ಇನ್ಸ್‌ಪೆಕ್ಟರ್ ಆಗಿದ್ದ ಜನಾರ್ದನ್ ಈ ಪ್ರಕರಣದ ತನಿಖೆ ಮಾಡಲು ಹೊರಟ.

ಕೆಲ ದಿನಗಳಲ್ಲೇ ನಿರ್ಮಲ್ ರಾಜ್‌ಕುಮಾರ್ ಎಂಬಾತ ಸಿಕ್ಕಿಬಿದ್ದ. ಅವನ ಜೊತೆಗಿದ್ದ ಏಳು ಜನ ದಕಾಯಿತರೇ ಮುತ್ತೂಟ್ಟು ಫೈನಾನ್ಸ್ ಅನ್ನು ದೋಚಿದ್ದರು. ನಿರ್ಮಲ್ ಅಂಡ್ ಗ್ಯಾಂಗ್ ಅನ್ನು ಎಳೆತಂದು ಠಾಣೆಯ ಲಾಕಪ್‌ನಲ್ಲಿಟ್ಟ ಜನಾದನ್ ಏಳು ದಿನವಾದರೂ ಮೇಲಧಿಕಾರಿಗಳಿಗೆ ಮಾಹಿತಿ ಕೊಡಲಿಲ್ಲ, ಒಂದು ಎಫ್‌ಐಆರ್ ಅಂತ ಹಾಕಲಿಲ್ಲ. ಎಳೆತಂದವರು. ಮುತ್ತೂಟ್ಟುನಿಂದ ಎರಡು ಕೆ.ಜಿ.ಚಿನ್ನ ದೋಚಿದ್ದರು. ಅವತ್ತಿನ ಮಾರ್ಕೆಟ್ ರೇಟಿನಲ್ಲೇ ಆ ಚಿನ್ನಕ್ಕೆ ಮೂವತ್ತು ಲಕ್ಷ ರೂಪಾಯಿಗಿಂತ ಜಾಸ್ತಿ ಬೆಲೆಯಿತ್ತು.

ಇದೆಲ್ಲ ತಿಳಿದುಕೊಂಡ ಜನಾರ್ದನ್ ಅನಾಮತ್ತು ಮೂರೂವರೆ ಲಕ್ಷ ರೂಪಾಯಿಗೆ ಒಂದು ಡೀಲ್ ಕುದುರಿಸಿಕೊಂಡು ಅವರನ್ನೆಲ್ಲ ಬಿಟ್ಟು ಕಳಿಸಿಬಿಟ್ಟ. ಆ ಖದೀಮರು ಹಣ ಇಲ್ಲವೆಂದು ಹೇಳಿದಾಗ ಅವರ ಹತ್ತಿರ ಇದ್ದ ಕದ್ದ ಚಿನ್ನವನ್ನೇ ಮಾರಿಸಿ ಜನಾರ್ದನ್ ಹಣ ಕಿತ್ತುಕೊಂಡಿದ್ದ. ಆದರೆ ಈ ವಿಚಾರ ಬಹಳ ದಿನ ಗುಟ್ಟಾಗಿ ಉಳಿಯಲಿಲ್ಲ, ಡಕಾಯಿತರಾದ ನಿರ್ಮಲ್, ಜೈಕುಮಾರ್, ಭಾಸ್ಕರನ್, ದಾಸಪ್ರಕಾಶ್, ಮಣಿವಣ್ಣನ್, ಸುರೇಶ್, ಸೇತುಮನೋಜ್ ಹಾಗೂ ಲಾರೆಲ್ ಭಯಂಕರ ಖದೀಮರಾಗಿದ್ದರು.

ಆ ಬಗ್ಗೆ ಅನುಮಾನವಿದ್ದ ಮೈಕೋ ಠಾಣೆಯ ಕಾನ್‌ಸ್ಟೇಬಲ್ ಒಬ್ಬ ಹಿರಿಯ ಅಧಿಕಾರಿಗಳಿಗೆ ಜನಾರ್ದನ್ ಡೀಲ್ ಬಗ್ಗೆ ಮಾಹಿತಿ ಕೊಟ್ಟುಬಿಟ್ಟ.

ಜನಾರ್ದನ ವಿರುದ್ಧ ಇಲಾಖೆಯ ಹಿರಿಯ ಅಧಿಕಾರಿಗಳು ಕಣ್ಣಿಟ್ಟರು. ಮೊದಮೊದಲು ಮುತ್ತೂಟ್ಟು ಡಕಾಯಿತಿ ಕೇಸಿನಲ್ಲಿ ಕಂಪೆನಿಯ ನೌಕರರೇ ಶಾಮೀಲಾಗಿದ್ದಾರೆಂಬ ಡೌಟು ಪೊಲೀಸರಿಗಿತ್ತು. ಫೈನಾನ್ಸ್ ಕಂಪೆನಿಯ ಒಂದು ಸೆಟ್ ಬೀಗದ ಕೈಗಳು ಮ್ಯಾನೇಜರ್ ರವಿಚಂದ್ರ ಶೆಟ್ಟಿ ಬಳಿ ಇದ್ದರೆ ಇನ್ನೊಂದು ಸೆಟ್ ಯಶೋಧ ಎಂಬ ನೌಕರಳ ಬಳಿ ಇರುತ್ತಿತ್ತು. ದರೋಡೆ ಪ್ರಯತ್ನ ನಡೆದ ಕೇವಲ 2 ದಿನ ಮೊದಲು ಯಶೋಧಳ ಬ್ಯಾಗನ್ನು ಸೆಂಟ್ ಜಾನ್ ಆಸ್ಪತ್ರೆಯ ಬಳಿ ಯಾರೋ ಕಿತ್ತುಕೊಂಡು ಹೋಗಿದ್ದರು. ಮಡಿವಾಳ ಠಾಣೆಯಲ್ಲಿ ಈ ಬಗ್ಗೆ ಯಶೋಧ ಕಂಪ್ಲೇಂಟೂ ಕೊಟ್ಟಿದ್ದರು. ಮತ್ತೊಂದೆಡೆ ನಾಪತ್ತೆಯಾಗಿದ್ದ ಮ್ಯಾನೇಜರ್ ರವಿಚಂದ್ರ ಶೆಟ್ಟಿಯ ಮಗಳು ಶ್ರದ್ಧಾ ಕೂಡ ಪೊಲೀಸರಿಗೆ ದೂರು ನೀಡಿದ್ದಳು.

ಇವೆರಡೂ ಘಟನೆಯಲ್ಲೂ ನಿರ್ಮಲ್ ಗ್ಯಾಂಗ್‌ನ ಕೈವಾಡವಿತ್ತು. ಬೀಗದ ಕೈಗಾಗಿ ಅವರು ಈ ಕೆಲಸ ಮಾಡಿದ್ದರು. ಇಷ್ಟೆಲ್ಲ ದುರ್ಘಟನೆಗಳು ನಡೆದ ನಂತರವೂ ಇನ್ಸ್‌ಪೆಕ್ಟರ್ ಜನಾರ್ದನ್ ಅದೇ ಡಕಾಯಿತರೊಂದಿಗೆ ಶಾಮೀಲಾಗಿ ಹಣ ಕಿತ್ತು ಬಿಟ್ಟು ಕಳಿಸುತ್ತಾನೆಂದರೆ ಏನೆನ್ನಬೇಕು?

## ಇಂದಿರಾನಗರದಲ್ಲಿ ನಿರ್ಮಲ್ ಡಕಾಯಿತಿ

ತಾವರೆಕೆರೆಯಲ್ಲಿ ಮುತ್ತೂಟ್ಟು ಫೈನಾನ್ಸ್ ಕಚೇರಿ ದರೋಡೆಗೆ ಯತ್ನಿಸಿದ್ದ ಇದೇ ನಿರ್ಮಲ್ ರಾಜ್‌ಕುಮಾರ್ ಗ್ಯಾಂಗ್ ಇಂದಿರಾನಗರದ ಮುತ್ತೂಟ್ಟು ಫೈನಾನ್ಸ್ ಕಚೇರಿ ಬೀಗ ಮುರಿದು ಆರು ಕೋಟಿ ರೂಪಾಯಿ ದೋಚಿತ್ತು. ಸಿಸಿಬಿ ಪೊಲೀಸರು ಬಹಳ ಶ್ರಮಪಟ್ಟು ದೆಹಲಿ, ಪಂಜಾಬ್, ಮುಂಬೈ, ಹೈದರಾಬಾದ್, ಕೇರಳ, ಚೆನ್ನೈಗಳೆಲ್ಲಾ ಹುಡುಕಿ ನಿರ್ಮಲ್ ಗ್ಯಾಂಗ್ ಅನ್ನು ಅರೆಸ್ಟ್ ಮಾಡಿ ತಂದಿದ್ದರು. ಇದು ನಡೆದದ್ದು 2009ರ ಜೂನ್‌ನಲ್ಲಿ, ಅವತ್ತಿನ ದರೋಡೆ ಅತ್ಯಂತ ಸಿನಿಮೀಯವಾಗಿತ್ತು. ಮ್ಯಾನೇಜರ್ ಐಸಾಕ್ ರಾಜನನ್ನೇ ಎತ್ತಾಕಿಕೊಂಡು ಹೋಗಿ ಕಚೇರಿ ಬೀಗದ ಕೈ ಕಿತ್ತುಕೊಂಡಿದ್ದರು. ಈ ಖದೀಮರು. ಅದಕ್ಕೂ ಮುನ್ನ ಮುತ್ತೂಟ್ಟು ಫೈನಾನ್ಸ್‌ನ ಪಕ್ಕದಲ್ಲೇ ಕಂಪ್ಯೂಟರ್ ಸಂಬಂಧಿತ ಅಂಗಡಿ ತೆರೆದು ನಿಗಾ ಮಾಡುತ್ತಾ ಅವಕಾಶಕ್ಕಾಗಿ ಕಾಯುತ್ತಿದ್ದರು.

ಇವೆಲ್ಲ ಆಗಿ ನಂತರ ಪೊಲೀಸರಿಗೆ ಸಿಕ್ಕಿಬಿದ್ದು ಜಾಮೀನು ಪಡೆದು ಬಂದಾದ ಮೇಲೆ ನಿರ್ಮಲ್ ಗ್ಯಾಂಗ್ ತಾವರೆಕೆರೆಯ ಮುತ್ತೂಟ್ಟು ಫೈನಾನ್ಸ್‌ಗೆ ಕನ್ನ ಹಾಕಿದ್ದರು.

ಇಲ್ಲಿ ದಿಗ್ಭ್ರಮೆಯಾಗುವ ವಿಚಾರ ಏನೆಂದರೆ ನಿರ್ಮಲ್ ಗ್ಯಾಂಗ್ ಅನ್ನು ಅರೆಸ್ಟ್ ಮಾಡಿದ್ದ ಇನ್ಸ್‌ಪೆಕ್ಟರ್ ಜನಾರ್ದನ್‌ಗೆ ಇದೆಲ್ಲವೂ ಗೊತ್ತಿತ್ತು. ಆದರೂ ಅವರ ಹತ್ತಿರವೇ ಲಂಚ ಕಿತ್ತು ಬಿಟ್ಟು ಕಳಿಸಿದ್ದ.

## ಇಲಾಖಾ ತನಿಖೆ ಏನಾಯಿತು

ನಿರ್ಮಲ್ ಗ್ಯಾಂಗ್‌ನೊಂದಿಗೆ ಇನ್ಸ್‌ಪೆಕ್ಟರ್ ಜನಾರ್ದನ ಶಾಮೀಲಾಗಿದ್ದ. ವಿಚಾರ ಪ್ರಾಥಮಿಕ ತನಿಖೆಯಿಂದ ಹೊರ ಬೀಳುತ್ತಿದ್ದಂತೆ ಜನಾರ್ದನ್ ತಲೆಮರೆಸಿಕೊಂಡ. ಸ್ಪೆಂಡಾದರೂ ಹೊಸಬರಿಗೆ ಚಾರ್ಜ್ ಕೊಡದೆ ಸರ್ವೀಸ್ ರಿವಾಲ್ವರ್ ಸಮೇತ ಓಡಿಹೋಗಿದ್ದ. ಅರೆಸ್ಟಾಗುವುದರಿಂದ ಪಾರಾಗಲು ಪೊಲೀಸರಿಗೆ ಯಾಮಾರಿಸುತ್ತಾ ಕಾಲದೂಡಿದ್ದ. ಇದೆಲ್ಲ ಐಪಿಸಿ ಸೆಕ್ಷನ್ 120-ಬಿ ಅರೆಸ್ಟಾಗಬೇಕಾದ ಅಪರಾಧಗಳಾಗಿದ್ದವು.

ಆದರೆ 2010ರ ನವೆಂಬರ್‌ನಿಂದ ಜನಾರ್ದನನ ಕಣ್ಣಾಮುಚ್ಚಾಲೆ ನಡೆದೇ ಇತ್ತು. ಈಗ ನೋಡಿದರೆ ಜನಾರ್ದನ್ ಅರೆಸ್ಟಾಗುವುದಿರಲಿ, ಅವನ ಸಸ್ಪೆಂಡ್ ಆದೇಶವನ್ನೇ ರದ್ದು ಮಾಡಿ ಪುನಃ ಸೇವೆಗೆ ತೆಗೆದುಕೊಳ್ಳಲಾಗಿದೆ.

ಬಿಜೆಪಿ ಶಾಸಕ ನಂದೀಶ್ ರೆಡ್ಡಿಯ ಪ್ರಭಾವ ಇದಕ್ಕೆ ಕಾರಣ ಎನ್ನಲಾಗಿದೆ. ಅದೇನೇ ಇರಲಿ...

ಒಬ್ಬ ಪೊಲೀಸ್ ಇನ್ಸ್‌ಪೆಕ್ಟರ್ ಡಕಾಯಿತರ ಜೊತೆ ಶಾಮೀಲಾಗಿ ಕ್ರಿಮಿನಲ್‌ನಂತೆ ವರ್ತಿಸಿದರೆ ಬಿಜೆಪಿ ಸರ್ಕಾರದಲ್ಲಿ ಶಿಕ್ಷೆಯಾಗುವ ಬದಲಿಗೆ ರಕ್ಷಣೆ ಸಿಗುತ್ತದೆಂದರೆ ಏನು ಗತಿ?

ಪೊಲೀಸ್ ಇಲಾಖೆಯಲ್ಲಿ ಶಿಸ್ತು, ನೈತಿಕತೆ ಉಳಿಯುತ್ತದೆಯೇ? ಅಸಲಿಗೆ ಪೊಲೀಸರಿಗೂ ಕಳ್ಳರಿಗೂ ವ್ಯತ್ಯಾಸವಾದರೂ ಇರುತ್ತದೆಯೇ?

ಇದರಲ್ಲಿ ಡೀಲ್ ಎಷ್ಟು ಲಕ್ಷಕ್ಕೆ ಕುದುರಿರಬಹುದು ಎಂಬುದೇ ಬಾಕಿ ಇರುವ ಪ್ರಶ್ನೆ?

ಕರ್ನಾಟಕ ಪೊಲೀಸರ ಇತಿಹಾಸದಲ್ಲೇ ಇಂತಹ ಪ್ರಕರಣ ನಡೆದಿರಲಿಲ್ಲ.

ಗೃಹ ಸಚಿವ ಅಶೋಕ ಆ ಹುದ್ದೆಗೆ ನಾಲಾಯಕ್ ಎಂಬುದು ಜನಾರ್ದನನ ಪ್ರಕರಣ ಸಾರಿ ಸಾರಿ ಹೇಳುತ್ತಿದೆ.

• ಪಾರ್ವತೀಶ

## ಆರ್.ಟಿ.ನಗರದಲ್ಲೊಬ್ಬಳು ಪದ್ಮ...!

"ಇನ್ಸ್‌ಪೆಕ್ಟರ್ ಜನಾರ್ದನನ ಗಲೀಜು ವೃತ್ತಾಂತ ಮುತ್ತೂಟ್ಟು ಫೈನಾನ್ಸ್ ಹಗರಣಕ್ಕೆ ಮಾತ್ರ ಸೀಮಿತವಾಗಿಲ್ಲ, ಮೈಕೋ ಲೇಔಟ್ ಠಾಣೆಗೆ ಬರುವ ಮುನ್ನ ಜನಾರ್ದನ್ ಕೆಲಕಾಲ ಸಿಸಿಬಿಯಲ್ಲಿದ್ದ. ಮಾದಕ ದ್ರವ್ಯ ಹಾಗೂ ಮಹಿಳಾ ಸಾಗಾಣಿಕೆ ವಿಭಾಗದಲ್ಲಿದ್ದವನು ತಾನೇ ಆರ್.ಟಿ.ನಗರದ ಮಸಾಜ್ ರಾಣಿ ಪದ್ಮಾಳ ಗೆಳೆತನ ಬೆಳೆಸಿಕೊಂಡ. ತಾನು ಇಲಾಖೆಯಲ್ಲಿ ಕದಿಯುತ್ತಿದ್ದ ಹಣವನ್ನೆಲ್ಲ ಪದ್ಮಾ ಮೂಲಕ ಫೈನಾನ್ಸ್ ದಂಧೆಗೆ ಹರಿಸುತ್ತಿದ್ದ. ಪದ್ಮಾಳ ಜೊತೆ ಜನಾರ್ದನ್ ಯಾವ ವ್ಯವಹಾರ ಕುದುರಿಕೊಂಡಿದ್ದನೆಂದರೆ ಕೊನೆಗೆ ಅವನ ಮನೆಯವರೇ ಲಾಬಿ ನಡೆಸಿ ಟ್ರಾನ್ಸ್‌ಫರ್ ಮಾಡಿಸಿಬಿಟ್ಟರು. ಆದರೇನು ಜನಾರ್ದನ್ ಈಗಲೂ ಮಸಾಜ್ ಪಾರ್ಲರ್ ಪದ್ದು ಜೊತೆ ವ್ಯವಹಾರವಿಟ್ಟುಕೊಂಡಿದ್ದಾನೆ. ಹಣಕಾಸು ದಂಧೆಯೂ ಮೊದಲಿನಂತೆ ನಡೆದೇ ಇದೆ.



# ನಿತ್ಯಾನಂದನ ಬಗಲಲಿ ಮುತಾಲಿಕ್ ಮುಲುಕಿದ್ದು!

ಹಿಂದೂ ಧರ್ಮದ ಎದೆಮೇಲೆ ದಂಧೆಯ ದುಖಾನು ತೆರೆದಿರುವ ಪ್ರಮೋದ್ ಮುತಾಲಿಕ್ ಮತ್ತೆ ಮುಲುಕಿದ್ದಾನೆ. ಕೆಲದಿನಗಳಿಂದ ತನ್ನ ಹರುಕು ಬಾಯಿಗೆ ಆಹಾರ ಸಿಗದಂತೆ ತೆಪ್ಪಗಿದ್ದ ಈತ ಸೆಕ್ಸ್ ಸ್ವಾಮಿ ನಿತ್ಯಾನಂದನೊಂದಿಗೆ ಬಾಗಲಕೋಟೆಯ ಜಮಖಂಡಿಯಲ್ಲಿ ಪ್ರತ್ಯಕ್ಷನಾಗಿದ್ದಾನೆ. ಈ ಕಳ್ಳ-ಮಳ್ಳರ ಹಿಂದೆಮುಂದೆ ಈ ಸೀಮೆಯ ಕೆಲ ಮುಖರಹಿತ ಬೀಡಾಡಿ ಸ್ವಾಮಿಗಳೂ ಠಳಾಯಿಸಿ ಖುಷಿ ಅನುಭವಿಸಿವೆ!

ಇದು ಶ್ರೀರಾಮ ಸೇನೆ ಹಿಂದೂ ಜನಜಾಗೃತಿ ಸಮಾವೇಶದ ಹೆಸರಲ್ಲಿ ನಡೆಸಿರುವ ಅಡ್ನಾಡಿ ಕೆಲಸ. ಜಮಖಂಡಿಯ ಕೆ.ಆರ್.ಕಾಲೇಜು ಮೈದಾನದಲ್ಲಿ ನಡೆದ ಈ ಸಮಾವೇಶ ಕಾಮಕಾಂಡದಲ್ಲಿ ಸಕಲ ಮಾನಮರ್ಯಾದೆ ಕಳಕೊಂಡಿರುವ ನಿತ್ಯಾನಂದ ಸ್ವಾಮಿಗಳನ್ನು ಮೆರೆದಾಡಿಸಲೆಂದೇ ಆಯೋಜಿಸಿರುವಂಥಾದ್ದು. ವೇದಿಕೆಯಲ್ಲಿದ್ದ ಅಷ್ಟೂ ಪ್ರಭೃತಿಗಳನ್ನು ಗಮನಿಸಿದರೆ ಇದು ನಿಜಕ್ಕೂ ಬರಗೆಟ್ಟವರಿಗೋಸ್ಕರವೇ ನಡೆಸಿದ ಸಮಾವೇಶವೆಂಬುದು ಸ್ಪಷ್ಟವಾಗುತ್ತದೆ. ಈ ವೇದಿಕೆಯಲ್ಲೇ ಮುತಾಲಿಕ ಮತ್ತೊಮ್ಮೆ ತನ್ನ ಕೋಮು ವಿಷಮಿಶ್ರಿತ ದಗಲ್ಬಾಜಿಗಳನ್ನ ಹರಿಬಿಟ್ಟಿದ್ದಾನೆ. ಇವನ ಮಾತಿನ ಪ್ರಕಾರ ನಿತ್ಯಾನಂದ ಸ್ವಾಮಿಗಳ ಪ್ರಭೆ ಅಂತಿಂಥದ್ದಲ್ಲ. ಈತ ದೇಶವಿದೇಶಗಳಲ್ಲಿ ಮುಸ್ಲಿಂ-ಕ್ರಿಶ್ಚಿಯನ್ ಧರ್ಮಗಳಿಗೆ ಮತಾಂತರ ಹೊಂದಿದ್ದ ಸಹಸ್ರಾರು ಹಿಂದೂಗಳನ್ನು ಮರಳಿ ಮಾತೃಧರ್ಮಕ್ಕೆ ಎಳೆತಂದ ಧರ್ಮಾತ್ಮ. ಸದಾಕಾಲ ಧರ್ಮರಕ್ಷಣೆಗೆಂದೇ ಟೊಂಕ ಕಟ್ಟಿ ನಿಲ್ಲುವ ಧರ್ಮರಕ್ಷಕ!

ಮೇಲ್ಕಂಡಂತೆ ಮುತಾಲಿಕ್ ನಿತ್ಯಾನಂದನನ್ನು ತುಂಬಿದ ಸಭೆಯಲ್ಲಿ ಗುಣಗಾನ ಮಾಡುತ್ತಿದ್ದರೆ ನೆರೆದಿದ್ದವರೆಲ್ಲ ಅಸಹ್ಯದಿಂದ ಮುಖ ಕಿವುಚಿಕೊಳ್ಳುತ್ತಿದ್ದರು. ಇದೆಲ್ಲವನ್ನು ಲೆಕ್ಕಿಸದೆ ಮುಂದುವರೆದ ಮುತಾಲಿಕ್ 'ಇನ್ನು ಮುಂದೆ ಸ್ವಾಮೀಜಿಗಳ ಬಗ್ಗೆ ಯಾರಾದರೂ ಕೆಟ್ಟದಾಗಿ ಮಾತಾಡಿದರೆ, ಮಾಧ್ಯಮಗಳು ಈ ಬಗ್ಗೆ ಸುಖಾ ಸುಮ್ಮನೆ ಅಪಪ್ರಚಾರ ಮಾಡಿದರೆ ನಾವು ಸುಮ್ಮನಿರುವುದಿಲ್ಲ' ಅಂತಲೂ ಅಬ್ಬರಿಸಿದ!

ಮುತಾಲಿಕ್‌ನ ಇಂಥ ಮುಲುಕಾಟಗಳೇನೂ ಅಚ್ಚರಿಯ ವಿಚಾರವಲ್ಲ, ಯಾಕೆಂದರೆ ಇದು ನಿತ್ಯಾನಂದನನ್ನು ಕಾಮದ ಕೊಳಕಿನಿಂದ ಹೊರತಂದು, ಇತರೆ ಮಠಾಧೀಶರ ಅನುಕಂಪ ಗಿಟ್ಟಿಸುವ ಅಜೆಂಡಾದೊಂದಿಗೆ ಅವತರಿಸಿದ ಸಮಾವೇಶ. ಒಂದು ಮೂಲದ ಪ್ರಕಾರ ಮುತಾಲಿಕ್ ನಿತ್ಯನ ಕಡೆಯಿಂದ ಅಖಂಡ ಹತ್ತು ಲಕ್ಷ ಕಿತ್ತುಕೊಂಡಿದ್ದಾನೆ. ನೆನಪಿರಲಿ, ಇದು ಈ ಸಮಾವೇಶದ ಬಾಬತ್ತಷ್ಟೇ!

ನಿತ್ಯಾನಂದನ ಯೋಗ್ಯತೆಗಳು, ಆತ ನಡೆಸುವ ಅಸಲೀ ದಂಧೆಗಳು ಲೋಕಕ್ಕೆ ತಿಳಿದಿರುವ ವಿಚಾರ. ಮುತಾಲಿಕನ ವ್ಯಕ್ತಿತ್ವ ಕೂಡಾ ಕರ್ನಾಟಕದ ಜನರಿಗೆ ಗೊತ್ತಿಲ್ಲದ್ದೇನಲ್ಲ. ಈತ ಮದ್ದು ಅಂತೊಂದು ಸಿಕ್ಕಿದರೆ ರೇಪಿಸ್ಟ್‌ಗಳಾಗಲಿ, ದರೋಡೆಕೋರರೇ ಇರಲಿ-ಯಾರ ಪರವಾಗಿ ಬೇಕಾದರೂ ಗಂಟಲು ಹರಿದುಕೊಳ್ಳುತ್ತಾನೆ. ಆತ ಹಿಂದೂ ಆಗಿರಬೇಕೆಂಬುದಷ್ಟೇ ಸದ್ಯದ ಮಾನದಂಡ. ನಿತ್ಯಾನಂದ ನಟಿಯೊಂದಿಗೆ ರಾಸಲೀಲೆ ನಡೆಸಿ ಜೈಲಿಗೆ ಹೋಗಿ ವಾಪಸಾದಾಗಲೂ ಮುತಾಲಿಕ ಆತನ ಯೋಗಕ್ಷೇಮ ವಿಚಾರಿಸಿಕೊಂಡು ಬಂದಿದ್ದ. ಆಗಲೂ ಸಹ ಕಾಮುಕನ ಪರವಾಗಿಯೇ ಒದರಾಡಿದ್ದ. ಅದು ನಿಜಕ್ಕೂ ಕಮಾಯಿಯ ಪೀಠಿಕೆ. ಅದೀಗ ದೊಡ್ಡ ಮಟ್ಟದಲ್ಲಿ ಫಲ ನೀಡಿದೆ.

ಸೆಕ್ಸ್ ಸ್ವಾಮಿ ನಿತ್ಯಾನಂದ ತನಗಂಟಿರುವ ಕಾಮದ ಕೆಸರು ಕೊಡವಿಕೊಳ್ಳಲು ಇನ್ನಿಲ್ಲದಂತೆ ಹೆಣಗಾಡುತ್ತಿದ್ದಾನೆ. ತಾನು ಸಾಚಾ ಅಂತ ಭಕ್ತರ ಬಾಯಿಂದಲೇ ಹೇಳಿಸಿದರೂ, ತನ್ನ ವಿರುದ್ಧ ಷಡ್ಯಂತ್ರ ನಡೆಯುತ್ತಿದೆಯೆಂದು ಗೋಳಾಡಿದರೂ, ಕೊನೆಗೆ ಅದ್ಯಾವುದೋ ದೇಶದಿಂದ ಡಾಕ್ಟರೇಟು ಖರೀದಿಸಿದರೂ ಮೈಗಂಟಿದ ಕೆಸರು ಕರಗುತ್ತಿಲ್ಲ. ಇಂಥ ಸ್ಥಿತಿಯಲ್ಲಿರುವ ನಿತ್ಯ ವೇದಿಕೆಯೊಂದಕ್ಕೆ ಹುಡುಕಾಡುತ್ತಿದ್ದ. ಇತ್ತ ಹಿಂದೂ ಧರ್ಮ ರಕ್ಷಣೆಯ ನೆಪದಲ್ಲಿ ನಡೆಸಿದ ಸಕಲ ದಂಧೆಗಳೂ ಗೋತಾ ಹೊಡೆದು, ಅರ್ಜೆಂಟಿಗೆ ಹೋರಾಟ ನಡೆಸಲು ಯಾವ ಸರಕುಗಳೂ ಇಲ್ಲದೆ ಮುತಾಲಿಕನೂ ಕಂಗಾಲಾಗಿದ್ದ. ಸಹಜವಾಗಿಯೇ ಕಮಾಯಿಯ ರೂಟುಗಳೂ ಬಂದ್ ಆಗಿದ್ದವು. ಈ ರೀತಿ ಬರಗೆಟ್ಟು ನಿಂತಿರುವ ಈ ಇಬ್ಬರೂ ಜೊತೆಗೂಡಿ ಜಮಖಂಡಿಯ ನೆಲದಲ್ಲಿ ಸಮಾವೇಶಗೊಂಡಿದ್ದು ವಾಸ್ತವ.

ಜನರಿಗೆ ಸ್ವಲ್ಪವಾದರೂ ನಂಬಿಕೆ ಬರುವಂತೆ ಮಾಡಬೇಕಲ್ಲ? ಅದಕ್ಕಾಗಿಯೇ ಕೆಲ ಕೆಲಸಿಲ್ಲದ ಬೀಡಾಡಿ ಸ್ವಾಮಿಗಳನ್ನೂ ಕರೆಸಿದ. ಅದರಂತೆ ಬಿಜಾಪುರದ ಬಬಲೇಶ್ವರ ಮಠದ ಬಸವರಾಜ ಸ್ವಾಮಿ, ಅಂದೋಲ ಕರುಣೇಶ್ವರ ಮಠದ ಸಿದ್ದಲಿಂಗ ಮಹಾಸ್ವಾಮಿಯಂಥ ಕಾಂಜಿಪೀಂಜಿಗಳು ವೇದಿಕೆಯಲ್ಲಿ ನಿಂತು ಹಲ್ಕಿರಿದವು. ಈ ಸಮಾವೇಶಕ್ಕೆ ನಾಲ್ಕೈದು ಸಾವಿರ ಜನ ಸೇರಿದ್ದು ನಿಜ. ಇದನ್ನೇ ಮುತಾಲಿಕ್ ಮತ್ತು ನಿತ್ಯಾನಂದ ತಂತಮ್ಮ ಜನಪ್ರಿಯತೆಯೆಂದು ಬೀಗಿದ್ದಾರೆ. ಆದರೆ ಬಹುತೇಕ ಜನರು ಮಾಧ್ಯಮಗಳಲ್ಲಿ ನಿತ್ಯನ ರಾಸಲೀಲೆ ಕಂಡು ಕುತೂಹಲಗೊಂಡು ಆತನನ್ನೊಮ್ಮೆ ಲೈವ್ ಆಗಿ ನೋಡುವ ಉದ್ದೇಶದಿಂದ ಸೇರಿದ್ದರಷ್ಟೇ.

ವಾಸ್ತವವೆಂದರೆ ನಿತ್ಯಾನಂದನನ್ನು ಈ ಸಮಾವೇಶಕ್ಕೆ ಕರೆಸಿದ್ದರ ವಿರುದ್ಧ ವ್ಯಾಪಕವಾಗಿ ಅಸಹನೆಗಳಿವೆ. ಖುದ್ದು ಬಿಜೆಪಿ ಕಾರ್ಯಕರ್ತರೇ ಈ ಬಗ್ಗೆ ದನಿಯೆತ್ತಿದ್ದರು. ಇದೇ ವಿಚಾರವಾಗಿ ಬಿಜೆಪಿ-ಶ್ರೀರಾಮಸೇನೆ ಕಾರ್ಯಕರ್ತರ ನಡುವೆ ಹೊಡೆದಾಟಗಳೂ ನಡೆದು ಪೊಲೀಸರ ಮಧ್ಯಸ್ಥಿಕೆಯಲ್ಲಿ ಇತ್ಯರ್ಥಗೊಂಡಿತ್ತು. ಮುತಾಲಿಕ ನಿತ್ಯಾನಂದನನ್ನು ಊರು ತುಂಬಾ ಮೆರವಣಿಗೆ ನಡೆಸಿ ಆಶೀರ್ವಾದ ಕೊಡಿಸೋ ಕಾರ್ಯಕ್ರಮ ಇಟ್ಟುಕೊಂಡಿದ್ದನಾದರೂ ಜನಸಾಮಾನ್ಯರು ನಿತ್ಯಾನಂದನಿಂದ ದೂರವಿದ್ದರು.

ಒಟ್ಟಾರೆಯಾಗಿ ಮುತಾಲಿಕ ತನ್ನ ಎಂದಿನ ಚಾಳಿಯನ್ನು ಮತ್ತೆ ಪ್ರದರ್ಶಿಸಿದ್ದಾನಷ್ಟೆ. ಈ ಸಮಾವೇಶದ ವಿಚಾರಕ್ಕೆ ಬಂದರೆ, ನಿತ್ಯಾನಂದನಿಂದ ಹಣ ಪೀಕಿದ್ದಲ್ಲದೆ, ಸಿದ್ದು ಸವದಿಯಂಥವರಿಂದಲೂ ತಿರುಪೆ ಎತ್ತಿದ್ದಾನೆ. ಮುತಾಲಿಕನ ಬಾಲಬಡುಕರೂ ಕೂಡಾ ಶಕ್ತ್ಯಾನುಸಾರ ಎತ್ತುವಳಿ ನಡೆಸಿದ್ದಾರೆ. ಮುತಾಲಿಕ್‌ನಂಥವರು ಏನೇ ತಿಪ್ಪರಲಾಗ ಹಾಕಿದರೂ ಜನಮಾನಸದಲ್ಲಿ ನೆಲೆಗೊಂಡ ನಿತ್ಯಾನಂದನ ಯೋಗ್ಯತೆ ಬದಲಾಗುವುದಿಲ್ಲ. ಅದೆಷ್ಟೇ ಪ್ರಯತ್ನಪಟ್ಟರೂ ಮುತಾಲಿಕನ ಅಸಲಿಯತ್ತುಗಳು ಹೊರಬೀಳದಿರುವುದಿಲ್ಲ.


ಮುತಾಲಿಕ್ ನಿತ್ಯಾನಂದನಂಥ ರೇಪಿಸ್ಟ್‌ಗಳ ಬಗಲಲ್ಲಿ ನಿಂತು ಏನೇನೋ ಒದರಾಡುವಂಥ ಮಾನಗೆಟ್ಟವನು. ಇಂಥವನ ಜೊತೆ ವೇದಿಕೆ ಹಂಚಿಕೊಳ್ಳುವ ಸ್ವಾಮೀಜಿಗಳೆನಿಸಿಕೊಂಡವರಿಗಾದರೂ ಮರ್ಯಾದೆ ಬೇಡವೇ?

❖

# ದೊಡ್ಡಬಳ್ಳಾಪುರ: ಬಿಜೆಪಿ ನಾಯಕ ಹನುಮಂತರಾಯಪ್ಪ ಬಡವಿಧವೆಯನ್ನು ಬೀದಿಗೆ ಹಾಕಿದ

ಅಧಿಕಾರ ಸಿಕ್ಕ ಸೌಭಾಗ್ಯಕ್ಕೆ ಬಿಜೆಪಿಯ ಪದಾಧಿಕಾರಿಗಳು ಹೇಗೆಲ್ಲಾ ಜನಸೇವೆ, ದರಿದ್ರ ನಾರಾಯಣರ ಸೇವೆ, ರೈತ ಕಾಳಜಿ ಮೆರೆಯುತ್ತಿದ್ದಾರೆಂಬುದಕ್ಕೆ ಇಲ್ಲೊಂದು ಉದಾಹರಣೆಯಿದೆ.

ಸದ್ಯ ಬಿಜೆಪಿಯ ರಾಜ್ಯ ಸಮಿತಿ ಸದಸ್ಯನಾಗಿರುವ ದೊಡ್ಡಬಳ್ಳಾಪುರ ಮೂಲದ ಕೆ.ಎಂ. ಹನುಮಂತರಾಯಪ್ಪ ಹಾಲಿ ರೇಷ್ಮೆ ಮಾರಾಟ ಮಂಡಳಿಯ ಅಧ್ಯಕ್ಷ. ಈ ಹಿಂದೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಬಿಜೆಪಿ ಅಧ್ಯಕ್ಷನಾಗಿದ್ದ. ಹುಟ್ಟಾ ಆರೆಸ್ಸೆಸ್ ಮತ್ತು ಅನಂತ್‌ಕುಮಾರ್ ಪಕ್ಕಾ ಬಂಟ. ಒಂದಾನೊಂದು ಕಾಲಕ್ಕೆ ದೊಡ್ಡಬಳ್ಳಾಪುರ ಪುರಸಭೆಯ ಅಧ್ಯಕ್ಷನಾಗಿದ್ದು ಈಗ ಅದೇ ದೊಡ್ಡಬಳ್ಳಾಪುರದ ವಿದ್ಯಾನಗರ ವಾರ್ಡಿನಿಂದ ಗೆದ್ದು ಕೌನ್ಸಿಲರ್ ಕೂಡ ಆಗಿರುವ ರಾಜ್ಯ ಬಿಜೆಪಿ ಪದಾಧಿಕಾರಿ ಹನುಮಂತರಾಯಪ್ಪನಿಗೆ ಬಿಜೆಪಿಗೆ ಅಧಿಕಾರ ಸಿಕ್ಕಿದ್ದೇ ಮದ, ಮಾತ್ಸರ್ಯ, ಮೋಹಗಳೆಲ್ಲವೂ ಏಕಾಏಕಿ ಉಲ್ಬಣಿಸಿದಂತಾಗಿದೆ.



ಹನುಮಂತರಾಯಪ್ಪ

ಇದರ ಪ್ರತಿಫಲವೇ ನಿರ್ಗತಿಕ ವಿಧವೆ ಪಾಪಮ್ಮ ಮತ್ತು ಆಕೆಯ ಇಡೀ ಕುಟುಂಬವನ್ನು ಹನುಮಂತರಾಯಪ್ಪನ ಬಿಜೆಪಿ ಗ್ಯಾಂಗ್ ಬೀದಿಪಾಲು ಮಾಡಿದ್ದು-

ದೊಡ್ಡಬಳ್ಳಾಪುರದ ವೀರಭದ್ರನಪಾಳ್ಯದ ಸ.ನಂ. 67/2 ರಲ್ಲಿ ಪಾಪಮ್ಮನಿಗೆ ಸೇರಿದ 3.14 ಎಕರೆ ಜಮೀನಿತ್ತು. ಮೂಲತಃ ಇದು ಹೊನ್ನೂರಪ್ಪನ ಮಗ ಆಂಜನಪ್ಪನಿಗೆ ಸೇರಿತ್ತು. ಈ ಆಂಜನಪ್ಪನ ಮಗ ಕೃಷ್ಣಪ್ಪನ ವಿಧವಾ ಪತ್ನಿಯೇ ಪಾಪಮ್ಮ. ಆಂಜನಪ್ಪ ಕೂಡ ತೀರಿಕೊಂಡಾಗಿದೆ. ಪಾಪಮ್ಮನ ಮಗಳೇ ಶಾಂತಮ್ಮ. ಪಾಪಮ್ಮನ ಪತಿ ಕೃಷ್ಣಪ್ಪನ ಅಣ್ಣ ಹೊನ್ನೂರಪ್ಪ ಕೂಡ ನಿಧನಗೊಂಡಿದ್ದರಿಂದ ಆತನ್ನ ಪತ್ನಿ ಗೌರಮ್ಮನ ಹೆಸರಿಗೆ ಈ ಜಮೀನು ಪಹಣಿ ಖಾತೆಯಾಗಿದೆ. ಹೀಗಿರುವಾಗಲೇ ಪಾಪಮ್ಮ, ಆಕೆಯ ಮಗಳು ಶಾಂತಮ್ಮ, ಶಾಂತಮ್ಮನ ಗಂಡ ರಾಮಣ್ಣ ಮುಂತಾದವರೆಲ್ಲ ಆಸ್ತಿಯಲ್ಲಿ ತಮಗೂ ಪಾಲುಬೇಕೆಂದು ಕೇಸು ಹಾಕಿದ್ದಾರೆ.

ಸತ್ತ ಅಣ್ಣತಮ್ಮಂದಿರ ಪತ್ನಿಯರಿಬ್ಬರೂ ಆಸ್ತಿಗಾಗಿ ಕೋರ್ಟು ಹತ್ತಿದ್ದನ್ನೇ ಕಾಯುತ್ತಿದ್ದ ಬಿಜೆಪಿ ನಾಯಕ ಹನುಮಂತರಾಯಪ್ಪ ತನ್ನ ರಿಯಲ್ ಎಸ್ಟೇಟ್ ಚೇಲಾಗಳಾದ ಉಮಾಶಂಕ್ರ ಆಲಿಯಾಸ್ ಪುಟಾಣಿ ಮತ್ತು ದೊಡ್ಡಮನಿ ನಾಗಪ್ಪನ ಮಗ ಡಿ. ಗಣೇಶ್ ಎಂಬಿಬ್ಬರನ್ನು ವಿಧವೆಯರ ವಿರುದ್ಧ ಛೂಬಿಟ್ಟ. ಹೇಗೂ ಮೈದುನನ ಪತ್ನಿಗೆ ಬೇರೆ ಪಾಲು ಕೊಡಬೇಕೆಂದು ದುರಾಶೆಗೆ ಬಿದ್ದ ಶಾರದಮ್ಮ ಹನುಮಂತರಾಯಪ್ಪ ಕೊಟ್ಟ ಪುಡಿಕಾಸಿಗೆ ಸಹಿಹಾಕಿ ಕೊಟ್ಟಳು. ಆದರೆ ಪಾಪಮ್ಮ ಜಗ್ಗಲಿಲ್ಲ. ಅದಕ್ಕೆ ಹನುಮಂತರಾಯಪ್ಪ ತನ್ನ ಖತರ್‌ನಾಕ್ ತಲೆ ಓಡಿಸಿದ್ದೇ ಪಾಪಮ್ಮನ ಸಹಿಯನ್ನೇ ಫೋರ್ಜರಿ ಮಾಡಿ ದೊಡ್ಡಬಳ್ಳಾಪುರದ ಕೋರ್ಟಿಗೆ ನಕಲಿ ದಾಖಲೆ ಸಲ್ಲಿಸಿಬಿಟ್ಟ. ಇದಕ್ಕೂ ಮುನ್ನ ವಿಲ್ ಬರೆದಿಟ್ಟಂತೆ ಹೊನ್ನೂರಪ್ಪನ ಸಹಿಯನ್ನು ಇದೇ ಹನುಮಂತರಾಯಪ್ಪನ ಗ್ಯಾಂಗ್ ಫೋರ್ಜರಿ ಮಾಡಿತ್ತು.

ಈ ಬಗ್ಗೆ ಪಾಪಮ್ಮ ಪೊಲೀಸರಿಗೆ ದೂರು ಕೊಟ್ಟರೆ ದೊಡ್ಡಬಳ್ಳಾಪುರ ಪೊಲೀಸ್ ಠಾಣೆಯಲ್ಲಿದ್ದದ್ದು ಈತನೇ ಹಾಕಿಸಿಕೊಂಡ ಪೊಲೀಸ್ ಪ್ರವೀಣರು. ಕೋರ್ಟಿಗೆ ಅರ್ಜಿ ಸಲ್ಲಿಸಬೇಕೆಂದರೆ ಈ ಸಂಬಂಧ ಕ್ಲರ್ಕುಗಳನ್ನೇ ಆತ ಸರಿ ಮಾಡಿಕೊಂಡಿದ್ದ. ಕೊನೆಗೆ ವಿಧಿಯಿಲ್ಲದೇ ಪಾಪಮ್ಮ ತನ್ನ ಪಾಲಾದರೂ ಬರಲಿ ಎಂದು ಹನುಮಂತರಾಯಪ್ಪನ ಕಾಲಿಗೆ ಬಿದ್ದಿದ್ದಾಳೆ. ಈತನಿಗೂ ಇಷ್ಟೇ ಸಾಕಿತ್ತು, ನೋಡಮ್ಮಾ ನಿನಗೆ 25 ಲಕ್ಷ ಕೊಡ್ತೀನಿ. ನಾನು ಹೇಳಿದಲ್ಲಿಗೆ ಸಹಿ ಹಾಕಿಕೊಡು. ನಿನ್ನ ಮಗಳು ಅಳಿಯಂದಿರ ಪಾಲನ್ನು ನಾನೇ ಸೆಟಲ್ ಮಾಡ್ತೀನಿ ಎಂದು ಪಾಪಮ್ಮನನ್ನು ನಂಬಿಸಿದ.

25 ಲಕ್ಷ ಬರುತ್ತದೆಯಲ್ಲಾ ಎಂದು ಆಸೆಗೆ ಬಿದ್ದ ಪಾಪಮ್ಮ ಹನುಮಂತರಾಯಪ್ಪ ಕೇಳಿದಲ್ಲಿಗೆಲ್ಲಾ ಸಹಿ ಹಾಕಿಕೊಟ್ಟಳು. ಓದಲು ಬಾರದ, ಕಣ್ಣು ಕಾಣದ ಹಣ್ಣು ಮುದುಕಿ ಪಾಪಮ್ಮ ಹನುಮಂತರಾಯಪ್ಪ ಕೊಟ್ಟ ಹಣದ ಕಂತೆಯನ್ನು ತಂದು ಮನೆಯಲ್ಲಿ ಎಣಿಸುತ್ತಾಳೆ; ಇದ್ದದ್ದು ಬರೇ ಎರಡೂವರೆ ಲಕ್ಷ!

ಎದೆ ಬಡಿದುಕೊಂಡು ಕಣ್ಣೀರಿಟ್ಟಳು ಪಾಪಮ್ಮ. ಮಗಳು ಶಾಂತಮ್ಮ ಹೋಗಿ ಮಾಡಿದ್ದು ನ್ಯಾಯವಾ ಎಂದು ಕೇಳಿದರೆ ಬಿಜೆಪಿ ನಾಯಕ ರಾಯಪ್ಪ ನಿನ್ನ ತಾಯಿ 25 ಲಕ್ಷ ಕೊಂಡೊಯ್ದಿದ್ದಾಳೆ ಎಂದೇ ದಬಾಯಿಸಿಬಿಟ್ಟ. ಈ ಮಧ್ಯೆ ತನಗೆ ಮೋಸವಾಗಿದೆಯೆಂದು ಪಾಪಮ್ಮ ಕೋರ್ಟಿಗೆ ಅರ್ಜಿ ಹಾಕಿಕೊಂಡರೆ ಆಕೆಯ ವಕೀಲರನ್ನೇ ಬಿಜೆಪಿ ಗ್ಯಾಂಗ್ ಬುಟ್ಟಿಗೆ ಹಾಕಿಕೊಂಡಿತ್ತು. ಹಾಕಿದ ಕೇಸೂ ವಜಾ ಆಯಿತು.

ಕಮ್ಮಿಯೆಂದರೂ ಎಕರೆಗೆ ಒಂದು ಕೋಟಿಯ ಮಾರ್ಕೆಟ್ ರೇಟಿರುವ ಸೊತ್ತು. ಮಧುರೆ ರಸ್ತೆಯ ಕೊಂಗಾಡಿಯಪ್ಪ ಕಾಲೇಜ್ ಪಕ್ಕದ ದುಬಾರಿ ಆಸ್ತಿ. ಇದರ ಅರ್ಧವೆಂದರೂ ಪಾಪಮ್ಮನ ಕುಟುಂಬಕ್ಕೆ ಒಂದು ಮುಕ್ಕಾಲು ಕೋಟಿ ಬರಬೇಕು. ಬಂದಿದ್ದು ಎರಡೂವರೆ ಲಕ್ಷ ಮಾತ್ರ. ಕನಿಷ್ಠ 75 ಸೈಟುಗಳಾಗಿ ವಿಂಗಡಿಸಿದರೂ ತಲಾ ಸೈಟೇ 10 ಲಕ್ಷದ ಬೆಲೆ ಬಾಳುತ್ತದೆ. ತಾನೆಲ್ಲಿ ಸಿಕ್ಕಿಬೀಳುತ್ತೇನೋ ಎಂದು ಪುಟಾಣಿ ಉಮಾಶಂಕ್ರನ ಮನೆಕೆಲಸದ ರಾಮಚಂದ್ರ, ಪಲ್ಲ ಲಕ್ಷ್ಮಿಕುಮಾರ್, ರತ್ನಮ್ಮ, ಶ್ರೀರಂಗಪಟ್ಟಣದ ನವೀನ್ ಕುಮಾರ್ ಹೆಸರಿಗೆ ವಿಂಗಡಿಸಿ ಮಾರಿದಂತೆ ರಿಜಿಸ್ಟ್ರೇಷನ್ ಮಾಡಿಸಿದ್ದ ಹನುಮಂತರಾಯಪ್ಪ ತಾನು ಅವರೆಲ್ಲರ ಸೇಲ್ ಡೀಡಿಗೆ ಸಾಕ್ಷಿ ಮಾತ್ರ ಹಾಕಿ ಕೊನೆಗೆ ಉಳಿದ 14 ಗುಂಟೆಯನ್ನು ಮಾತ್ರ ತನ್ನ ಹೆಸರಿಗೆ ಮಾಡಿಸಿಕೊಂಡಿದ್ದ.

ಹನುಮಂತರಾಯಪ್ಪ ಸದ್ಯ ರೇಷ್ಮೆ ಮಾರಾಟ ಮಂಡಳಿಯ ಅಧ್ಯಕ್ಷ. ಆತನದೇ ಪಕ್ಷ ಅಧಿಕಾರದಲ್ಲಿದೆ. ತನ್ನ ಸಹಿಯನ್ನು ಫೋರ್ಜರಿ ಮಾಡಿದ್ದೂ ಅಲ್ಲದೆ ತನ್ನ ಆಸ್ತಿ ವಂಚಿಸಿ ಕೊಟ್ಟ ಕಾಸಿಗೂ ಮೋಸ ಮಾಡಿದ್ದಾರೆಂದು ಪಾಪಮ್ಮ ಮತ್ತು ಮಕ್ಕಳು ಕಂಡಕಂಡ ಪೊಲೀಸ್ ಅಧಿಕಾರಿಗಳ ಕಾಲಿಗೆ ಬಿದ್ದು ಕಣ್ಣೀರಿಡುತ್ತಿದ್ದಾರೆ. ನ್ಯಾಯ ಕೊಡಿಸುವವರ್ಯಾರು?

ರಾಜ್ಯಮಟ್ಟದ ಬಿಜೆಪಿ ನಾಯಕನೊಬ್ಬ ಬಡ ವಿಧವೆಯ ಆಸ್ತಿ ನುಂಗಿ ಆಕೆಯ ಇಡೀ ಕುಟುಂಬವನ್ನು ಬೀದಿಪಾಲು ಮಾಡಿದ್ದಕ್ಕೆ ಕನಿಷ್ಠ ಬಿಜೆಪಿ ನಾಯಕರಾದರೂ ಉತ್ತರಿಸಬೇಕಲ್ಲವೆ? ಗೃಹಮಂತ್ರಿ ಅಶೋಕ್‌ಗೂ ಪಾಪಮ್ಮ ದೂರು ಕೊಟ್ಟಿದ್ದಾಳಂತೆ. ಆದರೆ ತನ್ನದೇ ಪಕ್ಷದ ರಾಜ್ಯ ಸಮಿತಿ ಸದಸ್ಯನ ವಿರುದ್ಧ ಅಶೋಕ್ ಆಗಲಿ, ಅವರ ಪೊಲೀಸ್ ಇಲಾಖೆಯಾಗಲಿ ಕೈಯೆತ್ತಬೇಕಲ್ಲ.

ರಾಮರಾಜ್ಯವೆಂದರೆ ಹೀಗಿರುತ್ತಾ?

• ರಾ.ಸೋ

ಕಾರ್ಟೂನ್ ಕಾರ್ನರ್





# ದರ್ಶನ್-ನಿಖಿತಾ ಸೀಕ್ರೆಟ್ ಸಂಸಾರ?

# ಕೈಹಿಡಿದ ಮಡದಿಯನ್ನೇ ಕೊಲ್ಲಲು ಹೊರಟ

ಕಾಮದಾಹ, ಮೋಹ, ಮದ ಸಿನಿಮಾ ಜಗತ್ತಿಗೆ ಹೊಸದಲ್ಲ. ಜೊತೆಗೆ ರೊಕ್ಕ-ಸೊಕ್ಕು ಸೇರಿಬಿಟ್ಟರೆ ಅದು ಚಾಲೆಂಜಿಂಗ್ ಸ್ಟಾರ್ ದರ್ಶನ್ ಆದರೂ ಅಷ್ಟೆ, ಗೋಲ್ಡನ್ ಸ್ಟಾರ್ ಗಣೇಶ್ ಆದರೂ ಅಷ್ಟೇ. ಇದಕ್ಕೊಂದು ಹಸಿಬಿಸಿ ಉದಾಹರಣೆಯಂತಿರುವುದು ವಿಜಯಲಕ್ಷ್ಮಿ ಎಂಬ ಹೆಣ್ಣುಮಗಳು ಅನುಭವಿಸಿದ ಚಿತ್ರಹಿಂಸೆ, ಅವಮಾನ ಮತ್ತು ದೌರ್ಜನ್ಯ. ಇದರ ಕಥಾನಾಯಕ ಮತ್ತು ಖಳನಾಯಕನೇ ಹೀರೋ ದರ್ಶನ್!

ಮೈತುಂಬಾ ಬಾಸುಂಡೆಗಳು, ಮುಷ್ಠಿ ಪ್ರಹಾರಕ್ಕೆ ಸಿಲುಕಿ ಕಪ್ಪಿಟ್ಟ ಮುಖ, ಮೂಗು ಬಾಯಿಂದ ಧಾರಾಕಾರ ಸುರಿದ ರಕ್ತ, ಆ ರಕ್ತದಿಂದ ತೋಯ್ದು ಒದ್ದೆಯಾದ ಆಕೆಯ ಬಟ್ಟೆಬರೆ, ಬಿದ್ದ ಒದೆಗೆ ಗುರುತೇ ಸಿಗಲಾರದ ಹಾಗೆ ಊದಿಕೊಂಡ ಆಕೆಯ ಚಹರೆ; ಒಂದೇ ಮಾತಲ್ಲಿ ಹೇಳಬೇಕೆಂದರೆ ಮನುಷ್ಯರಾದವರ್‍ಯಾರೂ ಆಕೆಯನ್ನು ಈ ಪರಿ ಹಿಂಸಿಸಲಾರರು. ಆದರೆ ಚಾಲೆಂಜಿಂಗ್ ಸ್ಟಾರ್ ದರ್ಶನ್‌ಗೆ ತನ್ನ ಪತ್ನಿಯನ್ನು ಕೊಂದಾದರೂ ಸರಿ, ನಿಖಿತಾ ಎಂಬ ವೈಯ್ಯಾರಿಯನ್ನು ಮದುವೆಯಾಗಬೇಕಾಗಿದೆ.

ಏಕೆಂದರೆ ಈ ರೀತಿ ಪೆಟ್ಟು ತಿಂದು ಜೀವಚ್ಛವವಾದವಳು ಹೀರೋ ದರ್ಶನ್‌ನ ಧರ್ಮಪತ್ನಿ ವಿಜಯಲಕ್ಷ್ಮಿ!

## ನಿಖಿತಾ ಜೊತೆ....

ಕೈಹಿಡಿದ ಮಡದಿಯನ್ನೇ ಸಿನಿಮಾದ ವಿಲನ್ನುಗಳನ್ನು ಬಡದಂತೆ ನೀರುಗಾಯಿ ಹೊಡೆದ ದರ್ಶನ್‌ನ ನೆರವಿಗೆ ಸದ್ಯ ಕಬ್ಬನ್‌ಪಾರ್ಕ್ ಎಸಿಪಿಯಾಗಿರುವ ದೇವರಾಜ್ ಏನಾದರೂ ಬರದೇ ಹೋಗಿದ್ದರೆ ಈ ಹೊತ್ತಿಗಾಗಲೇ ಆತ ಕಂಬಿ ಎಣಿಸಬೇಕಿತ್ತು. ಕಳೆದ ಕೆಲದಿನಗಳಿಂದ ಹೀರೋಯಿನ್ ನಿಖಿತಾ ಜೊತೆ ದರ್ಶನ್ ಹೊತ್ತಲ್ಲದ ಹೊತ್ತಲ್ಲಿ ಯುಬಿಸಿಟಿಯ ಬಿಯರ್ ಪಬ್‌ನಲ್ಲಿ ಇಟ್ಟಾಡುತ್ತಿದ್ದದ್ದು, ಚೆನ್ನೈನಲ್ಲಿ ಆಕೆಗೆಂದೇ ದರ್ಶನ್ ಫ್ಲಾಟ್ ಒಂದನ್ನು ಖರೀದಿಸಿಕೊಟ್ಟಿದ್ದು, ಬನ್ನೇರುಘಟ್ಟ ರಸ್ತೆಯ ಐಷಾರಾಮಿ ಅಪಾರ್ಟ್‌ಮೆಂಟ್ ಒಂದರಲ್ಲಿ ನಿಖಿತಾ ದರ್ಶನ್ ಇಬ್ಬರೂ ಸೀಕ್ರೆಟ್ ಸಂಸಾರ ಶುರು ಹಚ್ಚಿಕೊಂಡಿದ್ದು, ಶೂಟಿಂಗ್ ಮಧ್ಯೆಯೇ ಇಬ್ಬರೂ ಚಿತ್ರವಿಚಿತ್ರ ಅಂಗಚೇಷ್ಟೆ ನಡೆಸಲಾರಂಭಿಸಿದ್ದು ಇತ್ಯಾದಿಗಳೆಲ್ಲವೂ ಸಂಭವನೀಯ ಅನಾಹುತವೊಂದರ ಮುನ್ಸೂಚನೆಯಂತಿತ್ತು.

ಇದೆಲ್ಲಕ್ಕೂ ಪೂರಕವೆಂಬಂತೆ ಗಾಂಧಿನಗರದಲ್ಲೊಂದು ಕುಚೋದ್ಯ ತಲೆ ಎತ್ತಿತ್ತು. ಹಿಂದೆ ದುನಿಯಾ ವಿಜಿ ಹಾಕಿಕೊಂಡರೆ ಶುಭಾ ಪೂಂಜ ಫ್ರೀ ಎಂಬಂತೆ ದರ್ಶನ್ ಕಾಲುಶೀಟು ಸಿಕ್ಕರೆ ನಿಖಿತಾ ಫ್ರೀ ಎಂಬುದು ಓಪನ್ ಸೀಕ್ರೆಟ್ಟಾಗಿತ್ತು. ಯಾವ ಪತ್ನಿ ತಾನೇ ತನ್ನ ಗಂಡ ಯಾರೋ ಹೆಂಗಸಿನ ಜೊತೆ ಖುಲ್ಲಂಖುಲ್ಲಾ ಪ್ರಣಯದಾಟ ಶುರುವಿಟ್ಟಿದ್ದನ್ನು ಸಹಿಸಲು ಸಾಧ್ಯ. ಅದರಲ್ಲೂ ದರ್ಶನ್ ವಿಜಯಲಕ್ಷ್ಮಿಯ ಸಂಗಾತಿಯಾಗಿದ್ದೇ ಲವ್ ಮಾಡಿ. ಮೈಸೂರಿನ ಗೌರವಾನ್ವಿತ ಕುಟುಂಬವೊಂದರ ಹುಡುಗಿ ವಿಜಯಲಕ್ಷ್ಮಿಯನ್ನು ಕಾಲೇಜು ದಿನಗಳಲ್ಲೇ ದರ್ಶನ್ ಪ್ರೀತಿಸಿದ್ದ. ತಂದೆ ತೂಗುದೀಪರ ಮೇಲಿನ ಗೌರವಕ್ಕೆ ಶಿವಣ್ಣ ತನ್ನ ಯೂನಿಟ್ಟಿನಲ್ಲಿ ದರ್ಶನ್‌ಗೆ ಲೈಟ್‌ಬಾಯ್ ಕೆಲಸ ಕೊಟ್ಟಾಗಲೇ ವಿಜಯಲಕ್ಷ್ಮಿ ತನಗೆ ಮನೆಯಲ್ಲಿ ಕೊಡುತ್ತಿದ್ದ ನೂರು ರೂಪಾಯಿ ಪ್ಯಾಕೆಟ್ ಮನಿಯನ್ನು ದರ್ಶನ್ ಕೈಗಿತ್ತು ಪೊರೆದವಳು.

ಕೆಲಸವಿಲ್ಲದೆ ಗಾಂಧಿನಗರದಲ್ಲಿ ಇಟ್ಟಾಡುತ್ತಿದ್ದ ದರ್ಶನ್‌ನನ್ನು ಅಂಥಾ ದುರ್ಗತಿಯಲ್ಲಿ ಕೈಹಿಡಿದು ನೆರವಾದ ವಿಜಯಲಕ್ಷ್ಮಿಯನ್ನೇ ದರ್ಶನ್ ಮದುವೆಯಾದ. ಅದಕ್ಕೂ ಮುನ್ನ ಸಿನಿಮಾದ ಸಣ್ಣಪುಟ್ಟ ಪಾತ್ರಗಳಿಗೂ ದರ್ಶನ್ ಗಾಂಧಿನಗರದಲ್ಲಿ ಕಾಡಿಬೇಡುತ್ತಿದ್ದ ರೀತಿಯಿತ್ತಲ್ಲ; ಅದೇ ಒಂದು ಸಿನಿಮಾಕ್ಕಾಗುವಷ್ಟಿತ್ತು. ಅಣಜಿ ನಾಗರಾಜ್ ಜೊತೆ ಲಡಾಸು ಲೂನಾದಲ್ಲಿ ಸಂಜೆಯಾದರೆ ಸಾಕು ಹಿಮಾಲಯ ಸಂದಿಗೆ ಬಂದು ಹೊಟ್ಟೆತುಂಬುವಷ್ಟು ಅಗ್ಗದ ದನದ ಮಾಂಸ ತಿಂದದ್ದು, ತಿಂಗಳುಗಟ್ಟಲೆ ಎಸ್. ನಾರಾಯಣ್ ಮನೆ ಮುಂದೆ ಲೈಟು ಕಂಬಕ್ಕೆ ಒರಗಿ ನಿಂತು ಚಾನ್ಸ್‌ಗಾಗಿ ಅಂಗಲಾಚಿದ್ದು, ಮೆಜೆಸ್ಟಿಕ್‌ನ ಕೊಳಕು ಲಾಡ್ಜ್‌ಗಳಲ್ಲಿ ಐವತ್ತು ರೂಪಾಯಿಯ ಬೆಡ್‌ನಲ್ಲಿ ಮಲಗೆದ್ದು ಫುಟ್‌ಪಾತಿನಲ್ಲಿ ಕಳೆದದ್ದು, ಹೊಟ್ಟೆ ತುಂಬ ಊಟ ಕೊಟ್ಟರೆ ಸಾಕು. ಯಾವ ಪಾತ್ರ ಬೇಕಾದರೂ ಮಾಡ್ತೀನಿ ಎಂದು ಕಂಡಕಂಡವರೆದುರು ಕಣ್ಣೀರಿಟ್ಟಿದ್ದು; ಇಂಥ ದುರ್ಗತಿಯಲ್ಲೇ ವಿಜಯಲಕ್ಷ್ಮಿ ತನ್ನ ಪಾಕೆಟ್ ಮನಿಯನ್ನು ಜಮೆ ಮಾಡಿ ದರ್ಶನ್‌ನನ್ನು ಸಲುಹಿದ್ದಳು.

## ಪತ್ನಿ ವಿಜಯಲಕ್ಷ್ಮಿ

ಅಂಥಾ ನಿರ್ಗತಿಕನನ್ನೇ ಪ್ರೀತಿಸಿದ ಆಕೆಯ ಕಾಳಜಿಯನ್ನು ದರ್ಶನ್ ಮರೆತುಬಿಟ್ಟ. ಬಾಮಾ ಹರೀಶ್ ತನ್ನ ಮೆಜೆಸ್ಟಿಕ್ ಚಿತ್ರದಲ್ಲಿ ಅವಕಾಶ ಕೊಟ್ಟಿದ್ದು ಆತನ ಅದೃಷ್ಟದ ಹೆಬ್ಬಾಗಿಲಾಗಿತ್ತು. ಒಂದರ ಮೇಲೊಂದು ಅವಕಾಶ ಬಂತು. ಮೊದಮೊದಲು ವಿಧೇಯನಾಗೇ ಇದ್ದವನು ಕ್ರಮೇಣ ತನ್ನ ಸಂಭಾವನೆಯನ್ನು ಏರಿಸಲಾರಂಭಿಸಿದ. ವಿಜಯಲಕ್ಷ್ಮಿಯನ್ನು ಮದುವೆಯಾದ ಮೇಲಂತೂ ಆತನ ಸಂಭಾವನೆ ಕೋಟಿ ಮುಟ್ಟಿತ್ತು. ಈಗ ನಿಖಿತಾ ಎಂಬ ರಂಗೀಲಾ ಐಟಮ್ಮಿನ ಬೆನ್ನಿಗೆ ಬಿದ್ದಿದ್ದಾನೆ.

ದರ್ಶನ್-ನಿಖಿತಾ ಚಕ್ಕಂದ ಪತ್ನಿ ವಿಜಯಲಕ್ಷ್ಮಿಯ ಕಿವಿಗೆ ಬಿದ್ದಿದ್ದು ಇಲ್ಲಿಗೆ ವರ್ಷದ ಹಿಂದೆ. ಮೊದಮೊದಲು ಇದು ಸರಿಹೋಗಬಹುದೆಂದೇ ವಿಜಯಲಕ್ಷ್ಮಿ ಲೆಕ್ಕ ಹಾಕಿದ್ದು ಕ್ರಮೇಣ ಹುಸಿಯಾಗಿದೆ. 'ಯೋಧ' ಚಿತ್ರದಲ್ಲಿ ಶುರುವಾದ ಒಡನಾಟ ಕೊನೆಕೊನೆಗೆ ಯಾವ ಮಟ್ಟ ಮುಟ್ಟಿತೆಂದರೆ 'ಪ್ರಿನ್ಸ್' ಚಿತ್ರಕ್ಕೆ ಕಾಲ್‌ಶೀಟ್ ಕೊಡುವಾಗಲೇ ನಿಖಿತಾಳನ್ನು ಹೀರೋಯಿನ್ ಮಾಡಿದರಷ್ಟೇ ತಾನು ಕೋಆಪ್ರೇಟ್ ಮಾಡೋದು ಎಂದು ಶರತ್ತು ವಿಧಿಸಿದ್ದ. ಮುಂದೆ 'ಸಂಗೊಳ್ಳಿ ರಾಯಣ್ಣ' ಚಿತ್ರಕ್ಕೂ ಆಕೆಯನ್ನೇ ಹಾಕಿಕೊಳ್ಳುವಂತೆ ಕಂಡೀಷನ್ ಹಾಕಿಯೇ ದರ್ಶನ್ ಡೇಟು ಕೊಟ್ಟಿದ್ದ. ಬನ್ನೇರುಘಟ್ಟ ರಸ್ತೆಯಲ್ಲಿ ಆಕೆಗೊಂದು ಅಪಾರ್ಟ್‌ಮೆಂಟ್ ಖರೀದಿಸಿಕೊಟ್ಟಿದ್ದು, ಚೆನ್ನೈನಲ್ಲಿ ಆಕೆಯ ಹೆಸರಲ್ಲಿ ಮತ್ತೊಂದು ಫ್ಲಾಟ್ ಖರೀದಿಸಿದ್ದು, ಕ್ರಮೇಣ ಮನೆಗೆ ಬರುವುದನ್ನೇ ನಿಲ್ಲಿಸಿ ಆಕೆಯ ಜೊತೆಗೇ ಕದ್ದುಮುಚ್ಚಿ ಸಂಸಾರ ಆರಂಭಿಸಿದ್ದು ಇತ್ಯಾದಿಗಳೆಲ್ಲವನ್ನೂ ವಿಜಯಲಕ್ಷ್ಮಿ ಸದ್ದಿಲ್ಲದೇ ಗಮನಿಸಿದ್ದಾಳೆ.

ಇನ್ನು ತಡ ಮಾಡಿದರೆ ಅನಾಹುತ ಕಟ್ಟಿಟ್ಟಬುತ್ತಿ ಎಂಬುದು ಗ್ಯಾರಂಟಿಯಾಗಿದ್ದೇ ತಡ, ವಿಜಯಲಕ್ಷ್ಮಿಯ ಕಾರ್ಯಾಚರಣೆ ಶುರುವಾಗಿದೆ. ಇಲ್ಲಿಗೆ ತಿಂಗಳ ಹಿಂದೆ ನಿಖಿತಾಗೆ ಫೋನೆತ್ತಿಕೊಂಡಿದ್ದೇ ವಾಚಾಮಗೋಚರ ಉಗಿದಿದ್ದಾಳೆ. ಅದು ಎಂಥ ಗೃಹಿಣಿಯಾದರೂ ತನ್ನ ಗಂಡನ ಹಿತರಕ್ಷಣೆಗೆ ಮಾಡಬಹುದಾದ ಕೆಲಸವೆ. ಆದರೆ ನಿಖಿತಾ

ಅಕ್ಷರಶಃ ಕ್ರೂರ ಮೃಗದಂತಾಗಿದ್ದ ದರ್ಶನ್ ತಮ್ಮ ಮಾನಸಿಕ ಸ್ಥಿಮಿತವನ್ನೇ ಕಳಕೊಂಡಿದ್ದ. ರಕ್ತ ಕಾರುತ್ತಾ ಪತ್ನಿ ಅರೆಜೀವವಾಗಿ ಬಿದ್ದಿದ್ದರೆ ಈತ ಚಿತ್ರವಿಚಿತ್ರವಾಗಿ ಕಿರುಚಾಡುತ್ತಿದ್ದ. ಆತನ ಡ್ರೈವರ್ ಮತ್ತು ಮನೆಕೆಲಸದ ಹೆಂಗಸರು ಬಿಡಿಸಲು ಬಂದರೆ ಅವರನ್ನೇ ಹಿಡಿದು ಬಡಿದ. ಹೆಚ್ಚೂಕಮ್ಮಿ ಪ್ರಜ್ಞೆಯೇ ಇಲ್ಲದಂತೆ ಬಿದ್ದಿದ್ದ ಪತ್ನಿಯನ್ನು ಎತ್ತಿ ಮನೆಯೊಳಕ್ಕೆಸೆದಿದ್ದೇ ಕಾರೆತ್ತಿಕೊಂಡು ಸೀದಾ ನಿಖಿತಾಳ ಅಪಾರ್ಟ್‌ಮೆಂಟ್ ಹೊಕ್ಕು ಆಕೆಯನ್ನು ರಮಿಸಲಾರಂಭಿಸಿದ್ದ.



# ಪತ್ನಿಗಿಂತಲೂ ಆಸ್ತಿಯೇ ಮಿಗಿಲಂತೆ !



ದರ್ಶನ್‌ನ ಆಪ್ತರೇ ಹೇಳುವಂತೆ ಸದ್ಯ ಆತ ಪತ್ನಿಯನ್ನು ಓಲೈಸುತ್ತಿರುವುದು ತನ್ನ ತಪ್ಪನ್ನು ತಿದ್ದುಕೊಳ್ಳುವುದಕ್ಕಾಗಲಿ, ಪಶ್ಚಾತ್ತಾಪಕ್ಕಾಗಲಿ ಅಲ್ಲ. ಅಷ್ಟು ಸುಲಭಕ್ಕೆ ಆತ ನಿಖಿತಾಳನ್ನು ಬಿಡುವವನಲ್ಲ. ದೌಲತ್ತು, ದುರಹಂಕಾರ ಮತ್ತು ದುಡ್ಡಿನ ದಾಹಕ್ಕೆ ತನ್ನ ತಂದೆಯ ಹೆಸರು, ತಾಯಿಯ ಋಣ, ತಮ್ಮನ ಸಂಬಂಧ ಯಾವುದೂ ಆತನಿಗೆ ಮುಖ್ಯವಿಲ್ಲ. ಇದೇ ಪಶುವಾಂಛೆಗೆ ಬಿದ್ದು ಉಪಾಯವಾಗಿ ತನ್ನ ಪತ್ನಿಯನ್ನು ವಂಚಿಸುವುದು ಆತನ ಹುನ್ನಾರ. ಏಕೆಂದರೆ ರಾಜರಾಜೇಶ್ವರಿನಗರದ ಮನೆ ಬಿಟ್ಟರೆ ಮಿಕ್ಕೆಲ್ಲ ಆತನ ಆಸ್ತಿಯಿರುವುದು ಪತ್ನಿ ವಿಜಯಲಕ್ಷ್ಮಿಯ ಹೆಸರಲ್ಲಿ.



ಮೈಸೂರಿನ ತೋಟ, ಎಚ್.ಎಸ್.ಆರ್. ಲೇಔಟಿನ ಮೂರು ಸೈಟುಗಳು ಜೊತೆಗೆ ಮೈಸೂರು ರಸ್ತೆಯ ಇನ್ನೊಂದು ನಿವೇಶನ ಇರುವುದು ಪತ್ನಿ ವಿಜಯಲಕ್ಷ್ಮಿಯ ಹೆಸರಲ್ಲಿ. ಇತ್ತೀಚೆಗೆ ರಾಜಾಜಿನಗರದಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ಒಂದನ್ನು ಖರೀದಿಸಿ ಅದನ್ನೂ ಪತ್ನಿ ಹೆಸರಿಗೇ ಮಾಡಿದ್ದಾನೆ. ತಿಂಗಳೊಂದಕ್ಕೆ ಕಮ್ಮಿಯೆಂದರೂ 4 ಲಕ್ಷ ರೂಪಾಯಿಗಳ ಬಾಡಿಗೆ ವರಮಾನವಿರುವ ಈ ಕಾಂಪ್ಲೆಕ್ಸ್ ದರ್ಶನ್ ಪಾಲಿಗೆ ಎಟಿಎಂ ಇದ್ದಂತೆ. ಹಾಗೊಮ್ಮೆ ಪತ್ನಿಯೇನಾದರೂ ಕೈಬಿಟ್ಟಳೆಂದರೆ ಇಷ್ಟೂ ಆಸ್ತಿ ಕೈಬಿಡುತ್ತದೆ.

ಉಪಾಯವಾಗಿ ಪತ್ನಿಯನ್ನು ಯಾಮಾರಿಸಿ ಅಷ್ಟೂ ಆಸ್ತಿಯನ್ನು ಮತ್ತೆ ತನ್ನ ಹೆಸರಿಗೆ ಮಾಡಿಕೊಂಡು ಕ್ರಮೇಣ ಆಕೆಯನ್ನು ಮೈಸೂರಿಗೆ ಸಾಗಹಾಕಿ ಮೂಲೆಗುಂಪು ಮಾಡುವುದು, ತಾನು ಬೆಂಗಳೂರಿನಲ್ಲಿ ನಿಖಿತಾ ಜೊತೆ ಹಾಯಾಗಿರುವುದು, ಪತ್ನಿಯೇ ಮೇಲೆ ಬಿದ್ದು ಡೈವೋರ್ಸ್ ಕೇಳಿದಳೆಂದರೆ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತೆ. ಇದೇ ನಿಖಿತಾ ಜೊತೆ ಮದುವೆಗೂ ಲೈಸೆನ್ಸಿದ್ದಂತೆ. ಇದು ದರ್ಶನ್‌ನ ದುರಾಶೆ. ನಿಖಿತಾ ಮುಂಬಯಿ ಹುಡುಗಿ. ತೆಲುಗು, ತಮಿಳಿನಲ್ಲಿ ಬೇಕಾಬಿಟ್ಟಿ ಐಟಮ್ ಸಾಂಗನ್ನೂ ಬಿಡದೇ ಕುಣಿದವಳು. ಸಿನಮಾ ಜಗತ್ತಿನ ಮರ್ಮ ಬಲ್ಲವಳು. ಶೋಷಣೆಗೆ ಮೈ ಒಡ್ಡಿದರಷ್ಟೇ ಇಲ್ಲಿ ಉಳಿಯಲು ಸಾಧ್ಯ ಎಂಬುದು ಆಕೆಗೆ ಚೆನ್ನಾಗಿ ಗೊತ್ತು. ಇಂಥವಳು ದರ್ಶನ್‌ನ ಮನೆ ಚಾಕರಿ ಮಾಡಿಕೊಂಡು ಉಳಿಯುವುದುಂಟಾ? ಬಣ್ಣದ ಚಟ್ಟಿಗೆ ಬಣ್ಣದ ಬದುಕೇ ಬೇಕು. ಮೂರ್ಖ ದರ್ಶನ್‌ಗೆ ಸತ್ಯ ಅರ್ಥವಾಗುವುದು ಬಹುಶಃ ಕೈಸುಟ್ಟ ನಂತರವೇ ಇರಬೇಕು.

...ರ್ವಮಾಡಿಕೊಳ್ಳಬೇಕಲ್ಲ. ಯಾರ ಸಂಸಾರ ...ಾದರೇನು? ಆಕೆಗೆ ಬೇಕಿರುವುದು ಛಾನ್ಸು, ...ಕ್ಕ ಮತ್ತು ಸುಖ!

## ರೌದ್ರಾವತಾರ

...ಹಿಂದೆ ಮುಂದೆನ್ನದೆ ದರ್ಶನ್‌ನ ಕಿವಿಕಚ್ಚಿದ ...ತಾ 'ನಾನು ಸೂಯಿಸೈಡ್ ಮಾಡ್ಕೋತೀನಿ. ... ಹೆಂಡ್ತಿ ನನ್ನನ್ನ ಬಾಯಿಗೆ ಬಂದಂತೆ ...ದಿದ್ದಾಳೆ. ನನ್ನನ್ನ ಸೂ... ಅಂತಾ ಕರೀತಾಳೆ....' ...ದು ಮೊಸಳೆಕಣ್ಣೀರು ಹಾಕಿದ್ದಾಳೆ. ಇಷ್ಟಾಗಿದ್ದೇ ...ರ್ಶನ್‌ನ ಪಿತ್ಥ ನೆತ್ತಿಗೇರಿದೆ. ನೇರವಾಗಿ ...ರಾಜರಾಜೇಶ್ವರಿನಗರದ ತನ್ನ ಮನೆಗೆ ಬಂದವನು ... ವಿಜಯಲಕ್ಷ್ಮಿಯನ್ನು ಹಿಡಿದು ಬಡಿದಿದ್ದಾನೆ. ...ಗ ನೀನೇ ನಿಖಿತಾಗೆ ಫೋನ್ ಮಾಡಿ ಸಾರಿ ...ಬೇಕು. ಇಲ್ಲಾ ಅಂದ್ರೆ, ಇಲ್ಲೇ ನಿನ್ನನ್ನು ...ಮುಗಿಸಿಬಿಡ್ತೀನಿ. ಮಾಡು, ಮೊದಲು ಫೋನ್ ...ಡಿ ಸಾರಿ ಕೇಳು..." ಎಂದು ನಿಖಿತಾಳ ...ಮೊಬೈಲಿಗೆ ಡಯಲ್ ಮಾಡಿ ತನ್ನ ಪತ್ನಿಯ ...ಮುಖಕ್ಕೆ ಹಿಡಿದಿದ್ದಾನೆ. ಆಕೆಯಾದರೂ ಗಟ್ಟಿಗಿತ್ತಿ ...ನ್ನ ಮಗಳಲ್ಲವೆ?

"ನಾನ್ಯಾಕೆ ಸಾರಿ ಕೇಳ್ಬೇಕು? ನಾನೇನು ಆಕೆಯ ...ತನ ಮೇಲೆ ಕಣ್ಣು ಹಾಕಿದ್ದೀನಾ? ಪ್ರಾಣ ...ೇದರೂ ಸರಿ, ನಾನು ಸಾರಿ ಕೇಳಲ್ಲ" ಎಂದು ...ದಿದ್ದ ಮೊಬೈಲನ್ನು ನೂಕಿದ್ದಾಳೆ. ದರ್ಶನ್ ...ತ್ತೆ ಹೊಡೆಯಲಾರಂಭಿಸಿದ್ದಾನೆ. ಇನ್ನು ಹೊಡೆತ ...ಲ್ಲ ಎಂದ ವಿಜಯಲಕ್ಷ್ಮಿ ತಾನು ಮನೆ ಬಿಟ್ಟೇ ...ೋಗ್ತೀನಿ ಎಂದಿದ್ದಾಳೆ. ಇದು ಆತನನ್ನು ...ತ್ತಷ್ಟು ಕೆರಳಿಸಿದೆ. ಮನೆಬಿಟ್ಟು ಹೋಗ್ತೀನಿ ...ತೀಯಾ? ಎಂದವನೇ ಪತ್ನಿಯನ್ನು ತನ್ನ ಕಾರಿಗೆ ...ದ್ದಾನೆ. ಮೂರು ವರ್ಷದ ಮಗು ವಿಧಾನ್ ...ಯಲ್ಲಿ ಚೀರಾಡುತ್ತಿದ್ದರೆ ಪತ್ನಿಯನ್ನು ...ಸುವಿನ ಸಮೇತ ಕಾರಿಗೆ ದಬ್ಬಿದ್ದೇ ಮೈಸೂರು ...ಮುದ್ದಕ್ಕೂ ಕಾರೊಳಗೇ ಆಕೆಯನ್ನು ...ಡೆಯಲಾರಂಭಿಸಿದ್ದಾನೆ.

...ಮನೆ ಬಿಟ್ಟು ಹೋಗ್ತೀನಿ ಅಂತೀಯಾ? ಎಂದು ಕೇಳಿಕೇಳಿ ಆಕೆಯ ಮುಖಕ್ಕೆ ಮುಷ್ಠಿ ಪ್ರಹಾರ ಮಾಡಿದ್ದಾನೆ. ಮೈಸೂರು ರಸ್ತೆ ಸುತ್ತಿಸಿ ಕಾರಲ್ಲೇ ಆಕೆಯನ್ನು ಹೊಡೆದು ಹೊಡೆದು ವಾಪಸ್ಸು ಮನೆಗೆ ಕರೆತರುವ ಹೊತ್ತಿಗೆ ಆಕೆಯ ಮೂಗು ಮತ್ತು ಬಾಯಿಂದ ರಕ್ತ ಸೋರುತ್ತಿತ್ತು. ತುಟಿಸೀಳಿ ಹೋಗಿತ್ತು. ಗುದ್ದಿದ ಏಟಿಗೆ ಇಡೀ ಮುಖ ಕಪ್ಪಿಟ್ಟು, ಮುಖದ ಆಕಾರವೇ ವಿಕಾರವಾಗಿ ಹೋಗಿತ್ತು. ಅಕ್ಷರಶಃ ಕ್ರೂರ ಮೃಗದಂತಾಗಿದ್ದ ದರ್ಶನ್ ತಮ್ಮ ಮಾನಸಿಕ ಸ್ಥಿಮಿತವನ್ನೇ ಕಳಕೊಂಡಿದ್ದ. ರಕ್ತ ಕಾರುತ್ತಾ ಪತ್ನಿ ಅರೆಜೀವವಾಗಿ ಬಿದ್ದಿದ್ದರೆ ಈತ ಚಿತ್ರವಿಚಿತ್ರವಾಗಿ ಕಿರುಚಾಡುತ್ತಿದ್ದ. ಆತನ ಡ್ರೈವರ್ ಮತ್ತು ಮನೆಕೆಲಸದ ಹೆಂಗಸರು ಬಿಡಿಸಲು ಬಂದರೆ ಅವರನ್ನೇ ಹಿಡಿದು ಬಡಿದ. ಹೆಚ್ಚೂಕಮ್ಮಿ ಪ್ರಜ್ಞೆಯೇ ಇಲ್ಲದಂತೆ ಬಿದ್ದಿದ್ದ ಪತ್ನಿಯನ್ನು ಎತ್ತಿ ಮನೆಯೊಳಕ್ಕೆಸೆದಿದ್ದೇ ಕಾರೆತ್ತಿಕೊಂಡು ಸೀದಾ ನಿಖಿತಾಳ ಅಪಾರ್ಟ್‌ಮೆಂಟ್ ಹೊಕ್ಕು ಆಕೆಯನ್ನು ರಮಿಸಲಾರಂಭಿಸಿದ್ದ.

## ಪತ್ನಿ ಪರಾರಿ

ಇತ್ತ ಎಷ್ಟೋ ಹೊತ್ತಿನ ನಂತರ ಸಾವರಿಸಿಕೊಂಡ ವಿಜಯಲಕ್ಷ್ಮಿಗೆ ದರ್ಶನ್‌ನ ನಿಖಿತಾ ಮೋಹದ ಪೈಶಾಚಿಕ ದರ್ಶನವಾಗಿತ್ತು. ಇನ್ನು ಇಲ್ಲೇ ಇದ್ದರೆ ಕೊಂದೇ ಬಿಡುತ್ತಾನೆಂಬ ಭೀತಿ ಕಾಡಿದೆ. ಅದು 2011 ರ ಮೇ 3 ನೇ ತಾರೀಖು. ಮಗುವನ್ನು ಎದೆಗೊತ್ತಿಕೊಂಡು ಉಟ್ಟಬಟ್ಟೆಯಲ್ಲೇ ಮನೆ ಬಿಟ್ಟವಳು ಎಲ್ಲಿಗೆ ಹೋದಳು, ಏನಾದಳು ಎಂಬುದೇ ಯಾರಿಗೂ ಗೊತ್ತಿಲ್ಲ. ಮರುದಿನ ಬೆಳಗ್ಗೆಯ ಹೊತ್ತಿಗೆ ವಾಪಸ್ಸಾದ ದರ್ಶನ್‌ಗೆ ಪತ್ನಿ ಪರಾರಿಯಾದ ಸುದ್ದಿ ಗೊತ್ತಾಗಿದೆ. ಇನ್ನೆಲ್ಲಿಗೆ ಹೋಗಿರ್ತಾಳೆ, ಒಂದೋ ಮೈಸೂರಿನ ತನ್ನ ತಾಯಿ ಮನೆಗೆ ಹೋಗಿರಬೇಕು ಅಥವಾ ತನ್ನ ಅಮ್ಮನ ಬಳಿ ಹೋಗಿರಬೇಕೆಂದು ಸುಮ್ಮನಾಗಿದ್ದಾನೆ.

ಆದರೆ ಮೂರನೇ ದಿನದ ಹೊತ್ತಿಗೆ ಅಂದರೆ ಮೇ 6ಕ್ಕೆ ದರ್ಶನ್‌ಗೆ ವಾಸ್ತವ ಅರ್ಥವಾಗಿದೆ. ವಿಜಯಲಕ್ಷ್ಮಿ ಮೈಸೂರಿಗಾಗಲಿ, ತನ್ನ ಸಂಬಂಧಿಕರ ಮನೆಗಾಗಲಿ ಹೋಗೇ ಇರಲಿಲ್ಲ. ಹಾಗೇನಾದರೂ ಆತ್ಮಹತ್ಯೆ ಮಾಡಿಕೊಂಡರೆ ಗತಿಯೇನೆಂಬ ಭೀತಿಯೂ ಶುರುವಾಗಿದೆ. ಹಾಗಾಗಿದ್ದೇ ಆದರೆ ನಿಖಿತಾಳ ಸಮೇತ ನೀನು ಜೈಲು ಸೇರೋದು ಗ್ಯಾರಂಟಿ ಎಂದು ಯಾರೋ ಬುದ್ಧಿ ಹೇಳಿದ್ದಾರೆ. ಎಲ್ಲಂಥ ಹುಡುಕುವುದು? ಆಕೆಯ ಮೊಬೈಲ್ ಬೇರೆ ಸ್ವಿಚ್ ಆಫ್ ಆಗಿತ್ತಲ್ಲ. ಪತ್ನಿ ಪರಾರಿಯಾದ ಸುದ್ದಿ ಬಯಲಾಯಿತೆಂದರೆ ಅದು ಇನ್ನೂ ಅವಮಾನ.

ಇಂಥ ಗಾಬರಿಯಲ್ಲೇ ದರ್ಶನ್ ಶರಣಾಗಿದ್ದು ಕಬ್ಬನ್‌ಪಾರ್ಕ್ ಎಸಿಪಿ ದೇವರಾಜ್‌ಗೆ. ಈ ಹಿಂದೆ ರಾಮನಗರಕ್ಕೆ ಡಿವೈಎಸ್‌ಪಿಯಾಗಿದ್ದಾಗ ನಿತ್ಯಾನಂದನ ಸೆಕ್ಸ್ ರಂಪಾಟದಲ್ಲಿ ಸಾಕಷ್ಟು ಕಿತಾಪತಿಗೆ ತಲೆಕೊಟ್ಟಿದ್ದು ಇದೇ ದೇವರಾಜ್. ಈಗ ತನ್ನ ಗೆಳೆಯ ದರ್ಶನ್‌ನ ಸೆಕ್ಸ್ ರಾದ್ಧಾಂತಕ್ಕೆ ತಲೆ ಕೊಡಬೇಕಾದ ದುರ್ಗತಿ. ವಿಜಯಲಕ್ಷ್ಮಿಯ ಮೊಬೈಲ್ ನಂಬರ್ ಹಿಡಿದು ಅದರ ಕಾಲ್ ಡಿಟೇಲ್ಸ್ ತರಿಸಿಕೊಂಡಿದ್ದಾರೆ. ಸದಾಕಾಲ ಸ್ವಿಚ್ ಆಫ್ ಆಗಿರುತ್ತಿದ್ದ ಆ ನಂಬರ್ ಅಪರೂಪಕ್ಕೆಂಬಂತೆ ಎರಡು ಸಾರಿ ಮಾತ್ರ ಚಾಲನೆಗೊಂಡಿತ್ತು, ಅದೂ ಹೆಬ್ಬಾಳ ರಿಂಗ್ ರಸ್ತೆಯ ಮಾನ್ಯತಾ ಟೆಕ್‌ಪಾರ್ಕ್‌ನ ಟವರ್‌ನಿಂದ



ಕೊನೆಯ ಕರೆ ಹೋಗಿತ್ತು. ಬಹುತೇಕ ಐಟಿ ಕಂಪೆನಿಗಳೇ ಇರುವ ಮಾನ್ಯತಾ ಟೆಕ್‌ಪಾರ್ಕ್‌ಗೂ ದರ್ಶನ್ ಪತ್ನಿಗೂ ಸೂತ್ರ ಸಂಬಂಧವಿರಲಿಲ್ಲ. ಆ ಸುತ್ತಮುತ್ತ ಅಂಥ ಲಾಡ್ಜುಗಳಾಗಲಿ, ವಿಜಯಲಕ್ಷ್ಮಿಯ ಯಾರೇ ಪರಿಚಿತರಾಗಲಿ ಇರಲಿಲ್ಲ.

ಹೆಚ್ಚೂಕಮ್ಮಿ ಒಂದು ವಾರದ ಕಾಲ ದರ್ಶನ್,



ಅಣಾಜಿ, ತಮ್ಮ ದಿನಕರ್, ತಾಯಿ ಮೀನಮ್ಮ ಸೇರಿಕೊಂಡು ಮಾನ್ಯತಾ ಟೆಕ್‌ಪಾರ್ಕ್ ಸುತ್ತಮುತ್ತಲ ಏರಿಯಾಗಳನ್ನು ತಡಕಾಡಿದ್ದಾರೆ. ಕೊನೆಗೆ ಗೊತ್ತಾಗಿದ್ದೇನೆಂದರೆ ಇದೇ ಮಾನ್ಯತಾ ಟೆಕ್‌ಪಾರ್ಕ್ ಆವರಣದಲ್ಲಿ ನಟ ಶಿವರಾಜ್‌ಕುಮಾರ್ ಬಂಗಲೆಯಿದೆ. ಶಿವಣ್ಣ ಆ ಕಾಲದಿಂದಲೂ ದರ್ಶನ್ ಫ್ಯಾಮಿಲಿಗೆ ಮಾರ್ಗದರ್ಶಿ. ತಂದೆ ತೂಗುದೀಪ ಬದುಕಿದ್ದಷ್ಟೂ ದಿನ ರಾಜ್ ಕುಟುಂಬದ ಮನೆಮಗನಂತಿದ್ದವರು. ಗುಮಾನಿ ಶುರುವಾಗಿದ್ದೇ ಆಗ. ಯಾವುದಕ್ಕೂ ಇರಲಿ ಎಂದು ಶಿವಣ್ಣನ ಮನೆ ಮುಂದೆ ದರ್ಶನ್ ಕಾಡು ಹಾಕಿಕೊಂಡು ಕಾದಿದ್ದಾನೆ.

## ಶಿವಣ್ಣನ ತಪರಾಕಿ

ಹಕೀಕತ್ತೇನೆಂದರೆ; ಏಟು ತಿಂದು ಅರೆಜೀವವಾಗಿದ್ದ ಪತ್ನಿ ವಿಜಯಲಕ್ಷ್ಮಿ ಶಿವಣ್ಣನ ಮನೆಯಲ್ಲಿ ಆಶ್ರಯ ಪಡೆದಿದ್ದಳು. ತನ್ನ ಮಗು ಶಿವಣ್ಣನ ಮಕ್ಕಳ ಜೊತೆ ಕಾಂಪೌಂಡಿನಲ್ಲಿ ಆಟವಾಡುತ್ತಿದ್ದದ್ದು ಕಣ್ಣಿಗೆ ಬಿದ್ದಿದ್ದೇ ದರ್ಶನ್‌ಗೆ ಪಕ್ಕಾ ಆಗಿದೆ. ತಕ್ಷಣವೇ ಮನೆಗೆ ನುಗ್ಗಿ ಶಿವಣ್ಣನ ಮುಂದೆ ನಿಂತು 'ಏನಣ್ಣಾ, ನೀನೇ ಈ ರೀತಿ ಮಾಡಬಹುದಾ?' ಎಂದಿದ್ದಾನೆ. ದರ್ಶನ್ ಕಣ್ಣಿಗೆ ಬಿದ್ದಿದ್ದೇ ತಡ ಶಿವಣ್ಣನ ಸಿಟ್ಟು ನೆತ್ತಿಗೇರಿದೆ. ಶಿವಣ್ಣನ ಪತ್ನಿ ಗೀತಾ "ನೀನೇನು ಮನುಷ್ಯನಾ ಮೃಗಾನಾ? ಈ ಹೆಣ್ಣುಮಗಳನ್ನು ಈ ರೀತಿ ಹೊಡೆದಿದ್ದೀಯಲ್ಲ. ನೀನು ತಪ್ಪು ಮಾಡಿದ್ದಕ್ಕೆ ಆಕೆಗೆ ಶಿಕ್ಷೆಯಾ? ನಾಚಿಗೆಯಾಗೋಲ್ವ ನಿನಗೆ" ಎಂದು ಉಗಿದುಬಿಟ್ಟರು.

ಇನ್ನೊಂದೆಡೆ ಶಿವಣ್ಣ ತರಾಟೆಗೆ ತೆಗೆದುಕೊಳ್ಳುತ್ತಿದ್ದರೆ ದರ್ಶನ್ ಕತ್ತು ಬಗ್ಗಿಸಿ ನಿಂತುಬಿಟ್ಟಿದ್ದ. ಅದೇ ಹೊತ್ತಿಗೆ ಎಸಿಪಿ ದೇವರಾಜ್ ಎಂಟ್ರಿ ಕೊಟ್ಟು ವಿಜಯಲಕ್ಷ್ಮಿಯ ರಕ್ತಗಟ್ಟಿದ್ದ ಮುಖ ನೋಡಿ ಥಂಡಾ ಹೊಡೆದಿದ್ದಾರೆ. ಕೊನೆಗೂ ಪತ್ನಿಯ ಕಾಲಿಗೆ ಬಿದ್ದು ದರ್ಶನ್ ಕ್ಷಮೆ ಯಾಚಿಸಿದ್ದಾನೆ. ಹಾಗಂತ ನಿಖಿತಾಳ ಹುಚ್ಚು ಬಿಟ್ಟಿಲ್ಲ. ಉಪಾಯವಾಗಿ ಪತ್ನಿಯ ಹೆಸರಿಗೆ ಮಾಡಿದ ಆಸ್ತಿ ತನ್ನ ಕೈವಶವಾಗುತ್ತಿದ್ದಂತೆ ಡೈವೋರ್ಸ್ ಕೊಟ್ಟು ಕ್ರಮೇಣ ನಿಖಿತಾಳನ್ನು ಮದುವೆಯಾಗುವುದು ಆತನ ಹುನ್ನಾರವಂತೆ. ಹಾಗೆಂದು ಗಾಂಧಿನಗರದಲ್ಲಿ ಪುಕಾರೆದ್ದಿದೆ.

ಕಾಸು ಕೊಟ್ಟರೆ ತಾನು ಕಾಚಾದಲ್ಲಿ ನಟಿಸಲೂ ಸಿದ್ಧ ಎಂದವನು ದರ್ಶನ್. ಆತ ಧನಪಿಶಾಚಿ. ದುಡ್ಡಿಗಾಗಿ ಏನು ಬೇಕಾದರೂ ಮಾಡಲು ರೆಡಿಯಾದವನಿಗೆ ತಾಯಿ, ತಮ್ಮ, ಹೆಂಡತಿ, ಸಂಸಾರ, ಮಾನ, ಮರ್ಯಾದೆ ಯಾವ ಲೆಕ್ಕ? ಹಣ ಸೇರಲಾರಂಭಿಸಿದ್ದೇ ಕಷ್ಟಕ್ಕಾದವರನ್ನು ಮರೆತ. ಹೆತ್ತ ತಾಯಿಯನ್ನೇ ಮನೆಯಿಂದ ಹೊರದಬ್ಬಿದ. ಒಡಹುಟ್ಟಿದ ತಮ್ಮನನ್ನೇ ಕಾಸಿಗಾಗಿ ಪೀಡಿಸಿ ಕಾಟ ಕೊಟ್ಟ. ಈಗ ಹಣದ ಮದದ ಜೊತೆ ಕಾಮದಾಹವೂ ಉಲ್ಬಣಿಸಿದೆ. ನಯಾಪೈಸೆಗೂ ಇಸ್ಪೀಟಾಡುತ್ತಿದ್ದ ಕಾಲದಲ್ಲಿ ಪ್ರೀತಿಸಿ ಕೈಹಿಡಿದು ಮೇಲೆತ್ತಿದ ಪತ್ನಿಯನ್ನೇ ಪೀಡಿಸಲಾರಂಭಿಸಿದ್ದಾನೆ.

ದುಡ್ಡು ಕಾಸಿಗೆ ಏನು ಬೇಕಾದರೂ ಮಾಡಲು ಅಣಿಯಾದವನಿಗೆ ಕಷ್ಟಕ್ಕಾದ ಹೆಂಡತಿ, ತನಗೇ ಜನಿಸಿದ ಮಗು ಯಾವ ಲೆಕ್ಕ? ತೆರೆ ಮೇಲಿನ ಹೀರೋನ ಕರಾಳಮುಖ ಹೀಗೂ ಉಂಟೆ?



# ಉತ್ತರ ಕನ್ನಡದ ಕಾಲೇಜುಗಳನ್ಯಾಕೆ ಕುವೆಂಪು ವಿವಿಗೆ ಸೇರಿಸುತ್ತಿದ್ದಾರೆ

ಸಮುದ್ರದ ನೆಂಟಸ್ತನ: ಉಪ್ಪಿಗೆ ತತ್ವಾರ.

ಇದು ಉತ್ತರ ಕನ್ನಡ ದೌರ್ಭಾಗ್ಯ! ಲಾಗಾಯ್ತಿನಿಂದಲೂ ಇದು ವಿಶ್ವ-ದೆಸೆ ಇಲ್ಲದ ಜಿಲ್ಲೆ. ಒಂದರ ಹಿಂದೊಂದರಂತೆ ಮೋಸ-ವಂಚನೆಗೆ ಉತ್ತರ ಕನ್ನಡ ಒಳಗಾಗುತ್ತಲೇ ಇದೆ. ಈ ಶೋಷಣೆಯ ವಿರುದ್ಧ ಸಿಡಿದು ನಿಂತು ಜಿಲ್ಲೆಗೆ ನ್ಯಾಯ ಒದಗಿಸಬೇಕೆಂಬ ಪ್ರಾಂಜಲ ಮನಸ್ಸಿನ-ದೂರದರ್ಶಿತ್ವದ ಧುರೀಣನೊಬ್ಬ ದಿನಕರ ದೇಸಾಯಿಯರ ನಂತರ ಉತ್ತರ ಕನ್ನಡದಲ್ಲಿ ಹುಟ್ಟಿಬರಲೇ ಇಲ್ಲ. ಅಲ್ಲಿಂದಿಲ್ಲಿಗೂ ಹುಡಾಹುಡಿಯ ಪೊಳ್ಳು ಪುಢಾರಿಗಳೇ ಶಾಸಕ-ಸಂಸದ-ಮಂತ್ರಿಯಾಗಿ ದರ್ಬಾರು ನಡೆಸಿದ್ದೇ ಈ ಜಿಲ್ಲೆ ಇವತ್ತು ಬಂಜರು ಭೂಮಿಯಂತಾಗಲು ಪ್ರಮುಖ ಕಾರಣ.


ಉತ್ತರ ಕನ್ನಡ ಒಂಥರಾ ಅಬ್ಬೇಪಾರಿಯಂತಾಗಿದೆ. ಇತ್ತ ಕರಾವಳಿ ಜಿಲ್ಲೆಯವರಿಗೂ ಉತ್ತರ ಕನ್ನಡ ಎಂದರೆ ತಾತ್ಸಾರ, ಅತ್ತ ಉತ್ತರ ಕರ್ನಾಟಕದವರಿಗೂ ಈ ಜಿಲ್ಲೆಯ ನಂಟು ಬೇಕಾಗಿಲ್ಲ. ಮೊದಲೇ ಜಿಲ್ಲೆಗೆ ನಿಯತ್ತಿನ ನಾಯಕತ್ವವಿಲ್ಲ. ಹೀಗಾಗಿ ಜಿಲ್ಲೆಗೆ ಕಷ್ಟ-ನಷ್ಟವಾದಾಗ, ತೊಂದರೆ-ತಾಪತ್ರಯವಾದಾಗ ಹೇಳುವವರು-ಕೇಳುವವರೇ ಇಲ್ಲದಂತಾಗಿದೆ! ಉತ್ತರ ಕನ್ನಡದ ದುರಂತ ನೋಡಿ; ಒಂದೆಡೆ ಸಾಕ್ಷಾತ್ ಸಿಎಂ ಯಡ್ಡಿ ಮಹಾತ್ಮನು ಜಿಲ್ಲೆಯ ಸಿದ್ಧಾಪುರ ತಾಲ್ಲೂಕು ಮತ್ತು ಶಿರಸಿಯ ಬನವಾಸಿ ಸೀಮೆಯನ್ನು ಸೆಳೆದುಕೊಂಡು ತನ್ನ ಶಿಕಾರಿಪುರ ಜಿಲ್ಲೆ ನಿರ್ಮಿಸಲು ಹವಣಿಸುತ್ತಿದ್ದಾರೆ. ಇನ್ನೊಂದೆಡೆ ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿ ಎಂಬ ಗುಳ್ಳೆನರಿ ಜಿಲ್ಲಾ ಕೇಂದ್ರ ಕಾರವಾರದಲ್ಲಿರುವ ಹಲವು ಜಿಲ್ಲಾ ಮಟ್ಟದ ಕಚೇರಿಗಳನ್ನು ಸ್ವ-ಕ್ಷೇತ್ರ ಶಿರಸಿಗೆ ಹೊತ್ತೊಯ್ಯುತ್ತಿದ್ದಾರೆ. ಜಿಲ್ಲೆಯ ಕರಾವಳಿ ತಾಲ್ಲೂಕುಗಳಿಗೆ ಘೋರ ಅನ್ಯಾಯ ಮಾಡಿ ಸ್ವಜಾತಿ ಹೈಗರು ಹೆಚ್ಚಿರುವ ಘಟ್ಟದ ಮೇಲಿನ ತಾಲ್ಲೂಕುಗಳ ಸೇರಿಸಿ ಬ್ರಾಹ್ಮಣರ ಜಿಲ್ಲೆ ಮಾಡುವ ಕುಟಿಲ ಕಾರಸ್ಥಾನ ಕಾಗೇರಿಯದು.

ಅಭಿವೃದ್ಧಿ, ಗಡಿ ಭಾಗದ ಕಾಳಜಿ, ರೈತ-ಮೀನುಗಾರರ ಬವಣೆ, ಯೋಜನಾ ನಿರಾಶ್ರಿತರ ನೋವು, ಕದಂಬೋತ್ಸವ ಹೈಜಾಕ್ ಹವಣಿಕೆ... ಹೀಗೆ ದೈನಂದಿನ ಬದುಕಿನ ಪ್ರತಿ ಹಂತದಲ್ಲೂ ಉತ್ತರ ಕನ್ನಡ ಉತ್ತರ ಕಾಣದ ಜಿಲ್ಲೆ! ಈಗ ಶೈಕ್ಷಣಿಕ ಕ್ಷೇತ್ರದಲ್ಲೂ ಜಿಲ್ಲೆಗೆ ಅನ್ಯಾಯ ಮಾಡುವ ಮಸಲತ್ತು ನಡೆದಿದೆ. ಕಳೆದ ಐದಾರು ತಿಂಗಳಿಂದ ಉತ್ತರ ಕನ್ನಡದ ಮಹಾವಿದ್ಯಾಲಯಗಳನ್ನೆಲ್ಲ ಕರ್ನಾಟಕ (ಧಾರವಾಡ) ವಿಶ್ವವಿದ್ಯಾಲಯದ ವ್ಯಾಪ್ತಿಯಿಂದ ತೆಗೆದು ಶಿವಮೊಗ್ಗೆಯ ಕುವೆಂಪು ವಿವಿಗೆ ಸೇರಿಸಲು ಸಿಎಂ ಯಡ್ಡಿ ಮತ್ತು ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿ ಜಂಟಿ ಹಿಕಮತ್ತು ನಡೆಸುತ್ತಿದ್ದಾರೆ. ಅನಾದಿಕಾಲದಿಂದ ಕರ್ನಾಟಕ ವಿವಿಯೊಂದಿಗೆ ಹೊಕ್ಕಳುಬಳ್ಳಿ ಸಂಬಂಧ ಹೊಂದಿರುವ ಉತ್ತರ ಕನ್ನಡದ ಶೈಕ್ಷಣಿಕ ಪರಿಸರ ಈ ಬದಲಾವಣೆಯಿಂದ ಏರುಪೇರಾಗುವುದು ಗ್ಯಾರಂಟಿ. ಇದು ಸ್ಥಳೀಯ ವಿದ್ಯಾರ್ಥಿಗಳನ್ನು ಕಷ್ಟ-ಕಿರಿಕಿರಿಗೆ ಈಡುಮಾಡುತ್ತದೆ.

ಅಮಾಯಕ ವಿದ್ಯಾರ್ಥಿಗಳ ಬದುಕು ಬವಣೆ ಮಾಡುವ ಈ ವಿವಿ ಬದಲಾವಣೆ ಮಾಡುವ ಯಡ್ಡಿ ಸರ್ಕಾರದ ಏಡವಟ್ಟು ನಿರ್ಧಾರ ಪ್ರತಿಭಟಿಸುವ ತಾಕತ್ತು ಜಿಲ್ಲೆಯ ಯಾವ ಲೀಡರನೂ ತೋರಿಸುತ್ತಿಲ್ಲ. ಬಿಜೆಪಿಯವರು ಬಿಡಿ; ಒಂದಲ್ಲ ಒಂದು ವೈಯಕ್ತಿಕ ಆಡಚಣೆಯಿಂದ ಸಿಎಂ ಮರ್ಜಿಯಲ್ಲಿದ್ದಾರೆ. ಆದರೆ ವಿರೋಧಿ ಕಾಂಗ್ರೆಸ್-ಜೆಡಿಎಸ್ ಮತ್ತು ಜಿಲ್ಲಾ ಪ್ರಿನ್ಸಿಪಾಲ್- ಮ್ಯಾನೇಜ್‌ಮೆಂಟ್ ಅಸೋಸಿಯೇಷನ್‌ನ ಮಹಾಮಹಿಮರೂ ಬಾಯಲ್ಲಿ ಅವಲಕ್ಕಿ ಹಾಕಿಕೊಂಡು ಕುಂತಿರುವುದು ನಾಚಿಕೆಗೇಡು. ಅಷ್ಟಕ್ಕೂ ಈ ಯಡ್ಡಿ ಉತ್ತರ ಕನ್ನಡದ ಮಹಾವಿದ್ಯಾಲಯಗಳನ್ನು ಬಲಿ ಪಡೆವ ಹಠಕ್ಕೆ ಯಾಕೆ ಬಿದ್ದಿದ್ದಾರೆ ಗೊತ್ತಾ? ಆತನ ಶಿವಮೊಗ್ಗೆಯ ಕುವೆಂಪು ವಿವಿ ಮಹಾವಿದ್ಯಾಲಯ ಕಾಲೇಜುಗಳ ಕೊರತೆಯಿಂದ ಎದುಸಿರು ಬಿಡುತ್ತಿದೆ. ಈ ಕುವೆಂಪು ವಿವಿಗೆ ಕೊರತೆಯಿರುವ ಪದವಿ ಕಾಲೇಜುಗಳನ್ನು ಭರ್ತಿ ಮಾಡಲು ಯಡ್ಡಿ ಗ್ಯಾಂಗ್ ಕರ್ನಾಟಕ ಯುನಿವರ್ಸಿಟಿ ವ್ಯಾಪ್ತಿಯಲ್ಲಿರುವ ಉತ್ತರ ಕನ್ನಡದ ಶಿಕ್ಷಣ ವಿದ್ಯಾಲಯಗಳನ್ನು ಕಬಳಿಸುವ ಸ್ಕೆಚ್ ಹಾಕಿದೆ.

ಉತ್ತರ ಕನ್ನಡದಲ್ಲಿ ಒಟ್ಟು 30 ಪದವಿ ಕಾಲೇಜುಗಳಿವೆ. ಇದರಲ್ಲಿ 13 ಸರ್ಕಾರಿ ಕಾಲೇಜುಗಳಾದರೆ, 13 ಅನುದಾನಿತ ವಿದ್ಯಾಲಯಗಳು. ಇನ್ನುಳಿದ 4 ಕಾಲೇಜು ಅನುದಾನರಹಿತ. ಒಂದೇ ಏಟಿಗೆ ಈ ಮೂವತ್ತು ಮಹಾವಿದ್ಯಾಲಯಗಳನ್ನು ಆಪೋಷನ ಪಡೆದರೆ ಶಿವಮೊಗ್ಗ ಯುನಿವರ್ಸಿಟಿಗೆ ಜೀವ ಬರುತ್ತದೆ. ಅಲ್ಲಿಗೆ ಯಡ್ಡಿಯ ಸಿಎಂಗಿರಿ ಮಾನವೂ ಉಳಿಯುತ್ತದೆ. ಆದರೆ ಉತ್ತರ ಕನ್ನಡದ ಪದವಿ ಕಾಲೇಜುಗಳ ಆಡಳಿತ ಮಂಡಳಿಗಾಗಲಿ, ವಿದ್ಯಾರ್ಥಿ, ಪೋಷಕರಿಗಾಗಲಿ ಕರ್ನಾಟಕ ಯುನಿವರ್ಸಿಟಿ ಬಿಟ್ಟು ಹೋಗುವ ಮನಸ್ಸಿಲ್ಲ. ಧಾರವಾಡ ವಿವಿಯ ಸಿಂಡಿಕೇಟ್ ಸಭೆಯೂ ಸರ್ಕಾರದ ಈ ಪ್ರಸ್ತಾಪವನ್ನು ವಿರೋಧಿಸುವ ನಿರ್ಣಯ/ ಮಾಡಿ ಸರ್ಕಾರಕ್ಕೆ ಕಳುಹಿಸಿದೆ!

ಆದರೆ ಯಡ್ಡಿ ಸರ್ಕಾರ ತನ್ನ ತಿಕ್ಕಲು ತೀರ್ಮಾನವನ್ನು ಜಾರಿಗೊಳಿಸಲು ನಿರ್ಧರಿಸಿದರೆ ಉಪಕುಲಪತಿ, ಸಿಂಡಿಕೇಟ್‌ಗಳು ಏನೂ ಮಾಡಲಾಗದು. ಸರ್ಕಾರದ ಅಡಿಯಲ್ಲಿರುವ ಈ ಉಪಕುಲಪತಿ, ಸಿಂಡಿಕೇಟ್‌ಗಳು ಯಾವುದಾದರೂ ನೆಪ, ರಾಜಿಗೆ ಪಕ್ಕಾಗಿ ಯಡ್ಡಿಗೆ ಭೋಪರಾಕ್ ಹಾಕುವ ಸಾಧ್ಯತೆಯೇ ಹೆಚ್ಚು. ಹಾಗಾಗಿ ಯಡ್ಡಿಯ ಸರ್ವಾಧಿಕಾರ -ಸ್ಥಳೀಯ ಮಂತ್ರಿ ಕಾಗೇರಿಯ ಹೇತ್ಲಾಂಡಿತನದ ವಿರುದ್ಧ ಸಿಡಿದೆದ್ದು ಜನಾಂದೋಲನವೇ ನಡೆಸುವ ಅನಿವಾರ್ಯತೆ ಎದುರಾಗಿದೆ. ಒಂದು ಪ್ರತ್ಯೇಕ ವಿವಿಯನ್ನೇ ಪಡೆಯುವಷ್ಟು "ಫಲವತ್ತತೆ" ಜಿಲ್ಲೆಗಿದೆ. ವಿದ್ಯಾರ್ಥಿಗಳೂ ಹೆಚ್ಚಿದ್ದಾರೆ; ಭೌಗೋಳಿಕ ವ್ಯಾಪ್ತಿಯೂ ದೊಡ್ಡದಿದೆ. ವೈವಿಧ್ಯಮಯ ಸಾಂಸ್ಕೃತಿಕ ಪರಿಸರವಿದೆ. ಜಿಲ್ಲೆಯ ಸಾಕ್ಷರತಾ ಪ್ರಮಾಣವೂ ಹೆಚ್ಚು. ಇಂಥಾದ್ದರಲ್ಲಿ ಜಿಲ್ಲೆಯ ಕಾಲೇಜುಗಳನ್ನೇ ಬೇರೆ ವಿವಿಗೆ ಸೇರಿಸುವುದು ಮೂರ್ಖತನವೇ ಸರಿ. ಇದು ಸ್ಥಳೀಯ ಜನದ್ರೋಹಿ ಜನಪ್ರತಿನಿಧಿಗಳಿಗೆ ಅರ್ಥವಾಗದಿರುವುದು ದುರಂತವೇ ಸರಿ.



ಹಾಗೊಮ್ಮೆ ಹೊಸ-ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಉತ್ತರ ಕನ್ನಡಕ್ಕೆ ಕೊಡಲಾಗದಿದ್ದರೆ, ಶಿವಮೊಗ್ಗ ವಿವಿಗೆ ಸ್ಥಳೀಯ ಕಾಲೇಜುಗಳನ್ನು ಸೇರಿಸುವ ಹುಚ್ಚಾಟವಂತೂ ಮಾಡಲೇಬಾರದು. ಧಾರವಾಡ ವಿವಿ ವ್ಯಾಪ್ತಿಯಿಂದ ಉತ್ತರ ಕನ್ನಡದ ಕಾಲೇಜುಗಳನ್ನು ಹೊರತರುವುದೇ ಅವೈಜ್ಞಾನಿಕ, ಅವಾಂತರಕಾರಿ! ವಿದ್ಯಾರ್ಥಿಗಳ ಒಳಿತು ಮತ್ತು ಹಲವು ಶೈಕ್ಷಣಿಕ-ಸಾಂಸ್ಕೃತಿಕ ಕಾರಣಗಳಿಂದಾಗಿ ಉತ್ತರ ಕನ್ನಡದ ಕಾಲೇಜುಗಳು ಕರ್ನಾಟಕ ವಿವಿಯಲ್ಲೇ ಇರಬೇಕೆಂಬುದು ಶೈಕ್ಷಣಿಕ ತಜ್ಞರ-ಪ್ರೇಮಿಗಳ ಅಭಿಪ್ರಾಯ. ಇದು ಸಮರ್ಥನೀಯವೂ ಹೌದು.

ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಗಳ ನಡುವೆ ಎರಡು-ಮೂರು ತಲೆಮಾರುಗಳಿಂದ ಶೈಕ್ಷಣಿಕ ಸಂಬಂಧವಿದೆ. ಇದನ್ನು ಹಠಾತ್ ತಪ್ಪಿಸುವುದು ಅವೈಜ್ಞಾನಿಕವಷ್ಟೇ ಅಲ್ಲ, ಅಪಾಯಕಾರಿಯೂ ಹೌದು. ಉತ್ತರ ಕನ್ನಡಕ್ಕೆ ಶಿವಮೊಗ್ಗೆಯೊಂದಿಗೆ ಯಾವುದೇ ಶೈಕ್ಷಣಿಕ ಸಂಬಂಧವೇ ಇಲ್ಲ. ಉತ್ತರ ಕನ್ನಡದಲ್ಲಿ ಉನ್ನತ ಶಿಕ್ಷಣಕ್ಕೆ ಅವಕಾಶ ಇಲ್ಲದಿದ್ದಾಗ ಶಿಕ್ಷಣಾರ್ಥಿಗಳು ಧಾರವಾಡ ಅಥವಾ ಮುಂಬೈಗೆ ಹೋಗುತ್ತಿದ್ದರೇ ವಿನಃ ಶಿವಮೊಗ್ಗೆಗಲ್ಲ.

ಹಾಗೆಯೇ ಸಾಂಸ್ಕೃತಿಕವಾಗಿಯೂ ಧಾರವಾಡ-ಉತ್ತರ ಕನ್ನಡದ ನಡುವೆ ಅವಿನಾಭಾವ ಸಂಬಂಧ ಇದ್ದೇ ಇತ್ತು, ಈಗಲೂ ಹಾಗೆ ಮುಂದುವರಿದಿದೆ. ಉತ್ತರ ಕನ್ನಡದ ಹಲವು ಬರಹಗಾರರು ತಯಾರಾಗಿದ್ದೇ ಧಾರವಾಡದ ಮಹತ್ವದ ಸಾಹಿತಿ-ಲೇಖಕರ ಗರಡಿಯಲ್ಲಿ. ಈ ಜಿಲ್ಲೆಗಳ ನಡುವಿನ ಸಾಂಸ್ಕೃತಿಕ ಕೊಡು-ಕೊಳ್ಳುವಿಕೆ ಶೈಕ್ಷಣಿಕ ಚಟುವಟಿಕೆಗಳ ಪ್ರಮುಖ ಭಾಗ. ಸಾಂಸ್ಕೃತಿಕ-ಶೈಕ್ಷಣಿಕ ಪರಿಸರ ಪರಸ್ಪರ ಪೂರಕ; ಮತ್ತು ಒಂದಕ್ಕೊಂದು ಜತೆಜತೆಯಾಗಿ ಬೆಳೆಯುವಂಥದ್ದು. ಈಗ ಧಾರವಾಡ ಮತ್ತು ಉತ್ತರ ಕನ್ನಡದ ಕಾಲೇಜುಗಳಲ್ಲಿ ಅಧ್ಯಾಪಕರಾಗಿರುವರಲ್ಲಿ ಹಲವರು ಸಹಪಾಠಿಗಳು. ಹೀಗಾಗಿ ಇವರ ನಡುವೆ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಶೈಕ್ಷಣಿಕ ಚರ್ಚೆ, ಪಠ್ಯೇತರ ಸಮಸ್ಯೆಗಳ ಚಿಂತನಮಂಥನ, ಪರ್ಯಾಯದ ಹುಡುಕಾಟ ಸದಾ ನಡೆಯುತ್ತಿರುತ್ತದೆ. ಉತ್ತರ ಕನ್ನಡದ ಕಾಲೇಜುಗಳನ್ನು ಶಿವಮೊಗ್ಗ ಯುನಿವರ್ಸಿಟಿಗೆ ಸೇರಿಸಿದರೆ ಈ ಸಾಂಸ್ಕೃತಿಕ-ಶೈಕ್ಷಣಿಕ ಸಂವಾದವೇ ಹೊರಟು ಹೋಗುತ್ತದೆ. ಇದು ಉತ್ತರ ಕನ್ನಡದ ಶೈಕ್ಷಣಿಕ ಪರಿಸರದ ಮೌಲ್ಯವೇ ಕುಸಿವಂತೆ ಮಾಡುವ ಅಪಾಯವಿದೆ.




ಧಾರವಾಡ ವಿವಿ ಅಥವಾ ಶಿವಮೊಗ್ಗ ವಿವಿ

ಶತಮಾನದಿಂದ ಉತ್ತರ ಕನ್ನಡದ ವಾಣಿಜ್ಯ-ವಹಿವಾಟು ಇರುವುದು ಧಾರವಾಡ-ಹುಬ್ಬಳ್ಳಿ ಜತೆಗೆ; ಶಿವಮೊಗ್ಗೆಯೊಂದಿಗಲ್ಲ. ಒಂದಿಷ್ಟು ಅಡಿಕೆ ವ್ಯಾಪಾರ ಶಿವಮೊಗ್ಗದೊಂದಿಗೆ ಉತ್ತರ ಕನ್ನಡದ ಶಿರಸಿ ಸಿಮೆಗಿದೆಯೇ ಹೊರತು ಇನ್ಯಾವ ಮಹತ್ವದ ನಂಟಿಲ್ಲ. ಉತ್ತರ ಕನ್ನಡದ ಕರಾವಳಿ ಬಂದರಿನ ಹಿನ್ನಾಡು ಈ ಧಾರವಾಡ-ಹುಬ್ಬಳ್ಳಿ. ಉತ್ತರ ಕನ್ನಡದ ಮಾರುಕಟ್ಟೆ ಹೆಚ್ಚಾಗಿ ಹುಬ್ಬಳ್ಳಿ ಮಾರ್ಕೆಟ್ಟಿನ ಮೇಲೇ ಅವಲಂಬಿಸಿದೆ. ಉತ್ತರ ಕನ್ನಡ-ಹುಬ್ಬಳ್ಳಿ-ಧಾರವಾಡದ ವಾಣಿಜ್ಯ ಸಂಬಂಧ ಶೈಕ್ಷಣಿಕ ಕ್ಷೇತ್ರದ ಮೇಲೆ ಮಹತ್ವದ ಪರಿಣಾಮ ಬೀರುತ್ತಿದೆ.

ಇಂಥ ಹಲವು ಕಾರಣಗಳಿಂದ ಉತ್ತರ ಕನ್ನಡದ ಕಾಲೇಜುಗಳು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರುವುದೇ ಸಮಂಜಸ; ನ್ಯಾಯೋಚಿತ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅನಿವಾರ್ಯ. ಇಂದು ಜಿಲ್ಲೆಯ ಶಿಕ್ಷಣ ಸಂಸ್ಥೆಗಳ ಮಂಡಳಿಯ ಪಂಡಿತರಿಗೆ, ಉಪನ್ಯಾಸಕರ ಕೂಟದ ಪ್ರಭೃತಿಗಳಿಗೆ ಅರ್ಥವಾಗದಿರುವುದು ವಿಚಿತ್ರ. ಯಡ್ಡಿ-ಕಾಗೇರಿ ಕಿತಾಪತಿ ಶುರುವಾಗಿ ಆರೇಳು ತಿಂಗಳು ಕಳೆದರೂ ಇವತ್ತಿಗೂ ಜಿಲ್ಲೆಯ ಕಾಲೇಜ್ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ಸೊಲ್ಲೆತ್ತಿಲ್ಲ. ಈ ಸಂಘಟನೆಯಲ್ಲಿ ರಾಜಕೀಯವಾಗಿ ಕಸರತ್ತು ಮಾಡಬಲ್ಲ ಮಹಾಮಹಿಮರಿದ್ದಾರೆ.

ಡಾ. ಎಂ.ಪಿ. ಕರ್ಕಿ ಎಂಬ ಬಿಜೆಪಿಯ ಮಾಜಿ ಶಾಸಕ ಜಿಲ್ಲೆಯ ಕಾಲೇಜು ಮ್ಯಾನೇಜ್‌ಮೆಂಟ್ ಅಂಡ್ ಪ್ರಿನ್ಸಿಪಾಲ್ ಅಸೋಸಿಯೇಷನ್‌ನ ಅಧ್ಯಕ್ಷ ಶಿಖಾಮಣಿ! ಈತ ತನಗೆ ತಾನೇ ಶಿಕ್ಷಣ ತಜ್ಞನೆಂದು ನಂಬಿರುವಾತ. ಸ್ಥಳೀಯ ಬಿಜೆಪಿಯಲ್ಲಿರುವ ಅತೃಪ್ತ ಆತ್ಮ ಬೇರೆ. ಮಂತ್ರಿ ಕಾಗೇರಿ, ಸಂಸದ ಅನಂತ್ಕುಮಾರ್ ಎಂಬ ಸ್ವಜಾತಿ ಹವ್ಯಕ ಹುಡುಗರ ಆಧುನಿಕ ರಾಜಕಾರಣದ ವರಸೆಗೆ ಹೈರಾಣಾಗಿ ಮೂಲೆ ಸೇರಿರುವ ಮುದಿ ಡಾ. ಕರ್ಕಿಗಿನ್ನೂ ಅಧಿಕಾರದ ವಾಂಛೆ ಕಮ್ಮಿಯಾಗಿಲ್ಲ. ಮತಿಗೇಡಿ ಮಂತ್ರಿ ಡಾ. ವಿ.ಎಸ್. ಆಚಾರ್ಯರ ಸಮಕಾಲೀನ ಒಡನಾಡಿಯಾದ ತನಗೆ ಸಿಎಂ ಯಡ್ಡಿ ಯಾವುದಾದರೂ ಕಾರ್ಪೊರೇಷನ್ ಗೂಟದ ಕಾರು, ಎಂಎಲ್‌ಸಿ ಅಥವಾ ರಾಜ್ಯಸಭೆ ಮೆಂಬರಿಕೆ ಕೊಡಬಹುದೆಂದು ದೂ(ದು)ರಾಲೋಚನೆ-ಕೊನೆಗೆ ಯಾವುದಾದರೂ ಮಂಡಳಿಯ ಮೆಂಬರಿಕೆ ಸಿಕ್ಕರೂ ಕರ್ಕಿ ಬಿಡುವ ಪೈಕಿಯಲ್ಲ.



ಹೀಗಾಗಿ ಡಾ. ಕರ್ಕಿ ಉತ್ತರ ಕನ್ನಡದ ಕಾಲೇಜುಗಳಿಗೆ-ವಿದ್ಯಾರ್ಥಿಗಳಿಗೆ ಅನ್ಯಾಯವಾದರೂ ಸರ್ಕಾರದ ಈ ಭಂಡ ಧೋರಣೆಯನ್ನು ವಿರೋಧಿಸುತ್ತಿಲ್ಲ. ಯಡ್ಡಿ ಕೆಂಗಣ್ಣಿಗೆ ತುತ್ತಾಗುವುದು ಕರ್ಕಿಗೆ ಬೇಕಾಗಿಲ್ಲ ಈ ಇಳಿವಯಸ್ಸಿನಲ್ಲಿ! ಕಳೆದ ತಿಂಗಳು ಕುಮಟಾದಲ್ಲಿ ಕಾಲೇಜು ಶಿಕ್ಷಣದ ಜಂಟಿ ನಿರ್ದೇಶಕರಿಗೆ ಸನ್ಮಾನ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ಸನ್ಮಾನ ಮಾಡಿದ ಸಂದರ್ಭದಲ್ಲಿ ಡಾ. ಕರ್ಕಿ ಯಡ್ಡಿ ಸರ್ಕಾರದ ವಿವಿ ಬದಲಾವಣೆ ನಿರ್ಧಾರ ಖಂಡಿಸುವ ಕಾರ್ಯಕ್ರಮವೂ ಇತ್ತಂತೆ. ಆದರೆ ಕರ್ಕಿ ಮೋಗಂ ಆಗಿ ಉಳಿದಿದ್ದರು. ಇದು ಕರ್ಕಿಯನ್ನು ಹುದ್ದೆಗಾಗಿ ಹೋರಾಡುವ ಮಹಾನುಭಾವನೆಂದು ನಗೆಪಾಟಲಿಗೀಡು ಮಾಡಿತ್ತು.


ಕಾಗೇರಿ-ಕರ್ಕಿ ಎಂಬ ವಿಪ್ರೋತ್ತಮರು ಉತ್ತರ ಕನ್ನಡದ ಮಹಾವಿದ್ಯಾಲಯಗಳನ್ನು ಕರ್ನಾಟಕ ಯೂನಿವರ್ಸಿಟಿಯ ಕಕ್ಷೆಯಿಂದ ಹೊರತಂದು ಯಡ್ಡಿಯ ಶಿವಮೊಗ್ಗದ ಕುವೆಂಪು ವಿವಿಗೆ ಸೇರಿಸುವ ಸಂಚಿನಲ್ಲಿ ಶಾಮೀಲಾಗಿರುವುದಕ್ಕೆ ಜಾತಿಪ್ರೀತಿಯೂ ಕಾರಣವೆಂಬ ಸುದ್ದಿ ಹರಿದಾಡುತ್ತಿದೆ. ಶಿರಸಿ ಸೀಮೆಯ ಅಡಿಕೆ ಬೆಳೆಗಾರರಾದ ಒಂದಷ್ಟು ಬ್ರಾಹ್ಮಣರಿಗೆ ಅಡಿಕೆ ಮಾರ್ಕೆಟ್ ಮತ್ತು ಜಾತಿ ಲಿಂಕುಗಳಿಂದಾಗಿ ಶಿವಮೊಗ್ಗೆಯ ಸಂಬಂಧ ಜಾಸ್ತಿ. ಆದ್ದರಿಂದಲೇ ಈ ವಟು ಸಂಕುಲ "ಎಂಬೈಗೆ ಧಾರವಾಡ ಆದ್ರೇನು... ಶಿವಮೊಗ್ಗ ಆದ್ರೇನು.. ಅಲ್ವಾ...? ಎಲ್ಲಾ ಒಂದೇ....." ಎಂಬ ವೈದಿಕವಾದಿ ಮಂತ್ರ ಪಠಿಸುತ್ತಿದೆ.



ಕುವೆಂಪು ಯೂನಿವರ್ಸಿಟಿ

ಒಟ್ಟಿನಲ್ಲಿ ಯಡ್ಡಿ-ಕಾಗೇರಿ ಕಾಲದಲ್ಲಿ ಉತ್ತರ ಕನ್ನಡಕ್ಕೆ ಕೇಡು ಬಂದಿರುವುದಂತೂ ಖರೆ.

• ನಹುಶ



# ಬಾಬಾಪುಣ್ಯ

ಸಾಯಿಬಾಬಾ ಜೊತೆ ನಮ್ಮೂರಿನ ಸಂಬಂಧ ಅರ್ಧ ಶತಮಾನದ್ದು. ನಾನಿನ್ನೂ ನಡೆದಾಡುವ ಕೂಸಾಗಿದ್ದಾಗಲೇ ನಮ್ಮಪ್ಪ ನಮ್ಮನ್ನೆಲ್ಲಾ ಕಟ್ಟಿಕೊಂಡು ಪುಟ್ಟಪರ್ತಿಗೆ ಹೋಗಿ ಬಂದಿದ್ದರು. ನಮ್ಮೂರಿನ ಆಪ್ತೇಷ್ಟರೆಲ್ಲಾ ಆಗಲೇ ಸಾಯಿ ಬಾಬಾರನ್ನು ಕಂಡು ಅವರ ಭಕ್ತರಾಗಿದ್ದರು. ನನ್ನ ಚಿಕ್ಕಪ್ಪ ಒಬ್ಬರು ಸಂಕಟ ಬಂದಾಗಲೆಲ್ಲಾ ಮೈಲುಗಟ್ಟಲೇ ನಡೆದು, ಲಾರಿಯೋ, ಬಸ್ಸೋ ಹಿಡಿದು ಬೆಂಗಳೂರು ತಲುಪಿ ಪುಟ್ಟಪರ್ತಿಗೆ ಹೋಗಿ ಬಾಬಾ ಅವರ ಬಳಿ ಕೂತು ಸಾಂತ್ವನ ಪಡೆದು ಬರುತಿದ್ದರು. ಅವರ ಮದುವೆಯಾಗಿದ್ದೂ ಪುಟ್ಟಪರ್ತಿಯಲ್ಲೇ. ಸಾಯಿಬಾಬಾ ತಾಳಿ ಸೃಷ್ಟಿಸಿಕೊಟ್ಟು ದಂಪತಿಗಳನ್ನು ಆಶೀರ್ವದಿಸಿದ್ದರು.

ಬಸ್ಸು ರಸ್ತೆ ಯಾವುದೂ ನೆಟ್ಟಗಿಲ್ಲದ 60ರ ದಶಕದಲ್ಲಿ ದ.ಕ.ದ ಮೂಲೆಯ ಹಳ್ಳಿಗಳ ಮಂದಿ ಬಾಬಾ ಪ್ರಭಾವಕ್ಕೆ ಒಳಗಾಗಿದ್ದರು. ಬಿಡುವಾದಾಗ ಕೈಂಕರ್ಯವೆಂಬಂತೆ ಪುಟ್ಟಪರ್ತಿಗೆ ಹೋಗಿಬರೋರು. ಗುರುವಾರ ಸತ್ಸಂಗ ಭಜನೆ ಮಾಡೋರು. ನಗರ ಸಂಕೀರ್ತನೆ ನಡೆಸೋರು.

ಈ ಎಲ್ಲರೂ ಸಂಸಾರದಲ್ಲಿ ಮುಳುಗಿದ್ದವರೇ. ಆಸ್ತಿ ತಗಾದೆ, ದಾಯಾದಿ ಕಲಹ, ಕೃಷಿ ಉಪದ್ವ್ಯಾಪಗಳಲ್ಲಿ ಮೈಕೆರೆದುಕೊಂಡು ಇದ್ದವರೇ. ಇವರೆಲ್ಲ ಪೂರಾ ಬದಲಾದರೇ ಎಂದರೆ ಹಾಗೇನೂ ಆಗಲಿಲ್ಲ. ಅವರ ಕಷ್ಟಕಾರ್ಪಣ್ಯಗಳೆಲ್ಲ ಮಟಾಮಾಯವಾಯಿತೇ ಎಂದರೆ ಹಾಗೂ ಆಗಲಿಲ್ಲ.

ಕೆಲವರು ಆರಂಭಿಕ ಉತ್ಸಾಹದ ಬಳಿಕ ತಮ್ಮ ತಮ್ಮ ದೈವ, ಕುಲ ದೇವರುಗಳನ್ನು ನೆಚ್ಚಿಕೊಂಡರು. ದೇವರಗೂಡಿನ ಸಾಲು ಫೋಟೋಗಳಲ್ಲಿ ಬಾಬಾ ಸೇರಿಕೊಂಡಿದ್ದರು. ಬಾಬಾಗೆ ಬೇಜಾರಾಗದ ಹಾಗೆ ಅವರ ಫೋಟೋಕ್ಕೂ ಹೂವು ಅಗರಬತ್ತಿ ಧೂಪ ಬೆಳಗೋರು.

ತುಂಬಾ ಮಂದಿ – ಕಷ್ಟವೋ ನಷ್ಟವೋ – ಬಾಬಾನ ಕೈಬಿಡಲಿಲ್ಲ. ಇವರಲ್ಲಿ ಕೆಲವರು ವ್ಯಾವಹಾರಿಕ, ಸಾಮಾಜಿಕ ಸೆಡವಿನಲ್ಲಿ ಸಾಕಷ್ಟು ಕ್ಷುದ್ರ ಕೆಲಸ ಮಾಡಿದ್ದೂ ನಾನು ಬಲ್ಲೆ. ಆದರೆ ಈಗ ತಿರುಗಿ ನೋಡಿದಾಗ – ಬಾಬಾ ಸೆಳವಿಗೆ ಸಿಗದೇ ಇದ್ದಿದ್ದರೆ ಇವರು ಇನ್ನಷ್ಟು ಕ್ಷುದ್ರ ಮನುಷ್ಯರಾಗುತ್ತಿದ್ದರೋ ಏನೋ ಅನ್ನಿಸುತ್ತೆ.

ಅನೇಕ ಬ್ರಾಹ್ಮಣರು ತಮ್ಮ ಕರ್ಮಠ ನೈಮಿತ್ತಿಕಗಳನ್ನು ಬಿಟ್ಟು ಗುರುವಾರ ಭಜನೆ, ನಗರ ಸಂಕೀರ್ತನೆಗಳಲ್ಲಿ ಅನ್ಯ ಶೂದ್ರ ಸಾಯಿಭಕ್ತರೊಡಗೂಡಿ ಭಾಗವಹಿಸುತ್ತಿದ್ದರು. ಹೊಸ ಪಂಥದ ಅನುಯಾಯಿಗಳಿಗಿರುವ ಸಾಲಿಡಾರಿಟಿಯ ಸಂಭ್ರಮ ಬೀಗುವಿಕೆ ಅವರಲ್ಲಿತ್ತು.

ಸಾಯಿಬಾಬಾ ಸಂಸ್ಥೆಗಳ ಚಿಹ್ನೆಗಳಲ್ಲಿ ಸರ್ವಧರ್ಮಗಳ ಗುರುತು ಇರುವುದನ್ನು ಗಮನಿಸಬೇಕು. ಹಿಂದೂತ್ವದ ವಿಕೃತ ಚಿತಾವಣೆಯ ಅಬ್ಬರದ ಮಧ್ಯೆಯೂ ಈ ಸಾಯಿ ಬಾಬಾ ಭಕ್ತರು ಸುಮಾರಾಗಿ ಸೆಕ್ಯುಲರ್ ಆಗಿಯೇ ಇದ್ದರು. ವಸ್ತುತಃ ಸಾಯಿಬಾಬಾ ಜಪ್ಪಯ್ಯ ಅಂದರೂ ಹಿಂದೂತ್ವದ ಪಲ್ಲಕ್ಕಿ ಹತ್ತಲು ಹಿಂಜರಿದದ್ದು ಈ ಭಕ್ತರ ಈ ನಿಲುಮೆಗೆ ಕಾರಣವಿರಬಹುದು. ಸಂಸ್ಥೆಯ ಚಿಹ್ನೆ ಮನಸ್ಸಿನಲ್ಲೆಲ್ಲೋ ರಿಜಿಸ್ಟರ್ ಆಗಿ, ತೀರಾ ವಿಕೃತವಾಗದಂತೆ ತಡೆದುಬಿಟ್ಟರಲೂಬಹುದು.. ಎಲ್ಲರನ್ನೂ ಪ್ರೀತಿಸು, ಸೇವೆ ಮಾಡು ಎಂಬ ಧ್ಯೇಯ ವಾಕ್ಯದ ಕಾರಣದಿಂದಾಗಿ, ಪ್ರೀತಿಸಿದರೋ, ಸೇವೆಮಾಡಿದರೋ ಅದು ಅಲಾಯಿದ; ಆದರೆ ದ್ವೇಷಿಸೋದು, ತೊಂದರೆ ಕೊಡೋದಕ್ಕೆ ಅಷ್ಟು ತಡೆ ಆಗಿದ್ದಂತೂ ಖಂಡಿತ.

ಹಾಗೇ ಬಾಬಾ ಭಕ್ತರು ತೀರಾ ಜಾತಿವಂದಿಗ ಸ್ವಾಮಿಗಳ ಕೈಂಕರ್ಯಕ್ಕಿಳಿಯಲಿಲ್ಲ ಅನ್ನೋದೂ ನಾನು ಗಮನಿಸಿದ ಅಂಶ.

ಎಪ್ಪತ್ತರ ದಶಕದ ವೈಚಾರಿಕತೆಯ ಹಿನ್ನೆಲೆಯಲ್ಲಿ ಹಲವು ಸಾಯಿ ಭಕ್ತರ ಮಕ್ಕಳು 'ಧರ್ಮಲಂಡ' ವಿಚಾರವಾದಿಗಳಾಗಿದ್ದೂ ಗಮನಾರ್ಹ. ನಮ್ಮೂರಲ್ಲೇ ರಾಮಚಂದ್ರ ದೇವ ಅವರ ಅಪ್ಪ ಅಮ್ಮ ಪರಮ ಸಾಯಿಭಕ್ತರು. ದೇವ ಸಂಪೂರ್ಣ ಆಧುನಿಕ ಮನಸ್ಸಿನ ಸಾಹಿತಿಗಳಾದರು. ಸುಬ್ರಾಯ ಚೊಕ್ಕಾಡಿ ಕಟ್ಟಿದ ಸುಮನಸಾ ಬಳಗದವರಂತೂ ಊರವರಿಗೆ ನಾಸ್ತಿಕ ಭಯೋತ್ಪಾದಕರ ಥರ ಕಂಡ ಕಾಲವೊಂದಿತ್ತು. ನಾನೂ ಈ ಬಳಗದಲ್ಲಿ ಬೆಳೆದವನು.

ಈ ಹೊಸ ತಲೆಮಾರು (ಈಗ ಐವತ್ತು ದಾಟಿದ ನನ್ನ ತಲೆಮಾರು) ನಗರಗಳಲ್ಲೇನೂ ತಲೆಮರೆಸಿ ಮಾಯವಾಗಲಿಲ್ಲ. ಹಳ್ಳಿಯಲ್ಲೇ ಇದ್ದು ಈ ಆಸ್ತಿಕ ಹಿರಿಯ ತಲೆಮಾರಿನೊಂದಿಗೆ ಬಾಳುತ್ತಲೇ ಹೊಸ ಅರ್ಥ ಹುಡುಕಿಕೊಳ್ಳಲು ಯತ್ನಿಸಿತ್ತು. ಹಾಗೆಂದು ಭಕ್ತಿಭಾವ ತುಂಬಿದ ನಮ್ಮ ಹಿರಿಯ ತಲೆಮಾರಿಗಿಂತ ಹೆಚ್ಚು ಮೌಲ್ಯಯುತವಾಗಿ ನಾವು ಬಾಳಿದ್ದೇವೆ ಎಂದು ನನಗೇನೂ ಅನಿಸಿಲ್ಲ. ಆ ಕಾಲದಲ್ಲಿ, ಆ ದುರ್ದಮ ಸಂದರ್ಭದಲ್ಲಿ ಈ ಹಿರಿಯರು ಊರುಕಟ್ಟಲು ದುಡಿದ ಶ್ರದ್ಧೆಯ ಹಿಂದೆ, ಗಾಂಧಿ–ನೆಹರೂ ಜೊತೆ ಬಾಬಾ ಕೂಡಾ ಇದ್ದರು ಅನ್ನಿಸುತ್ತೆ. ಊರಿಗೆ ಶಾಲೆ, ರಸ್ತೆ ತರಲು ಈ ಭಕ್ತರೂ ಅನನ್ಯ ದುಡಿದಿದ್ದರು.

... ... ... ... .. .. .. .. .. .. ..

20ನೇ ಶತಮಾನದ ಪೂರ್ವಾರ್ಧ ಅಂದರೆ ಸ್ವಾತಂತ್ರ್ಯ ಸಿಗುವವರೆಗೂ ಸ್ಫೋಟಗೊಂಡ ಆಧ್ಯಾತ್ಮಿಕ ಅಸ್ಮಿತೆ, ಅದರ ಸಾಮಾಜಿಕ ಆಯಾಮ ಗಮನಿಸಿದರೆ, ಅದಕ್ಕೊಂದು ಸುಧಾರಣವಾದಿ ನಿಲುವು ಮತ್ತು ವೈಚಾರಿಕ ಮಿಲಿಟೆನ್ಸಿ ಗಮನಿಸಬಹುದು. ಗಾಂಧಿ ಮತ್ತು ವಿವೇಕಾನಂದರು ಈ ಎರಡು ಧಾರೆಗಳ ಮೂಲವೆನ್ನಬಹುದು. ತೀರಾ ವಿಶಿಷ್ಟ ಮ್ಯಾಗ್ನೆಟ್ ಥರ ಇದ್ದ ಶಿರಡಿ ಬಾಬಾ ಬಿಟ್ಟರೆ, ಉಳಿದಂತೆ ಆಧ್ಯಾತ್ಮ, ಭಕ್ತಿಯ ವೈಚಾರಿಕ ಮಂಥನಗಳು ವೈದಿಕ ನೆಲೆಯ ಸುಧಾರಣೆಯ ಸುತ್ತ ಕೇಂದ್ರೀಕರಿಸಿದ್ದವು. ಆದರೆ ವೈದಿಕಶಾಹಿಯನ್ನು ಕ್ಯಾರೇ ಅನ್ನದೇ ಅನನ್ಯ ವಿಶಾಲ ಧಾರೆಯೊಂದನ್ನು ಸೃಷ್ಟಿಸಿದ್ದ ಭಕ್ತಿಪಂಥ 20ನೇ ಶತಮಾನದಲ್ಲಿ ಅಂಚಿಗೆ ಸರಿದಿತ್ತು ಅನ್ನಿಸುತ್ತೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ರಾಷ್ಟ್ರೀಯ ಪುನರ್ರಚನೆಯ ಭಾವನಾತ್ಮಕ ಕನಸಿನೊಂದಿಗೇ ಜಾತಿಮತ ಪಂಥ ಮೀರಿ ಆಚರಣೆಗಳ ಹಳಿಗಳಾಚೆ 'ನಿನ್ನಿಷ್ಟದಂತೆ ಧ್ಯಾನಿಸು, ಯಥಾನುಶಕ್ತಿ ಪೂಜಿಸು, ಭಜಿಸು' ಎಂಬ ಒತ್ತಾಸೆಯನ್ನು ಪೂರ್ಣಗೊಳಿಸಿದ್ದು ಸಾಯಿಬಾಬಾ ಅನ್ನಿಸುತ್ತೆ (ರಾಮಕೃಷ್ಣ ಮಠವೂ ತ್ರಿಮತಸ್ಥ ಬ್ರಾಹ್ಮಣ ಪತ್ರಗಳನ್ನೂ ವ್ಯಾಖ್ಯಾನ ಸಹಿತ ಪ್ರಕಟಿಸುವ ಗೀಳಿಗೆ ಬಿದ್ದಿದ್ದು ಗಮನಿಸಿದರೆ ಈ ಅಂಶ ಸ್ಪಷ್ಟವಾದೀತು).

ನಿತ್ಯ ಸಂಜೆ ನಾಲ್ಕು ಭಜನೆ ಮೂಲಕ ಸಾಂತ್ವನ ಪಡೆದುಕೊಳ್ಳಬಹುದು, ದುರಿತ ಪರಿಹಾರಕ್ಕೆ ಪ್ರಾರ್ಥಿಸಿಕೊಳ್ಳಬಹುದು ಎಂಬ ಧೈರ್ಯ ಮತ್ತೆ ಸಾಯಿಬಾಬಾ ಕೊಟ್ಟರು ಅನ್ನಿಸುತ್ತೆ. ಎಲ್ಲರಿಗೂ ಪ್ರವೇಶ; ಎಲ್ಲರಿಗೂ ಸಹಭಾಗಿತ್ವ; ಹರಕೆ ಭಕ್ತಿಯ ಸರಳೀಕೃತ ರೂಪ; ಬಾಳಿನ ಅರ್ಥಾನ್ವೇಷಣೆಗೆ ಸರಳ ಭಾಷ್ಯ ಇದೆಲ್ಲಾ ದೇವಮಾನವರ ಯಶಸ್ಸಿನ ಗುಟ್ಟು. ಪ್ರಾಯಶಃ ದೇವ ಮಾನವರು ಹುಟ್ಟುವುದೇ ಇಂಥಾ ಒಂದು ವಿಮೋಚನೆಯ ಬೇಡಿಕೆಯಲ್ಲಿ.

ಇದೆಲ್ಲಾ ಕ್ರಮೇಣ ವ್ಯಾವಹಾರಿಕ ಧನಾರ್ಜನೆಗೆ ತಿರುಗುವುದೂ ಸಹಜ. ಗಾಂಧಿ, ರಮಣರ ಥರ ಬಾಬಾ ಆಗಲೇ ಇಲ್ಲ. ಅವರೇ ಘೋಷಿಸಿಕೊಂಡ ಅವರ ಮೂಲ ಅವತಾರದಂತೆಯೂ ಇರಲಿಲ್ಲ. ಆದರೆ ತಲೆಹಣ್ಣಾದ ಭಕ್ತರನ್ನು ಮಾತಾಡಿಸಿ ನೋಡಿ; ಬಾಬಾ ಪವಾಡದ ಬಗ್ಗೆ ಅವರು ಪರವಶರಾಗಿ ಮಾತಾಡಿದರೂ ಅದೇ ಆತ್ಯಂತಿಕವೆಂಬಂತೆ ಅವರು ಹೇಳುವುದಿಲ್ಲ. ಬದಲು ಬಾಬಾ ನಮಗೆ ನೆಮ್ಮದಿ ಕೊಟ್ಟರು ಎನ್ನುತ್ತಾರೆ. ಅವರ ಭಾವ ಸಂಪನ್ನತೆಯಲ್ಲಿ ನೆಲೆ ನಿಂತ ಬಾಬಾನೇ ಬೇರೆ, ಮೊನ್ನೆ ತೀರಿಕೊಂಡ ಬಾಬಾನೇ ಬೇರೆ ಅನ್ನಿಸುತ್ತೆ.

85ನೇ ವಯಸ್ಸಿಗೆ ಸಹಜವಾದ ಸುಕ್ಕುಗಟ್ಟಿದ ಮುಖಕ್ಕೆ ತೀರಾ ಅಸಹಜವಾದ ಡೈ ಮಾಡಿದಂತ ಕಪ್ಪು ಕೂದಲು! ಫೋಟೋದಲ್ಲಿ ರಾರಾಜಿಸುವ ಇಮೇಜಿನ ಥರ ಬದುಕಲು ಹೆಣಗುವ ಸಿನೆಮಾ ಮಂದಿ ಥರ ಬಾಬಾ ಕೂಡಾ ಇಮೇಜಿನ ಬಂಧಿಯಾಗಿದ್ದರೇನೋ.

ಗಾಂಧೀ, ರಮಣ... ಬಿಡಿ, ಅದು ದೊಡ್ಡ ಹೋಲಿಕೆಯಾಯಿತು. ನಮ್ಮ ಕಾಲದ ರಾಜಕುಮಾರ್, ರಜನೀಕಾಂತ್ ಅತ್ಯಂತ ಪ್ರಾಮಾಣಿಕವಾಗಿ ನಸುನಗುತ್ತಾ ಬೊಕ್ಕತಲೆ ತೋರಿಸಲು ನಾಚದೇ ಓಡಾಡಿದ್ದು, ಓಡಾಡುತ್ತಿರುವುದು ಗಮನಿಸಿದರೆ ಬಾಬಾರಂತಹಾ ಬಾಬಾ ಬಗ್ಗೆಯೂ ಪಿಚ್ಚೆನಿಸುತ್ತದೆ.


ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ನೂರಾರು ಹಳ್ಳಿಗಳಿಗೆ ಕುಡಿಯುವ ನೀರು ಕೊಟ್ಟ ಮೇಲೆ, ಒಲಂಪಿಕ್ ದರ್ಜೆಯ ಸ್ಟೇಡಿಯಂನ್ನು ಪುಟ್ಟಪರ್ತಿಯಲ್ಲಿ ಅದೆಷ್ಟೋ ಕೋಟಿ ವೆಚ್ಚಕ್ಕೆ ಕಟ್ಟಿಸುವುದು ಪರಮ ವೈರುಧ್ಯದ ಅಸಂಬದ್ಧತೆ ಎಂದು ಬಾಬಾಗೂ ಅವರ ಟ್ರಸ್ಟಿನವರಿಗೂ ಅರ್ಥವಾಗಲಿಲ್ಲ.

ಇದನ್ನೆಲ್ಲಾ ನೋಡಿ, ನಮ್ಮ ಜನರತ್ತ ನೋಡಿದರೆ, ಸಾತ್ವಿಕ ನೆಲೆಯೊಂದನ್ನು ಎದೆಯೊಳಗೆ ಬೆಚ್ಚಗೆ ಕಾದಿಡಲು ನಮ್ಮ ಜನಸಾಮಾನ್ಯರು ಕಾಲಕಾಲಕ್ಕೆ ತಹತಹಿಸಿದ್ದಾರೆ. ಕಾಲಕಾಲಕ್ಕೆ ಅದಕ್ಕೊಂದು ರೂಪ, ನಾಮ ಮತ್ತು ದೈವತ್ವ ಕೊಟ್ಟು ಜತನ ಮಾಡುತ್ತಾ ಬಂದಿದ್ದಾರೆ. ಕಳೆದ 50 ವರ್ಷದಲ್ಲಿ ಅಂಥಾ ಒಂದು ಬೆಳಕಿಗೆ ಸಾಯಿಬಾಬಾ ಎಂದು ಹೆಸರಿಟ್ಟರು. ಅದೂ ಕಮಟು ವಾಸನೆ ಬಂದು ಆರುವ ಹಂತಕ್ಕೆ ಬಂದರೆ ಇನ್ನೊಂದು...

ನಮ್ಮ ನಾಡಿನ ಸಾತ್ವಿಕ ಮುಗ್ಧ ಮನಸುಗಳ ಒಳಗೊಂದು ನೆಲೆ ಪಡೆಯಲು ಬಾಬಾ ಪುಣ್ಯ ಮಾಡಿದ್ದರು. ಅಷ್ಟರ ಮಟ್ಟಿಗೆ ಬಾಬಾ ಜೀವನ ಪಾವನವಾಯಿತು.

• ಕೆ.ಪಿ.ಸುರೇಶ

---



# ಹುಬ್ಬಳ್ಳಿ ಎಪಿಎಂಸಿ ಪ್ರದೀಪ ಶೆಟ್ಟರನ ಖರೀದಿ ಕರಾಮತ್ತು!

ಇದು ರಾಜಕೀಯದ ಅಸಲೀ ವ್ಯವಹಾರ.

ಇಲ್ಲಿ ಜಿದ್ದಿಗೆ ಬಿದ್ದವರಂತೆ ಕೆಸರೆರಚಿಕೊಳ್ಳುವವರು ಏಕಾಏಕಿ ತಬ್ಬಿ ಮುದ್ದಾಡಿದರೂ ಆಶ್ಚರ್ಯವಿಲ್ಲ. ವಿರೋಧಿ ಪಾಳೆಯದ ಮುಂದೆ ಝಳಪಿಸಿದ ಖಡ್ಗ ತನ್ನವರದ್ದೇ ಎದೆಗೆ ನಾಟಿಕೊಂಡರೂ ವಿಶೇಷವಲ್ಲ. ಇಂತಹುದೊಂದು ವಾಸ್ತವ ಹುಬ್ಬಳ್ಳಿಯ ಎಪಿಎಂಸಿ ಅಂಗಳದಲ್ಲಿ ಬಲವಾಗಿ ತಲೆ ಎತ್ತಿದೆ. ರಾಜ್ಯ ರಾಜಕಾರಣದಲ್ಲಿ ಪಕ್ಕಾ ವೈರಿಗಳಂತಿರುವ ಬಿಜೆಪಿ–ಜೆಡಿಎಸ್ ಅಪ್ಪಟ ಗೆಳೆತನದ ಪೋಸಿನೊಂದಿಗೆ ಹಲ್ಕಿರಿದು ಹೇಸಿಗೆ ಹುಟ್ಟಿಸಿವೆ.

ಏಷ್ಯಾದಲ್ಲಿಯೇ ಅತಿದೊಡ್ಡ ಕಾರ್ಯಕ್ಷೇತ್ರ ಹೊಂದಿರುವ ಹೆಗ್ಗಳಿಕೆ ಹುಬ್ಬಳ್ಳಿಯ ಎಪಿಎಂಸಿಗಿದೆ. ಸದ್ಯ 14 ಸ್ಥಾನಗಳಿಗಾಗಿ ನಡೆದ ಪ್ರಸ್ತುತ ಚುನಾವಣೆಯಲ್ಲಿ ಕಾಂಗ್ರೆಸ್ ಏಳು ಸ್ಥಾನ ಪಡೆದು ಮೊದಲ ಸ್ಥಾನದಲ್ಲಿದ್ದರೆ, ಜೆಡಿಎಸ್ ನಾಲ್ಕು ಸೀಟಿನೊಂದಿಗೆ ಎರಡನೇ ಸ್ಥಾನದಲ್ಲಿತ್ತು. ಭಯಂಕರ ಅಭಿವೃದ್ಧಿಯ ಅಲೆಯಲ್ಲಿ ತಾರಾಡುತ್ತಿರುವ ಬಿಜೆಪಿ ಮೂರೇಮೂರು ಸ್ಥಾನ ಪಡೆಯುವ ಮೂಲಕ ತೀವ್ರ ಮುಖಭಂಗ ಅನುಭವಿಸಿತ್ತು. ಇವೆಲ್ಲವನ್ನು ಗಮನಿಸಿದವರು ಕಾಂಗ್ರೆಸ್ ಜೆಡಿಎಸ್‌ನೊಂದಿಗಿನ ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ಅಧಿಕಾರ ಹಿಡಿಯುತ್ತದೆಂದೇ ಅಂದುಕೊಂಡಿದ್ದರು.

ಆದರೆ ಈ ರೀತಿಯದ್ದೊಂದು ಕಣ್ಣೆದುರಿನ ವಾಸ್ತವವನ್ನೇ ಉಲ್ಟಾ ಹೊಡೆಸಿದವನು ಪಿ.ಸಿ. ಸಿದ್ದನಗೌಡ್ರನೆಂಬ ಅವಿವೇಕಿ. ಜೆಡಿಎಸ್‌ನ ಪ್ರಧಾನ ಕಾರ್ಯದರ್ಶಿಯಾಗಿರುವ ಈತ ಬಿಜೆಪಿಯತ್ತ ಮುಸುಡಿ ತಿರುವಿ ಒಂಟಿಗಾಲಲ್ಲಿ ನಿಂತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಇಂಥವನ ಮುಂದೆ ಹಣದ ಥೈಲಿ ಹಿಡಿದು ಪಳಗಿಸಿಕೊಂಡವನು ಜಿಲ್ಲಾ ಉಸ್ತುವಾರಿ ಸಚಿವ ಜಗದೀಶ್ ಶೆಟ್ಟರರ ತಮ್ಮ ಪ್ರದೀಪ್ ಶೆಟ್ಟರ್. ಹೀಗೆ ಕೈತುಂಬ ಬಿಜೆಪಿ ಪಕ್ಷದ ಎಂಜಲು ತುಂಬಿಕೊಂಡು ಬಂದ ಸಿದ್ದನಗೌಡ ಜೆಡಿಎಸ್‌ನ ನಾಲ್ಕು ಸದಸ್ಯರನ್ನು ಬಿಜೆಪಿಗೆ ಅಡ ಇಟ್ಟ. ಪರಿಣಾಮವಾಗಿ ಎಪಿಎಂಸಿಯ ಕಸದ ತೊಟ್ಟಿಯಲ್ಲಿದ್ದ ಬಿಜೆಪಿ ಏಕಾಏಕಿ ಅಧಿಕಾರ ಹಿಡಿದರೆ, ನಿಜವಾಗಿ ಅರ್ಹತೆಯಿದ್ದ ಕಾಂಗ್ರೆಸ್ ಕೆಸರುಮುಖದ ಸ್ಥಿತಿಗಿಳಿಯಬೇಕಾಯಿತು.

ಪ್ರದೀಪ್ ಶೆಟ್ಟರ್ ದುಡ್ಡಿನ ಬಲವೊಂದರಿಂದಲೇ ಎಂಥಾ ಆಟ ಕಟ್ಟಿದನೆಂದರೆ, ಕಾಂಗ್ರೆಸ್‌ನ ಸದಸ್ಯನೊಬ್ಬ ಕೂಡಾ ಕಮಲದ ಪಾಲಾಗಿದ್ದ. ಇದು ಕಾಂಗ್ರೆಸ್ ಕಮಂಗಿ ಹನುಮರೆಡ್ಡಿ ಎಂಬಾತನ ಕುಕೃತ್ಯ. ಈತ ಕೆಪಿಸಿಸಿ ಸದಸ್ಯನೂ ಹೌದು. ಇಂಥವನು ಪ್ರದೀಪ್ ಶೆಟ್ಟರನ ಎಂಜಲಿನಾಸೆಗೆ ಬಿದ್ದು ಶಿರಗುಪ್ಪಿ ಕ್ಷೇತ್ರದಿಂದ ಗೆದ್ದಿದ್ದ ಗುರುನಾಥ ಕಗದಾಳ ಎಂಬಾತನನ್ನು ಅಖಂಡ ಏಳು ಲಕ್ಷ ರೂಪಾಯಿಗೆ ಬಿಜೆಪಿಗೆ ಮಾರಿದ. ಹೀಗೆ ಬಿಜೆಪಿ ಅಧಿಕಾರ ಹಿಡಿಯುವ ಹಾದಿಯನ್ನು ಸಲೀಸು ಮಾಡಿಕೊಂಡಿತು.


ಈ ರೀತಿ ಜನರ ಇಚ್ಛೆಗೆ ವಿರುದ್ಧವಾಗಿ ಬಿಜೆಪಿ ಆಡಳಿತ ವಹಿಸುವಂತೆ ಮಾಡಿದ ಸಿದ್ದನಗೌಡ ಜೆಡಿಎಸ್‌ನಿಂದ ಎಲ್ಲಾ ರೀತಿಯ ಉಪಯೋಗಗಳನ್ನು ಪಡೆದವನು. ಸಚಿವಗಿರಿಯನ್ನೂ ಅನುಭವಿಸಿದ್ದ ಈತ ಜನರಿಗಾಗಿ ಬಿಡಿಗಾಸಿನ ಕೆಲಸವನ್ನೂ ಮಾಡಿದ ಉದಾಹರಣೆಗಳಿಲ್ಲ. ಇದೆಲ್ಲದರಿಂದ ರೋಸತ್ತ ಜನ ಎರಡು ವಿಧಾನಸಭಾ ಚುನಾವಣೆಗಳಲ್ಲಿ ಸಿದ್ದನಗೌಡನನ್ನು ಗಟಾರಕ್ಕೆಸೆದಿದ್ದಾರೆ. ಇದೀಗ ಬಿಜೆಪಿಯತ್ತ ಮುಖ ಮಾಡಿರುವ ಈತ ಬಸವರಾಜ ಹೊರಟ್ಟಿಗೂ ವಿಚಾರ ಗೊತ್ತಾಗದ ರೀತಿಯಲ್ಲಿ ತನ್ನ ಪಕ್ಷದ ಸದಸ್ಯರನ್ನು ಬಿಜೆಪಿಗೆ ಬಿಕರಿ ಮಾಡಿ ಮುಗಿಸಿದ್ದಾನೆ.

ಸದ್ಯ ಬಿಜೆಪಿ ಇಷ್ಟೆಲ್ಲಾ ತಿಪ್ಪರಲಾಗ ಹಾಕಿ ಅಧಿಕಾರ ಹಿಡಿದಿರುವುದರ ಹಿಂದೆ ಹಲವಾರು ಹುನ್ನಾರಗಳಿವೆ. ಇದು ಕೇವಲ ಅಧಿಕಾರ ಹಿಡಿಯುವ ಪ್ರತಿಷ್ಠೆಯುಲ್ಲ, ಬದಲಾಗಿ ಹಣ ಹೊಡೆಯುವ ಹುನ್ನಾರ. ಪ್ರಸಕ್ತ ವರ್ಷದ ಬಜೆಟ್‌ನಲ್ಲಿಯೇ ಎಪಿಎಂಸಿಗೆ 8.5 ಕೋಟಿ ಮೀಸಲಿಡಲಾಗಿದೆ. ಇದನ್ನು ಲಪಟಾಯಿಸೋ ಉದ್ದೇಶದಿಂದಲೇ ಎಲ್ಲಾ ಪಕ್ಷಗಳ ನಡುವೆ ಪೈಪೋಟಿಯಿತ್ತು. ಅದರಲ್ಲಿ ಬಿಜೆಪಿ ಮೇಲುಗೈ ಸಾಧಿಸಿದೆ.


ಹಾಗಂತ ಹುಬ್ಬಳ್ಳಿ ಎಪಿಎಂಸಿ ಯಾವುದೇ ತೊಂದರೆ ತಾಪತ್ರಯಗಳಿಲ್ಲದೆ ಚೆಂದಗಿದೆ ಅಂದುಕೊಂಡರದು ಮೂರ್ಖತನ. ಇಲ್ಲಿ ಹೆಜ್ಜೆ ಹೆಜ್ಜೆಗೂ ಸಮಸ್ಯೆಗಳಿವೆ. 430 ಎಕರೆ ವಿಶಾಲ ಪ್ರದೇಶದಲ್ಲಿ ಹರಡಿಕೊಂಡಿರುವ ಈ ಎಪಿಎಂಸಿಯಲ್ಲಿ ರೈತರಿಗೆ ಸೂಕ್ತವಾದ ಸೌಲಭ್ಯಗಳಿಲ್ಲ. ಕ್ಯಾಂಟಿನ್‌ನಂಥ ಕನಿಷ್ಠ ಸೌಕರ್ಯಗಳೂ ಇಲ್ಲ. ಇದೆಲ್ಲವನ್ನು ಪರಿಹರಿಸಬೇಕಾದ ಬಿಜೆಪಿ ಪ್ರಥಮ ಎಪಿಎಂಸಿ ಸದಸ್ಯರ ಸಭೆಯ ಹೆಸರಲ್ಲಿ ಚಂದಾ ಎತ್ತುವ ದಂಧೆಗೆ ಇದೀಗಲೇ ಚಾಲನೆ ನೀಡಿದೆ.

ಈ ಹಿಂದೆ ಬಿಜೆಪಿಯ ರಮೇಶ ಭಾಪಣ ಎಪಿಎಂಸಿ ಸದಸ್ಯನಾಗಿದ್ದಾಗ ಹೋಲ್‌ಸೇಲ್ ವ್ಯಾಪಾರಿಗಳ ಸ್ಥಳಾಂತರದ ಬಗ್ಗೆ ಠರಾವು ಹೊರಟಿತ್ತು. ಆ ಸಂದರ್ಭದಲ್ಲಿ ಸುಮಾರು ಐನೂರು ಮಂದಿ ವ್ಯಾಪಾರಸ್ಥರಿಂದ ಹಣ ಎತ್ತಿದ ಭಾಪಣ ಸದಸ್ಯರಿಗೆಲ್ಲಾ ತಿನ್ನಿಸಿ ಈ ಠರಾವು ಕಾರ್ಯರೂಪಕ್ಕೆ ಬರದಂತೆ ತಡೆದಿದ್ದ. ಇದಲ್ಲದೇ ತಾನೂ ಒಂದಷ್ಟು ಕಮಾಯಿ ನಡೆಸಿದ್ದ. ತಮ್ಮವರೇ ಅಧಿಕಾರದಲ್ಲಿದ್ದರೆ ಇಂಥ ಕೆಲಸಗಳೆಲ್ಲ ಸಲೀಸು ಎಂದರಿತ ಭಾಪಣ ಪ್ರದೀಪ್ ಶೆಟ್ಟರನ ಮೂಲಕ ಬಿಜೆಪಿಯೇ ಅಧಿಕಾರ ಹಿಡಿಯುವಂತೆ ನೋಡಿಕೊಂಡಿರುವುದು ಸತ್ಯ.

ಈತ ಸದಸ್ಯನಾಗಿದ್ದ ಅವಧಿಯಲ್ಲಿ ವ್ಯಾಪಾರ ಮಳಿಗೆ ತೆರೆಯಲು ನಿವೇಶನ ಕೊಡುವ ಸಂಬಂಧ ಭಾರೀ ಲಫಡಾ ನಡೆಸಿದ್ದ. ಎಪಿಎಂಸಿ ಅಂಗಳದಲ್ಲಿ ನಿವೇಶನ ಪಡೆದುಕೊಳ್ಳುವವರು ಅದರ ಸದಸ್ಯರಾಗಿರಬೇಕು, ಸೆಸ್ ರೂಪದಲ್ಲಿ ಹಣ ಕಟ್ಟಬೇಕು ಅಂತೆಲ್ಲ ನಿಯಮಗಳಿವೆ. ಆದರೆ ಸದಸ್ಯರಲ್ಲದವರಿಗೂ ದೊಡ್ಡದೊಡ್ಡ ನಿವೇಶನ ಕೊಡಿಸುವಲ್ಲಿ ಭಾಪಣ ಪ್ರಮುಖ ಪಾತ್ರ ವಹಿಸಿದ್ದ.



ಸಿದ್ದನಗೌಡರ್



ರಮೇಶ್ ಬಾಫ್ನಾ

ಒಂದೇ ಸಭೆಯಲ್ಲಿ ಸದಸ್ಯತ್ವ ಹಾಗೂ ನಿವೇಶನ [illegible] ಮಾಡಿದ ಪವಾಡಗಳು ಈತನ ಅನುಭವಕ್ಕೆ [illegible] ಇವನ ಸಂತಾನಿಗರ ಕೈಗೆ ಮತ್ತೊಮ್ಮೆ [illegible] ಸಿಕ್ಕಿವೆ. ಅಧ್ವಾನಗಳು, ಸುಂಗಾಟಗಳು [illegible] ಕಡೆ ವಿಪರೀತವಾಗಿ [illegible]

• ಹುಬ್ಬಳ್ಳಿ ಯುವ [illegible]

# ಕಾಯುವುದೆಂದರೇನೆಂದು ಅರ್ಥವಾಗುವ ಗಳಿಗೆ



ಈ ಕಾಯುವಿಕೆಯ ಬಗ್ಗೆ ನಮಗೆಲ್ಲಾ ಗೊತ್ತಿದೆ. ಬಾರದ ಬಸ್ಸಿಗಾಗಿ ಕಾಯುವುದು, ಪಾರ್ಕಿನಲ್ಲಿ ಪ್ರೇಮಿಗಾಗಿ ಕಾಯುವುದು, ಅಷ್ಟೇನೂ ಖುಷಿ ಕೊಡದ ದಿನಪತ್ರಿಕೆಗಾಗಿ ಕಾಯುವುದು, ಕಳೆದು ಹೋದ ಕರೆಂಟಿಗಾಗಿ ದಿನವಿಡೀ ಕಾಯುವುದು....

ಈ ಎಲಿಮೆಂಟರಿ ಲೆವೆಲ್‌ನ ಕಾಯುವಿಕೆಯ ಬಗ್ಗೆ ಚರ್ಚಿಸುವುದಕ್ಕೆ ಹೆಚ್ಚೇನಿಲ್ಲ. ಆದರೆ ಕಳೆದ ವಾರ 'ಚಾರ್ವಾಕ' ಪುಸ್ತಕ ಬಿಡುಗಡೆಯ ಸಮಾರಂಭದಲ್ಲಿ ಈ ಕಾಯುವುದರೆಂದರೇನೆಂದು ಶಿವಸುಂದರ್ ಹೇಳಿಕೊಂಡರು.

ಒಂದು ಪದ್ಯದ ಮೂಲಕ.

ಇದು ಬೇರೆ ರೀತಿಯ ಕಾಯುವಿಕೆ.

ಕಾಯುತ್ತಿದ್ದೇನೆ ನಿನಗೆ, ಓ ನನ್ನ
ಪ್ರೇಮವೇ, ಬರಗೆಟ್ಟ ರೈತ
ಮಳೆಹನಿಗೆ ಕಾದಂತೆ,
ಸಂತೆಯಲ್ಲಿ ಕಳೆದುಹೋದ
ಮಗು ಅಮ್ಮನಿಗೆ ಹಂಬಲಿಸುವಂತೆ,
ವಿನಾಕಾರಣ ಬಂಧಿತನಾದವನು
ನ್ಯಾಯಾಲಯದ ಆದೇಶ
ನಿರೀಕ್ಷಿಸುವಂತೆ,
ಗ್ರಾಮಕೂಪವನೊಲ್ಲದ
ವಿದ್ಯಾರ್ಥಿ ಫಲಿತಾಂಶಕ್ಕೆ ಎದುರು ನೋಡುವಂತೆ
ಈಗ ನನಗೆ ಕಾಯುವುದೆಂದರೇನೆಂದು
ಅರ್ಥವಾಗುತ್ತಿದೆ.
ಬಾ ಪ್ರೇಮವೇ
ಹಗೆಯ ಜಗವ ಬದಲಿಸುವ ಕ್ರಾಂತಿಯಾಗಿ
ಬಾ,
ಹೊಸ ಜಗದ ಖಾತರಿ ಪ್ರೀತಿಯಾಗಿ ಬಾ
ಕೆಡುಕ ಸುಡುವ ಬೆಂಕಿಯಾಗಿ ಬಾ
ಅದರೊಳಗಿನ ತಿಳಿಬೆಳಕಾಗಿ ಬಾ

.... ಹೀಗೆ ಸಾಗುವ ಪದ್ಯ ಅನೇಕರಿಗೆ ವಿಭಿನ್ನ ಅರ್ಥದಲ್ಲಿ ಧ್ವನಿಸಿರಬಹುದು. ಆದರೆ




ಕಾಯುವುದೆಂಬುದು ಹೋರಾಟ ನಿರತರ ಬದುಕಿನಲ್ಲಿ ಕೆಂಡದಂತೆ ಸುಡುತ್ತಿರುತ್ತದೆ. ಎಲ್ಲಾ ಅನ್ಯಾಯಗಳ ವಿರುದ್ಧ ಜನ ದಂಗೆ ಏಳಲೆಂದು ಕಾಯುವುದು, ಒಂದು ಪ್ರತಿಭಟನಾ ಸಭೆ ಅರೇಂಜ್ ಮಾಡಿ ಜನ ಬರುತ್ತಾರೋ ಇಲ್ಲವೋ ಎಂದು ಕಾಯುವುದು, ನಂತರ ಅದು ಪತ್ರಿಕೆ ಟಿವಿಗಳಲ್ಲಿ ಕೊಂಚವಾದರೂ ಪ್ರಕಟವಾಗುತ್ತದೋ ಇಲ್ಲವೋ ಎಂದು ಮತ್ತೂ ಕಾಯುವುದು....

ಈ ಕಾಯುವಿಕೆಗೆ ಕೊನೆ ಇಲ್ಲ ಬಿಡಿ. ಜೊತೆಗೆ ಕಾಯುವಿಕೆ ಬಿಟ್ಟರೆ ತಕ್ಷಣದಲ್ಲಿ ಅನ್ಯಮಾರ್ಗವೂ ಇದ್ದಂತಿಲ್ಲ. ಹೀಗೆ ಕಾಯುವ ಸಹನೆ ಇರದವರು ವ್ಯಗ್ರತೆಯ ದಾರಿಯಲ್ಲಿ ಸಾಗಿ ದೇಹನಷ್ಟ ಮಾಡಿಕೊಂಡ ಉದಾಹರಣೆಗಳೇ ನಮ್ಮೆದುರಿಗಿದೆ. ಈ ಸಮಾಜವನ್ನು ಬದಲಿಸಿಬಿಡಬೇಕೆಂಬ ಅರ್ಜೆನ್ಸಿ ನಮಗೆಷ್ಟೋ ಇರಬಹುದು. ಆದರೆ ಜೊತೆಗಷ್ಟೇ ಸಂಖ್ಯೆಯ ಬಾಧಿತ ಜನ ಬರಲು ತಡಮಾಡಿದರೆ?

ಕಾಯಬೇಕಾಗುತ್ತದೆ!

ಈ ಕಾಯುವಿಕೆಯೇ ರಾಜಕೀಯ ತಿಳಿವಳಿಕೆಯ ಮಾಗುವಿಕೆಯಾಗಬೇಕು: ಆವೇಶ ಸಹನೆಯಾಗದ ಹೊರತು, ಹಾಗೆ ಪಡೆದುಕೊಂಡ ಸಹನೆ ನಿರಂತರ ಜ್ವಲಿಸುವ ಆಕ್ರೋಶವಾಗದ ಹೊರತು ಇಲ್ಲಿ ನಾವು ಆಶಿಸುತ್ತಿರುವ ಬದಲಾವಣೆಯ ಚಕ್ರ ತಿರುಗಲು ಆರಂಭಿಸುವುದೇ ಇಲ್ಲ.

# ಯಾಕೆ ಇವರು ಯಾರ ಕಣ್ಣಿಗೂ ಬೀಳುತ್ತಿಲ್ಲ?



ಈ ಲೇಖನವನ್ನು ಬರೆದಿರುವ ಸಾಮಾಜಿಕ ಕಾರ್ಯಕರ್ತನಿಗೆ ಕಳೆದ ಎರಡು ವರ್ಷಗಳಲ್ಲೇ ಇಂತಹುದ್ದೇ ಮೂರು ನೇರ ಅನುಭವಗಳಾಗಿವೆ. ಪ್ರತೀ ಕಡೆ ಕೂಲಿ ಹೆಚ್ಚು ಕೇಳಿದ್ದಕ್ಕೆ, ಸರ್ಕಾರವೇ ನಿಗದಿಪಡಿಸಿರುವ ಕೂಲಿ ದರ ಜಾರಿ ಮಾಡಿ ಎಂದು ಆಗ್ರಹ ಮಾಡಿದ್ದಕ್ಕೆ ಕೆಲಸವೇ ಹೋಗಿದೆ. ಎರಡು ಕಡೆ ಕೇಸುಗಳಾಗಿವೆ. ಇದು ಕೇವಲ ಈ ಮೂರು ಬಿಡಿ ಘಟನೆಗಳ ಕಥೆ ಅಲ್ಲ. ಇಂದು ಗುತ್ತಿಗೆ ಕಾರ್ಮಿಕರು ಎಂದು ದುಡಿಸಲ್ಪಡುತ್ತಿರುವ ಈ ನಾಡಿನ ಅದೆಷ್ಟೋ ಲಕ್ಷ ಕಾರ್ಮಿಕರದ್ದು ಇದೇ ಪರಿಸ್ಥಿತಿಯಾಗಿದೆ.

ಅದೊಂದು ಸರ್ಕಾರಿ ಮೆಡಿಕಲ್ ಕಾಲೇಜು. 6ನೇ ವೇತನ ಆಯೋಗದ ಪ್ರಕಾರ ಅಲ್ಲಿನ ಪ್ರೊಫೆಸರ್‌ಗಳಿಗೆ **90,000** ರೂ. ಸಂಬಳ. ಕೆಲವು ಇನ್‌ಕ್ರಿಮೆಂಟ್‌ಗಳು ಸೇರಿ **1,20,000**ದವರೆಗೆ ವೇತನ ಪಡೆಯುತ್ತಿರುವ ಹಲವು ಪ್ರೊಫೆಸರ್‌ಗಳು ಅಲ್ಲಿದ್ದಾರೆ. ಇತ್ತೀಚೆಗೆ ತಾನೇ ಈ ಸಂಬಳ ಸಾಲದು, ಎಐಸಿಟಿಇ ವೇತನ ಶ್ರೇಣಿಯನ್ನು ತಮಗೆ ಕೊಡಬೇಕೆಂದು ಅಲ್ಲಿನ ಪ್ರೊಫೆಸರ್‌ಗಳ ನೇತೃತ್ವದಲ್ಲಿ ಅಸೋಸಿಯೇಟ್ ಪ್ರೊಫೆಸರ್‌ಗಳು ಮತ್ತು ಅಸಿಸ್ಟೆಂಟ್ ಪ್ರೊಫೆಸರ್‌ಗಳ ಸಭೆಯೊಂದು ನಡೆಯಿತು. ಆ ಕಾಲೇಜಿನಲ್ಲಿ ಕಸ ಗುಡಿಸುವುದು, ಸ್ವಚ್ಛಗೊಳಿಸುವುದು, ತೋಟಕ್ಕೆ ನೀರೆರೆಯುವುದು, ತೋಟ ನಿರ್ವಹಣೆ ಮಾಡುವುದು ಇತ್ಯಾದಿ ಕೆಲಸಗಳಿಗೆಂದು ಸುಮಾರು 80 ಜನ ಕಾರ್ಮಿಕರಿದ್ದಾರೆ. ಕಾಲೇಜು ಅವರನ್ನು ಗುತ್ತಿಗೆದಾರನೊಬ್ಬನ ಮೂಲಕ ನೇಮಿಸಿಕೊಂಡಿದೆ. ಎಲ್ಲಾ ಲೆಕ್ಕಕ್ಕೂ ಅವರು ಆ ಗುತ್ತಿಗೆದಾರನ ನೌಕರರು ಅಷ್ಟೇ. ಅವರಿಗೆ ಸರ್ಕಾರದಿಂದ ನಿಗದಿಯಾಗಿದ್ದ ಕನಿಷ್ಠ ವೇತನ **3,600** ರೂ. ಆದರೆ ಅವರಿಗೆ ಗುತ್ತಿಗೆದಾರ ನೀಡುತ್ತಿದ್ದ ವೇತನ **1,800** ರೂ. ಆ ಆಸ್ಪತ್ರೆಯಲ್ಲಿ ರೋಗಿಗಳನ್ನು ಒಂದು ವಾರ್ಡ್‌ನಿಂದ ಇನ್ನೊಂದು ವಾರ್ಡ್‌ಗೆ, ಆಪರೇಷನ್ ಥಿಯೇಟರ್‌ನಿಂದ ಕರೆದುಕೊಂಡು ಹೋದಾಗ ಅವರಿಂದ 5 ರೂ., 10 ರೂ. ಕೇಳುತ್ತಾರೆ. ಕೆಲವು ಕಾರ್ಮಿಕರು ಕೊಟ್ಟರೆ ಮಾತ್ರ ತೆಗೆದುಕೊಳ್ಳುತ್ತಾರೆ. ಕೆಲವರು ದಬಾಯಿಸಿ ಕಿತ್ತುಕೊಳ್ಳುತ್ತಾರೆ. ಇವರ ಬಗ್ಗೆ ರೋಗಿಗಳಿಗೆ ತುಂಬಾ ಕೋಪ. 'ಡಾಕ್ಟರ್‌ಗೆ ಆಪರೇಷನ್‌ಗೆ **5,000** ರೂ. ಕೊಟ್ಟಿದ್ದೇವೆ. ಈ ಆಸ್ಪತ್ರೆಯಲ್ಲಿ ಗಾಡಿ ತಳ್ಳುವವರಿಗೂ ಕೈಗೆ 5, 10 ಕೊಡಬೇಕು' ಎಂಬುದು ಅವರ ಕೋಪಕ್ಕೆ ಕಾರಣ.



ಈ ಕಾರ್ಮಿಕರು ಈಗೊಂದು ವರ್ಷದ ಹಿಂದೆ ತಮ್ಮದೊಂದು ಯೂನಿಯನ್ ಕಟ್ಟಿಕೊಂಡರು. ಪೌರ ಕಾರ್ಮಿಕರ ಸಂಘಟನೆ ಮಾಡಿ ಅನುಭವವಿದ್ದವರೊಬ್ಬರು ಅವರಿಗೆ ನೇತೃತ್ವ ಕೊಟ್ಟರು. ಅವರು ಯೂನಿಯನ್, ರಚನೆಯಾದ ಮೇಲೆ, ಮೆಡಿಕಲ್ ಕಾಲೇಜಿನ ನಿರ್ದೇಶಕರ ಹತ್ತಿರ ಹೋಗಿ ಮಾತನಾಡಿ, ಕಾನೂನು ಪ್ರಕಾರ ಕನಿಷ್ಠ ವೇತನ ಕೊಡಬೇಕೆಂದು ಕೇಳಿದರು. ಆದರೆ ಗುತ್ತಿಗೆ ಪಡೆಯುವಾಗ ಸ್ಪರ್ಧೆ ಇದ್ದುದರಿಂದ ಸದರಿ ಗುತ್ತಿಗೆದಾರ ಬಹಳ ಕಡಿಮೆ ಹಣಕ್ಕೆ ಟೆಂಡರ್ ತೆಗೆದುಕೊಂಡಿದ್ದ. ಈಗ ಕಾರ್ಮಿಕರಿಗೆ ಕನಿಷ್ಠ ವೇತನ ನೀಡಿದರೆ, ಆತನಿಗೆ ನಷ್ಟವಾಗುತ್ತಿರಲಿಲ್ಲವಾದರೂ, ಲಾಭ ಬರುತ್ತಿರಲಿಲ್ಲ. ಏಕೆಂದರೆ ಪ್ರತೀ ತಿಂಗಳು ಬಿಲ್ ಮಂಜೂರಾತಿ ಆಗಬೇಕೆಂದರೆ, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಿಂದ ಹಿಡಿದು ಬೆಂಗಳೂರಿನ ಆಫೀಸಿನವರೆಗೆ ಕೊಡಬೇಕಿದ್ದ ಲಂಚವೆಲ್ಲಾ ಕೊಟ್ಟ ಮೇಲೆ ಉಳಿಯುತ್ತಿದ್ದದ್ದು ಬಹಳ ಕಡಿಮೆ. ಈ 'ಕಷ್ಟ'ವನ್ನು ಕಾರ್ಮಿಕ ಮುಖಂಡರು ಅರ್ಥಮಾಡಿಕೊಂಡು ಕನಿಷ್ಠ ವೇತನವೂ ಬೇಡ, **3,200** ರೂ. ಕೊಡಿ ಸಾಕು ಎಂದರು.

ಸಾಮಾನ್ಯವಾಗಿ ಲೇಬರ್ ಕಾಂಟ್ರಾಕ್ಟ್ ಮಾಡಿಸುವವರು ದೊಡ್ಡ ಮಟ್ಟದ ಲಾಭದ ನಿರೀಕ್ಷೆಯ ಜೊತೆಗೇ ಗುತ್ತಿಗೆ ಹಿಡಿಯುತ್ತಾರೆ. ಹಾಗಾಗಿ ಗುತ್ತಿಗೆದಾರ **3,200**ಅನ್ನೂ ಕೊಡಲಿಲ್ಲ, ಮುಂದಿನ ತಿಂಗಳು ಸ್ವಲ್ಪ ಬಿಸಿಬಿಸಿ ಮಾತುಕತೆಯಾಯಿತು. ಮೆಡಿಕಲ್ ಕಾಲೇಜಿನ ನಿರ್ದೇಶಕರು 'ಕನಿಷ್ಠ ವೇತನ ಕೊಡಿಸುವುದು ನನ್ನ ಜವಾಬ್ದಾರಿ' ಎಂದರು. ಜಾರಿಯಾಗಲಿಲ್ಲ, ಅದರ ಮುಂದಿನ ತಿಂಗಳು ಕಾರ್ಮಿಕ ಮುಖಂಡರು ಸಂಬಳ ಬಟವಾಡೆಯ ಪ್ರತಿಗಳನ್ನು ಮಾಹಿತಿ ಹಕ್ಕಿನಡಿ ಕೇಳಿದರು. ಕಾರ್ಮಿಕರು 15 ದಿನ ಕೆಲಸಕ್ಕೇ ಬಂದಿಲ್ಲ ಎಂದು ಗುತ್ತಿಗೆದಾರ ತೋರಿಸಿ, ಅದರ ಪ್ರಕಾರ ಅವರಿಗೆ ಕನಿಷ್ಠ ವೇತನದ ಪ್ರಮಾಣದಲ್ಲಿ ಪೂರ್ಣ ಸಂಬಳವನ್ನೇ ಕೊಟ್ಟಿದ್ದೇನೆ ಎಂದ. ಆದರೆ ಮುಂದಿನ ತಿಂಗಳು ಅಟೆಂಡೆನ್ಸ್ ಪುಸ್ತಕದ ಮೋಸ ಆಗದಂತೆ ಕಾರ್ಮಿಕರು ನೋಡಿಕೊಂಡರು. ಈ ಬಾರಿ ಚೆಕ್ ಮುಖಾಂತರ ಪೂರ್ಣ ಸಂಬಳ ಕೊಡಬೇಕೆಂದು ಗುತ್ತಿಗೆದಾರನಿಗೆ ತಾಕೀತು ಮಾಡಲಾಗಿತ್ತು, ಆತ ಪೂರಾ **3,600** ರೂ.ಗೆ ಚೆಕ್ ಕೊಟ್ಟು ಕಾರ್ಮಿಕರಿಗೆ ಹೇಳಿದ. 'ಹಣವನ್ನು ಬ್ಯಾಂಕ್‌ನಿಂದ ಡ್ರಾ ಮಾಡಿಸಿಕೊಂಡು **1,800** ರೂ.ಗಳನ್ನು ವಾಪಸ್ ತಂದುಕೊಟ್ಟರೆ ಸರಿ, ಇಲ್ಲವಾದರೆ ಕೆಲಸಕ್ಕೆ ಬರಬೇಡಿ'. ಕಾರ್ಮಿಕರು ಮರುಮಾತಿಲ್ಲದೇ ಒಪ್ಪಬೇಕಾಯಿತು.

ಇದಕ್ಕೂ ಏನಾದರೂ ದಾರಿ ಹುಡುಕಬೇಕು ಎಂದು ಕಾರ್ಮಿಕರು ಯೋಚಿಸುವಷ್ಟರಲ್ಲಿ, ಆತನ ಟೆಂಡರ್ ಬದಲಾಯಿತು. ಹೊಸ ಗುತ್ತಿಗೆದಾರ, ಹಳೇ ಗುತ್ತಿಗೆದಾರನ ಸಂಬಂಧಿಯೇ. ಇದೆಲ್ಲಾ ಗೊತ್ತಿದ್ದೇ, ಆತ ಟೆಂಡರ್ ಹಿಡಿದಿದ್ದ. ಹೊಸ ಟೆಂಡರ್ ಆರಂಭವಾದ ಮೊದಲ ದಿನವೇ, ಹಳೆಯ 80 ಜನ ಕಾರ್ಮಿಕರನ್ನು ಆತ ಕೆಲಸದಿಂದ ತೆಗೆದುಹಾಕಿದ. ಕೇಳಿದರೆ, ಈ ಕಾರ್ಮಿಕರು ತನ್ನನ್ನು ಬೈದರು ಎಂದ. ಇದನ್ನು ಕಾರ್ಮಿಕರು ವಿರೋಧಿಸಿದರು; ಕಾರ್ಮಿಕ ಇಲಾಖೆಗೆ ದೂರು ಕೊಟ್ಟರು, ಜಿಲ್ಲಾಧಿಕಾರಿಗೆ ದೂರು ಕೊಟ್ಟರು. ಏನೂ ಆಗಲಿಲ್ಲ, ಕೊನೆಗೆ ಆಮರಣಾಂತ ಉಪವಾಸ ಕೂತರು. ಜಿಲ್ಲಾಧಿಕಾರಿಗಳು ಸಭೆ ಕರೆದು ದಿನಕ್ಕೆ 10 ಜನರಂತೆ 8 ದಿನದಲ್ಲಿ ಎಲ್ಲಾ ಕಾರ್ಮಿಕರನ್ನು ಕೆಲಸಕ್ಕೆ ವಾಪಸ್ ತೆಗೆದುಕೊಳ್ಳಬೇಕೆಂದು ತೀರ್ಮಾನವಾಯಿತು. ಆದರೆ ಅದೂ ಜಾರಿಯಾಗಲಿಲ್ಲ, ಕಾರ್ಮಿಕ ಇಲಾಖೆಯು ಮೂರು ಸಾರಿ ಯೂನಿಯನ್ ಮತ್ತು ಗುತ್ತಿಗೆದಾರನ ನಡುವೆ ಸಂಧಾನ ಸಭೆ ನಡೆಸಿತು. ಕಾರ್ಮಿಕ ಇಲಾಖೆಯು ಗುತ್ತಿಗೆದಾರನಿಗೆ ತಾಕೀತು ಮಾಡಿ, ಎಲ್ಲರನ್ನೂ ಕೆಲಸಕ್ಕೆ ಮತ್ತೆ ವಾಪಸ್ ತೆಗೆದುಕೊಳ್ಳುವಂತೆ ಆಗುತ್ತದೆಂದು ಕಾರ್ಮಿಕರು ನಂಬಿಕೊಂಡಿದ್ದರು. ಕಾರ್ಮಿಕ ಇಲಾಖೆಯ ವ್ಯಾಪ್ತಿಯಲ್ಲಿ ಸಂಧಾನ ಸಭೆಯ ಆಚೆಗೆ ಮತ್ತೇನೂ ಮಾಡಲಾಗುವುದಿಲ್ಲ ಎಂದು ಅವರು ಸ್ಪಷ್ಟೀಕರಣ ಕೊಟ್ಟರು.

ಕಾರ್ಮಿಕರು ಮತ್ತೊಮ್ಮೆ ಉಪವಾಸ ಕೂತರು. ಈ ಬಾರಿ ಜಿಲ್ಲಾಧಿಕಾರಿಯ ಕಚೇರಿಯ ಮುಂದೆ. ನಾಲ್ಕು ದಿನಗಳಾದರೂ ಡಿಸಿ ಬಂದು ಮಾತಾಡಿಸಲಿಲ್ಲ, ಆಗ ಕಾರ್ಮಿಕರು ಮತ್ತು ಅವರ ಸಂಘಟನೆಯ ಮುಖಂಡರು ಡಿಸಿ ಮನೆಗೆ ಮುತ್ತಿಗೆ ಹಾಕಿದರು. ಪೊಲೀಸರು ಎಲ್ಲರನ್ನೂ ಜೈಲಿಗೆ ಕಳಿಸಿದರು. ಸರ್ಕಾರವೇ ನಿಗದಿಪಡಿಸಿದ ಕನಿಷ್ಠ ವೇತನ ಕೇಳಿದ್ದಕ್ಕೆ (ಅದರಲ್ಲೂ **400** ರೂ. ಡಿಸ್ಕೌಂಟ್‌ಅನ್ನು ಕಾರ್ಮಿಕರೇ ನೀಡಿದ್ದರು) ಕೆಲಸವೂ ಹೋಯಿತು. ಅದಕ್ಕೆ ಪ್ರತಿಭಟನೆ ಮಾಡಿದ್ದಕ್ಕೆ ಜೈಲನ್ನು ನೋಡಬೇಕಾಯಿತು.

ಈ ಲೇಖನವನ್ನು ಬರೆದಿರುವ ಸಾಮಾಜಿಕ ಕಾರ್ಯಕರ್ತನಿಗೆ ಕಳೆದ ಎರಡು ವರ್ಷಗಳಲ್ಲೇ ಇಂತಹುದ್ದೇ ಮೂರು ನೇರ ಅನುಭವಗಳಾಗಿವೆ. ಪ್ರತೀ ಕಡೆ ಕೂಲಿ ಹೆಚ್ಚು ಕೇಳಿದ್ದಕ್ಕೆ, ಸರ್ಕಾರವೇ ನಿಗದಿಪಡಿಸಿರುವ ಕೂಲಿ ದರ ಜಾರಿ ಮಾಡಿ ಎಂದು ಆಗ್ರಹ ಮಾಡಿದ್ದಕ್ಕೆ ಕೆಲಸವೇ ಹೋಗಿದೆ. ಎರಡು ಕಡೆ ಕೇಸುಗಳಾಗಿವೆ. ಇದು ಕೇವಲ ಈ ಮೂರು ಬಿಡಿ ಘಟನೆಗಳ ಕಥೆ ಅಲ್ಲ, ಇಂದು ಗುತ್ತಿಗೆ ಕಾರ್ಮಿಕರು ಎಂದು ದುಡಿಸಲ್ಪಡುತ್ತಿರುವ ಈ ನಾಡಿನ ಅದೆಷ್ಟೋ ಲಕ್ಷ ಕಾರ್ಮಿಕರದ್ದು ಇದೇ ಪರಿಸ್ಥಿತಿಯಾಗಿದೆ. ಗಾರ್ಮೆಂಟ್ ಫ್ಯಾಕ್ಟರಿಗಳಲ್ಲಿ ದುಡಿಯುತ್ತಿರುವ ಹತ್ತಾರು ಲಕ್ಷ ಮಹಿಳಾ ಕಾರ್ಮಿಕರು, ನಗರಪಾಲಿಕೆ, ನಗರಸಭೆ, ಪುರಸಭೆ, ಪಂಚಾಯ್ತಿಗಳಂತಹ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಸುಮಾರು

ಇದು ಸರ್ವಕಾಲಿಕ ಸತ್ಯವೇನಲ್ಲ.

ಕರ್ನಾಟಕದ ಇವತ್ತಿನ ಪರಿಸ್ಥಿತಿ ಇದು ಅಷ್ಟೆ.

ಖಚಿತ ರಾಜಕೀಯ ನಿಲುವುಗಳು, Consistency ಹಾಗೂ ನೈತಿಕತೆಗಳು ಇಲ್ಲಿ ಮುಖ್ಯ. ಈ ಹೋರಾಟಗಾರರ ಜಗತ್ತಿನಲ್ಲಿ ...ರಹೇವಾರಿ ಜನರಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಇತ್ತೀಚೆಗೆ ನಡೆದ ಎರಡು ...ಟನೆಗಳ ಬಗ್ಗೆ ಹೇಳಬೇಕು.

ಏಪ್ರಿಲ್ ಕೊನೆಯ ವೇಳೆಗೆ ಬೆಂಗಳೂರಿನಲ್ಲಿ ...ಂದು ದಲಿತ ಸಂಘಟನೆಯು ಅಂಬೇಡ್ಕರ್ ...ಯಂತಿ ಆಚರಿಸಿತು. ಅವತ್ತು ಅತಿಥಿಯಾಗಿ ...ಂದಿದ್ದ ಚಿ.ನಾ.ರಾಮು ಎಂಬಾತ ಯಾವುದೇ ...ಕೋಚ ಇಲ್ಲದೇ ಅಲ್ಲಿದ್ದ ದಲಿತ ವಿದ್ಯಾರ್ಥಿಗಳಿಗೆ "...ೀವು ನನ್ ಹತ್ರ ಬನ್ನಿ, ಬರೀ ಎಸ್‌ಸಿಎಸ್‌ಟಿ ...ಲಾಖೇಲಿ ಮಾತ್ರ ದುಡ್ಡು ಇದೆ ...ಂದುಕೊಳ್ಳಬೇಡಿ, ದುಡ್ಡು ಎಲ್ಲೆಲ್ಲಿದೆ, ಹೇಗೆ ...ಡ್ಡು ಮಾಡಬೇಕಂತ ನಾನು ಹೇಳಿಕೊಡ್ತೀನಿ" ...ಂದನಂತೆ. ಆರೆಂಟು ಚಿನ್ನದ ಉಂಗುರ, ಲಕಲಕ ...ೊಳೆಯುವ ಇನೋವಾ ಕಾರು, ಅರ್ಧ ಡಜನ್ ...ೀಲಾಗಳನ್ನು ಜೊತೆಗಿಟ್ಟುಕೊಂಡು ಓಡ್ಯಾಡುವ ಈ ...ಮು ಬೆಂಗಳೂರಿನ ದಲಿತ ಹಾಗೂ ಕನ್ನಡ ...ೋರಾಟಗಾರರಲ್ಲೊಬ್ಬ.

ಹೋರಾಟ ಎನ್ನುವ ಪದ ಇವರ ಪಾಲಿನ ...ಂಧೆ.

ಇಂತವರಿಗೆ ವ್ಯತಿರಿಕ್ತವಾಗಿ ಬೇರೆ ತರದ ...ೋರಾಟಗಾರರೂ ಇದ್ದಾರೆ.

ಮೊನ್ನೆ ಏನಾಯಿತೆಂದರೆ ಹಮಾಲಿ ಕೆಲಸ ಮಾಡುವವರು, ಮೂಟೆ ಹೊರುವ ಕಾರ್ಮಿಕರು ಇತ್ತೀಚೆಗೆ ಸಂಘಟನೆಯೊಂದನ್ನು ಕಟ್ಟಿಕೊಳ್ಳುತ್ತಿದ್ದಾರೆ. ಈ ಸಂಘಟನೆಯ ರಾಜ್ಯಮಟ್ಟದ ಸಮಾವೇಶವೊಂದು ಮೇ 27ರಂದು ನಡೆಯಲಿದೆ. ಈ ಕಾರ್ಮಿಕರೊಂದಿಗಿರುವ ಗೆಳೆಯರು ಫೋನ್ ಮಾಡಿ "ಕೊಂಚ ಹಣದ ನೆರವು ಅಥವಾ ಊಟ-ನೀರಿನ ವ್ಯವಸ್ಥೆ ಮಾಡಲು ಆಗುತ್ತದೆಯಾ?" ಎಂದು ಕೇಳಿದರು.

ಆಫೀಸ್‌ನಲ್ಲಿ ಚರ್ಚಿಸಿ ಕೊನೆಗೆ ನಮ್ಮೊಂದಿಗೆ ವಿಶ್ವಾಸದಿಂದಿರುವ ಶಾಸಕರೊಬ್ಬರಿಂದ ಅವರಿಗೆ ನೆರವು ಕೊಡಿಸಬಹುದು ಅಂದುಕೊಂಡೆವು. ನಾವು ಬಲ್ಲಂತೆ ಆತ ಒಳ್ಳೆಯ ಮನುಷ್ಯ. ಶ್ರೀಮಂತನೂ ಹೌದು. ಮೂಟೆ ಕಾರ್ಮಿಕರ ಸಮಾವೇಶದ ವಿಚಾರ ಶಾಸಕರಿಗೆ ಹೇಳಿದ ತಕ್ಷಣ ಅಷ್ಟೂ ಜನರಿಗೆ ಊಟದ ವ್ಯವಸ್ಥೆ ಮಾಡುವುದಾಗಿ ಮಾತುಕೊಟ್ಟರು. ಈ ವಿಚಾರ ಗೆಳೆಯರಿಗೆ ತಿಳಿಸಿದೆವು. ಆದರೆ ಅವರು 'ಬೇಡ' ಅಂದುಬಿಡಬೇಕೆ?

ಆ ಶಾಸಕ ಪ್ರಚಾರಕ್ಕಾಗಿ ಈ ನೆರವು ನೀಡಲು ಒಪ್ಪಿದ್ದಲ್ಲ. ಆದರೂ ತಮ್ಮ ಹೋರಾಟಗಳಿಗೆ ಸಿಗಬಹುದಾದ ಹಣ ಯಾವ ನೆಲೆಯಿಂದ ಹೊರಟು ಬರುತ್ತದೆಂಬುದೂ ಆ ಗೆಳೆಯರಿಗೆ ಮುಖ್ಯ ಅನಿಸಿತ್ತು. ನಾವು ಪೆಚ್ಚಾದೆವಾದರೂ ಈ ಮೂಟೆ ಕಾರ್ಮಿಕರ ಸಂಘಟನೆಯ ಬಗ್ಗೆ ಹೆಮ್ಮೆ ಅನಿಸಿತು.

ನಾವೆಲ್ಲಾ ಕಾಯಬೇಕಿರುವುದು ಇಂತವರಿಗೆ ತಾನೇ? ●

---

...ರ್ಮಿಕರು, ವಿವಿಧ ರೀತಿಯ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸ ಮಾಡುತ್ತಿರುವ ಸುಮಾರು ...ೂರರಿಂದ ನಾಲ್ಕು ಲಕ್ಷ ಜನ, ಸರ್ಕಾರೀ ಇಲಾಖೆಗಳು ...ತ್ತು ಇತರೆಡೆ ಗುತ್ತಿಗೆ ಆಧಾರದ ಮೇಲೆ ಕೆಲಸ ...ಾಡುತ್ತಿರುವ ಇನ್ನೂ 25 ಲಕ್ಷ ಜನರು, ಇವರೆಲ್ಲರ ...ಾಡು ಇದೇ ಆಗಿದೆ.

ಇನ್ನು ಒಬ್ಬ ಮಾಲೀಕ ಅಂತ ಇಲ್ಲದ, ವಿವಿಧ ರೀತಿಯ ...ಸಂಘಟಿತ ಕಾರ್ಮಿಕರು - ಲೋಡಿಂಗ್ ಕಾರ್ಮಿಕರು, ...ಟ್ಟಡ ಕಾರ್ಮಿಕರು, ಕಲ್ಲು ಒಡೆಯುವವರು, ಮನೆಗೆಲಸದ ...ಹಿಳೆಯರು, ಕೃಷಿ ಕಾರ್ಮಿಕರು, ಗ್ಯಾರೇಜ್‌ಗಳಲ್ಲಿ, ...ೋಟೆಲ್‌ಗಳಲ್ಲಿ-ಹೀಗೆ ವಿವಿಧ ರೀತಿಯ ಕೆಲಸಗಳಲ್ಲಿ ...ುಡಿಯುತ್ತಿರುವವರ ಸಂಖ್ಯೆ ಎಲ್ಲಾ ಸೇರಿದರೆ ಕರ್ನಾಟಕ ...ಂದರಲ್ಲೇ ಹತ್ತಿರ ಹತ್ತಿರ ಕೋಟಿಗೂ ಹೆಚ್ಚಾಗುತ್ತಾರೆ. ...ವರಾರಿಗೂ ಕಾರ್ಮಿಕ ಕಾನೂನುಗಳು ಪ್ರಯೋಜನಕ್ಕೆ ...ರುತ್ತಿಲ್ಲ. ಕಾರ್ಮಿಕ ಕಾನೂನು ಅನ್ವಯಿಸುವುದೇ ಇವರಲ್ಲಿ ...ೇ. 15 ಜನಕ್ಕೆ. ಉಳಿದವರಿಗೆ ಕಾನೂನನ್ನು ಹೇಗೆ ...ನ್ವಯಿಸಬಹುದು ಅಂತ ತಲೆ ಕೆಡಿಸಿಕೊಳ್ಳುತ್ತಿರುವವರು



...ಾರೂ ಇಲ್ಲ. ಇನ್ನು ಉಳಿದ ಶೇ.85 ಜನಕ್ಕೆ ಅನ್ವಯ ...ಗುವುದೂ ಇಲ್ಲ. ಆದರೆ ಈ ಶೇ. 15 ಜನರಿಗೆ ...ನ್ವಯವಾದರೂ ಜಾರಿಯಾಗುವುದಿಲ್ಲ. ಕಲ್ಲು ಒಡೆಯುವ ...ಹಿಳೆಗೆ ಹೆರಿಗೆ ಭತ್ಯೆ ಕೊಡುವವರು ಯಾರು, ...ರಕ್ಕೊಂದು ದಿನ ಸಂಬಳ ಸಹಿತ ರಜೆಗೂ ಲೋಡಿಂಗ್ ...ರ್ಮಿಕರಿಗೂ ಏನು ಸಂಬಂಧ, ಮನೆ ಕೆಲಸದ ...ಹಿಳೆಯರಿಗೆ ಇಎಸ್‌ಐ-ಪಿಎಫ್ ತುಂಬುವವರು ...ಾರು? ಈ ಎಲ್ಲಾ ಕಾನೂನುಗಳೂ ಹಾಸ್ಯಾಸ್ಪದವಾಗಿವೆ. ...ರ್ಮಿಕ ಇಲಾಖೆಯೆಂಬುದು ಒಂದು ಪ್ರಯೋಜನಕ್ಕೆ ...ರದ ಇಲಾಖೆಯಾಗಿದೆ.

ಆದರೆ ಇಲ್ಲಿ ಗಂಭೀರವಾದ, ಆತಂಕಕಾರಿಯಾದ ...ಗತಿಯೊಂದನ್ನು ನಾವು ಗಮನಿಸಬೇಕು. ಇಷ್ಟು ದೊಡ್ಡ ...ಖ್ಯೆಯಲ್ಲಿರುವ ಅಸಂಘಟಿತ ಕಾರ್ಮಿಕರ ಬಗ್ಗೆ ಸರ್ಕಾರ ...ಗಲೀ, ಕಾರ್ಮಿಕ ಇಲಾಖೆಯಾಗಲೀ, ಬಂಡವಾಳ ...ಗಳು- ಮಾಲೀಕರು- ಗುತ್ತಿಗೆದಾರರಾಗಲೀ ಈ ಕಾರ್ಮಿ... ಹಕ್ಕುಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದನ್ನು ನಿರೀಕ್ಷಿಸ...ಗದು. ಸರ್ಕಾರ ಮತ್ತು ಬಂಡವಾಳಶಾಹಿಗಳನ್ನು ಇಲ್ಲಿ ...ಕ್ಕ ಮಾಡಿ ನೋಡಲಾಗದು. ಏಕೆಂದರೆ ಸರ್ಕಾರವನ್ನು ...ು ಕೇವಲ ಅವರ ಏಜೆಂಟ್‌ನಂತೆ ಕೆಲಸ ಮಾಡುವುದನ್ನು ಬಿಟ್ಟು ಬೇರೇನನ್ನೂ ಮಾಡುವುದಿಲ್ಲ. ಆದರೆ ಈ ಸಮಾಜದ ಪ್ರಜ್ಞಾವಂತ ಜನರು, ಪ್ರಗತಿಪರರು, ಸಾಹಿತಿ-ಬುದ್ಧಿಜೀವಿಗಳು, ಜನಪರ ಮಾಧ್ಯಮಗಳು ಅಸಂಘಟಿತ ಕಾರ್ಮಿಕರ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದಿರುವುದು ಸೋಜಿಗದ ಆದರೆ ದುರಂತದ ಸಂಗತಿ. ಇಂತಹದೊಂದು ಜನವರ್ಗದ ಬಗ್ಗೆ ಉಲ್ಲೇಖಿಸಿ ಈ ಎಚ್ಚೆತ್ತ ಜನರು ಮಾತನಾಡುವುದು ಎಲ್ಲೂ ಕಂಡುಬರುವುದಿಲ್ಲ.

ಇಂದು ಸರ್ಕಾರಗಳು, ಆಡಳಿತ ಮಂಡಳಿಗಳು, ವಿವಿಧ ರೀತಿಯ ಅಧಿಕಾರಸ್ಥರು ರೈತ ವಿರೋಧಿ, ದಲಿತ ವಿರೋಧಿ ಅಥವಾ ಕನ್ನಡ ವಿರೋಧಿ ಎಂದು ಕರೆಸಿಕೊಳ್ಳಲು ಇಷ್ಟಪಡುವುದಿಲ್ಲ. ಆದರೆ ಕಾರ್ಮಿಕ ವಿರೋಧಿ ಎನ್ನುವ ಒಂದು ಘೋಷಣೆ ಯಾ ಹಣೆಪಟ್ಟಿ ಯಾರಿಗೂ ಹೆದರಿಕೆ ಹುಟ್ಟಿಸುವುದಿಲ್ಲ. ಇದೇಕೆ ಎಂದು ಆಶ್ಚರ್ಯವಾಗುತ್ತದೆ. ಬಹುಶಃ ಎಡಪಂಥೀಯ ಟ್ರೇಡ್ ಯೂನಿಯನ್‌ಗಳು ಅದನ್ನು ಹೆಚ್ಚೆಚ್ಚು ಬಳಸುತ್ತಿದ್ದಾರೆ ಎಂಬ ಕಾರಣಕ್ಕಾ? ಸಂಘಟಿತ ವಲಯದ, 20 ಸಾವಿರದ ಹತ್ತಿರ ಹತ್ತಿರ ಸಂಬಳ ಪಡೆಯುವ, 'ಸುಖ'ವಾಗಿರುವ ಕಾರ್ಮಿಕರನ್ನು ನೋಡಿ ಅದೇ ಸಾರ್ವತ್ರಿಕ ಎಂಬ ಅಭಿಪ್ರಾಯಕ್ಕೆ ಬರಲಾಗಿದೆಯಾ? ಇದರರ್ಥ ಅಧಿಕಾರಸ್ಥರು, ಸರ್ಕಾರಗಳು ರೈತರ ಪರ, ದಲಿತರ ಪರ, ಕನ್ನಡ ಪರವಾದ ಕೆಲಸಗಳನ್ನು ಕಟಿಬದ್ಧವಾಗಿ ಮಾಡಿಕೊಂಡು ಬರುತ್ತಿದ್ದಾರೆ ಎಂದಲ್ಲ. ಏನೂ ಮಾಡದಿದ್ದರೂ ಮೊಸಳೆ ಕಣ್ಣೀರು ಸುರಿಸುವುದು, ಮೇಲ್ನೋಟಕ್ಕೆ ಕೆಲವು ಜನಪ್ರಿಯ ಕಾರ್ಯಕ್ರಮಗಳನ್ನು ಘೋಷಿಸುವುದನ್ನು ಮಾಡಲಾಗುತ್ತದೆ. ಆದರೆ ಸಮಾಜದಲ್ಲಿ ಈ ಸಂಗತಿಗಳಿಗೆ ಒಂದು ಮಾನ್ಯತೆ ದಕ್ಕಿದೆ. ಆ ಮಾನ್ಯತೆಯು ಯಾರೋ ತಮ್ಮಂತೆ ತಾವೇ ಕೊಡಮಾಡಿದ್ದಲ್ಲ; 80ರ ದಶಕದಲ್ಲಿ ಪ್ರಬಲವಾಗಿ ಬೆಳೆದ ರೈತ ಚಳವಳಿ, ದಲಿತ ಚಳವಳಿ ಮತ್ತು ಭಾಷಾ ಚಳವಳಿಯ ಕಾರಣಕ್ಕೆ ಅದು ದಕ್ಕಿದೆ.

ವಿಪರ್ಯಾಸವೆಂದರೆ ಜಮೀನು ಬಿಟ್ಟು, ಕೃಷಿ ಕಾರ್ಮಿಕರ ಕೆಲಸ ಬಿಟ್ಟು ನಗರಗಳಿಗೆ ವಲಸೆ ಹೋಗಿರುವ ರೈತರು, ದಲಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ಹಾಗೂ ವಿಶೇಷವಾಗಿ ಮಹಿಳೆಯರೇ ಇಂದು ಅಸಂಘಟಿತ ಕಾರ್ಮಿಕರು ಎಂದು ಕರೆಯಲಾಗುವ ಕ್ಷೇತ್ರದಲ್ಲೂ ಇರುವುದು. ಅಲ್ಲಿ ನಡೆಯುವ ಶೋಷಣೆಯ ಸ್ವರೂಪವು ಈ ಎಲ್ಲರನ್ನೂ ಒಂದು ಜನವಿಭಾಗವನ್ನಾಗಿ ಒಂದೆಡೆ ಕೂಡಿಸಿದೆ ಅಷ್ಟೇ. ಇವರಿಗಾಗಿ ಸರ್ಕಾರಗಳು ನೀಡುತ್ತಿರುವುದು ಕವಡೆ ಕಾಸಿನ ಕಿಮ್ಮತ್ತು

ಈ ಅಸಂಘಟಿತ ಕಾರ್ಮಿಕರು ಸಂಘಟಿತರಾಗಬೇಕಿರುವುದು ಮತ್ತು ಆದಕ್ಕಾಗಿ ನಾಡಿನ ಪ್ರಜ್ಞಾವಂತ ಜನರು ಕ್ರಿಯಾಶೀಲರಾಗಿ ಕೆಲಸ ಮಾಡಬೇಕಿರುವುದು ಇಂದಿನ ತುರ್ತು ಅಗತ್ಯವಾಗಿದೆ.

• ಡಾ. ವಾಸು ಎಚ್.ವಿ., ಕರ್ನಾಟಕ ಜನಶಕ್ತಿ

---

# ಪುಸ್ತಕ ಪರಿಚಯ



• ಚಂದ್ರಶೇಖರ್ ಐಜೂರ್

## ಯಾಕೀಗ ಭೂಮಿ ಪ್ರಶ್ನೆ?

ಕರ್ನಾಟಕದಲ್ಲಿ ಭೂಸುಧಾರಣೆಗೆ ಸಂಬಂಧಿಸಿದಂತೆ ದಿ ಮೈಸೂರು (ಪರ್ಸನಲ್ ಆಂಡ್ ಮಿಸಲೇನಿಯಸ್) ಇನಾಮ್ಸ್ ಅಬಾಲಿಶನ್ ಆಕ್ಟ್-1955, ದಿ ಮೈಸೂರು (ರಿಲೀಜಿಯಸ್ ಆಂಡ್ ಚಾರಿಟೇಬಲ್) ಇನಾಮ್ಸ್ ಅಬಾಲಿಶನ್ ಆಕ್ಟ್-1955, ಭೂಸುಧಾರಣಾ ಮಸೂದೆ-1961 ಎಂಬ ಮೂರು ಕಾಯ್ದೆಗಳು ಜಾರಿಗೊಂಡವು. ಈ ಮೂರು ಕಾಯ್ದೆಗಳು ಭೂಹೀನರಿಗೆ ಭೂಮಿ ದೊರಕಿಸಿಕೊಡುವ ನಿಟ್ಟಿನಲ್ಲಿ ಸಂಪೂರ್ಣ ನೆಲಕಚ್ಚಿದ್ದರಿಂದ 'ಉಳುವವನೇ ನೆಲದೊಡೆಯ' ಎಂಬ ಆಧಾರದ ಮೇಲೆ 1974ರ ಭೂಸುಧಾರಣೆ ಅಧಿನಿಯಮ ಈ ನಾಡಿನಲ್ಲಿ ಜಾರಿಗೆ ಬಂತು.


ಕರ್ನಾಟಕದಲ್ಲಿ ಜಾರಿಗೊಂಡ ಭೂಸುಧಾರಣಾ ಮಸೂದೆಗಳು, ಅವುಗಳಿಂದಾದ ಸುಧಾರಣೆ ಎಷ್ಟು, ಈ ಎಲ್ಲ ಮಸೂದೆಗಳು ಸೋತು ಕಾಗದದ ಮೇಲಷ್ಟೇ ಹುಲಿಯಾಗಿದ್ದು ಏಕೆ, ಧರ್ಮದ ಹೆಸರಿನಲ್ಲಿ, ಜಾತಿ ಟ್ರಸ್ಟ್‌ಗಳ ಹೆಸರಿನಲ್ಲಿ ಭೂಮಿ ಕಬಳಿಸಿ ಸರ್ಕಾರಿ ನಿಯಮಗಳನ್ನೇ ಗಾಳಿಗೆ ತೂರಿದವರು ಹೇಗೆ ಬಚಾವಾದರು, ಯಾರ್‍ಯಾರಿಗೆ ಎಷ್ಟು ಭೂಮಿ ಹಂಚಲಾಯಿತು, ಮತ್ತೀಗ ಭೂಮಿ ಪ್ರಶ್ನೆ ಏಕೆ...? ಈ ಎಲ್ಲ ಪ್ರಶ್ನೆಗಳಿಗೂ ಅಂಕಿಅಂಶಗಳ ಸಮೇತ ಈ ಕೃತಿಯಲ್ಲಿ ಉತ್ತರ ಸಿಗುತ್ತದೆ. ಇನ್ನೂ ಪುಸ್ತಕದ ಬೆನ್ನಿನಲ್ಲಿ 'ಕೂಡು ಕುಟುಂಬವೊಂದರ ಬದುಕನ್ನು ಸಕಾರಾತ್ಮಕವಾಗಿ ಪರಿವರ್ತಿಸುವ ಸಾಧನವೊಂದಿದ್ದರೆ ಅದು ಭೂಮಿ ಮಾತ್ರ ಎನ್ನುವುದು ಈ ಪುಸ್ತಕದ ನಿಲುವು. ದುಡಿದು ತಿನ್ನುವವರಲ್ಲಿ ಭೂಮಿ ಇಲ್ಲ ಭೂಮಿ ಇದ್ದವರು ದುಡಿದು ತಿನ್ನುತ್ತಿಲ್ಲ' ಎಂಬ ಮಾತುಗಳು ವರ್ತಮಾನದ ಭೂರಹಿತರ ಹೆಗಲಿಗೆ ನೇತುಹಾಕಿರುವ ಭಿತ್ತಿಚಿತ್ರದಂತೆ ಕಾಣುತ್ತದೆ.



ಲೇಖಕರು
ಎಂ.ಚಂದ್ರ ಪೂಜಾರಿ
ಪುಟ: 168, ಬೆಲೆ: 100, ಪ್ರಕಟಣೆ: 2010

## ಜಾತಿ ವಿಶ್ಲೇಷಣೆಯ ಸಮಸ್ಯೆ

ಜಾತಿ ಎಂಬುದು ಹೊಸ ರೂಪ, ಹೊಸ ವೇಷ, ಹೊಸ ಬಣ್ಣ, ಹೊಸ ಗಾತ್ರ, ಹೊಸ ಆಕಾರಗಳಲ್ಲಿ ನಮ್ಮೆದುರು ನಿಂತು ಕುಣಿಯುತ್ತಿರುವಾಗಲೇ ಜಾತಿ ಕುರಿತು ಬೆರಳೆಣಿಕೆಯಷ್ಟಾದರೂ ಸಂಶೋಧನಾ ಕೃತಿಗಳು ಆಗೀಗ ಕನ್ನಡದಲ್ಲಿ ಬಂದಿವೆ. ಹೀಗೆ ಬಂದ ಬಹುಪಾಲು ಕೃತಿಗಳು ಜಾತಿಯನ್ನು ಭೂತವೆಂತಲೋ ಶೋಷಿತರಿಗೆ ತೆಪ್ಪವೆಂತಲೋ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಬಣ್ಣಿಸಿದ್ದು ಉಂಟು. ಈ ಕೃತಿ ಕೂಡ ಹೆಚ್ಚೂಕಮ್ಮಿ ಇದೇ ಸಾಲಿಗೆ ಸೇರುವಂತಹದ್ದು. ಜಾತಿ ಕುರಿತು ಮತ್ತು ಜಾತಿ ಸೃಷ್ಟಿಸಿದ ಅನೇಕ ಗಂಭೀರ ತೊಡಕುಗಳ ಕುರಿತು ಈ ಪುಟ್ಟ ಕೃತಿಯಲ್ಲಿ ಅಂಥ ದೊಡ್ಡ ವಿಶ್ಲೇಷಣೆಗಳಾಗಲಿ, ಸಂಶೋಧನೆಯಲ್ಲಿ ಕಂಡುಕೊಂಡ ಉತ್ತರವಾಗಲಿ ಸಿಗುವುದಿಲ್ಲ.




ಬದಲಿಗೆ ವರ್ತಮಾನದಲ್ಲಿ ಜಾತಿ ಹುಟ್ಟುಹಾಕಿರುವ ಸಮಸ್ಯೆ - ಯಾರಿಗೆ ಮತ್ತು ಹೇಗೆ? ಜಾತಿಯ ಕಣ್ಣುಗಳಲ್ಲಿ ಪ್ರತಿಭೆಯ ಮೌಲ್ಯಮಾಪನ, ಮೀಸಲಾತಿ ಮತ್ತು ಸರಕಾರಿ ಸವಲತ್ತುಗಳ ಪ್ರಶ್ನೆ, ಜಾತಿಯಿಂದಾಗಿ ಇನ್ನೂ ಜೀವಂತವಾಗಿರುವ ಭಾರತದ ಹಳ್ಳಿಗಳು ಮತ್ತು ಜಾತಿ ಬಹಿಷ್ಕಾರಗಳ ಕುರಿತು ಹೆಚ್ಚು ಚರ್ಚೆಯನ್ನು ಈ ಕೃತಿಯಲ್ಲಿ ಕಾಣಬಹುದಾಗಿದೆ. ಇಲ್ಲಿನ ಸಾಮಾಜಿಕ ಪರಿಸ್ಥಿತಿ ಸಂಕೀರ್ಣವಾಗಿರುವುದರಿಂದ ಜಾತಿ ಸಮಸ್ಯೆಗೆ ಪರಿಹಾರವನ್ನು ಸರಳವಾಗಿ ಹೇಳಲು ಸಾಧ್ಯವಿಲ್ಲವೆಂದು ಹೇಳುತ್ತಾ ಜಾತಿ ಕುರಿತ ವಿಶ್ಲೇಷಣೆಗೆ ತೊಡಗಿದ ಲೇಖಕರೆ ಕೊನೆಗೆ ಅಸಹಾಯಕರಾಗಿಬಿಡುತ್ತಾರೆ.

ಲೇಖಕರು
ಡಾ. ಬಿ.ಎಂ.ಪುಟ್ಟಯ್ಯ
ಪುಟ: 44, ಬೆಲೆ:20, ಪ್ರಕಟಣೆ: 2010
ಮೇಲಿನ ಎರಡು ಕೃತಿಗಳ ಪ್ರಕಾಶಕರು
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

## ಮಿರ್ಜಾ ಗಾಲಿಬ್ ಕಥನ ಕಾವ್ಯ

ಈ ಹಿಂದೆ ಉಮರ್ ಖಯ್ಯಾಮನ ಪದ್ಯಗಳನ್ನು ಸಮರ್ಥವಾಗಿ ಕನ್ನಡಕ್ಕೆ ತಂದಿದ್ದ ಜಗದೀಶ್ ಕೊಪ್ಪ ಗಾಲಿಬ್ ಕುರಿತ ಟಿ.ಪಿ.ಇಸ್ಸಾರರ Divan- e- Ghalib: English Renderings ಕೃತಿಯ ಬಹುಮುಖ್ಯ ಭಾಗಗಳನ್ನು ಅಚ್ಚುಕಟ್ಟಾಗಿ ಅನುವಾದಿಸಿದ್ದಾರೆ. ಐದು ಅಧ್ಯಾಯಗಳಲ್ಲಿ ಮಿರ್ಜಾ ಗಾಲಿಬ್ ಕಥನ, ಗಾಲಿಬ್ ಬದುಕಿದ್ದ ದಿಲ್ಲಿಯ ವೈಭವ, ಅವನ ಸಂಕಷ್ಟದ ದಿನಗಳು, ಸಿಪಾಯಿದಂಗೆಯ ಮಾರಣಹೋಮಕ್ಕೆ ಸಾಕ್ಷಿಯಾಗಿದ್ದ ಗಾಲಿಬ್ ಮತ್ತು ಅವನ ಕೊನೆಯ ದಿನಗಳ ದಾರುಣ ಚಿತ್ರಣವನ್ನು ಲೇಖಕರು ಅನುವಾದದ ಭಾರದ ಕುರುಹನ್ನು ಓದುಗರ ಮೇಲೆ ಹೇರದೆ ಸೊಗಸಾಗಿ ನಿರೂಪಿಸಿದ್ದಾರೆ. 'ಗಾಲಿಬ್ ಉರ್ದು, ಪರ್ಶಿಯನ್ ಭಾಷೆಯ ಪಂಡಿತ. ತನ್ನ ಕಾವ್ಯದಲ್ಲಿ ಇವೆರಡನ್ನೂ ಹದವಾಗಿ ಬೆರೆಸಿ ಕಟ್ಟಿದ ಕಾವ್ಯ ಗಂಭೀರತೆ ಮತ್ತು ಲಾಲಿತ್ಯಕ್ಕೆ ಗುಲಗಂಜಿಯಷ್ಟು ಧಕ್ಕೆ ಬರದಂತೆ ಸಹಜವಾಗಿ ಕನ್ನಡಕ್ಕೆ ಜಗದೀಶ್ ತಂದಿದ್ದಾರೆ' ಎಂದು ಪುಸ್ತಕದ ಬೆನ್ನಿಗಿದ್ದು ಹೇಳಿರುವ ಡಿ.ಎಸ್.ಚೌಗುಲೆ ಅವರ ಮಾತುಗಳು ಈ ಕೃತಿಗೊಂದು ವಿಶೇಷ ಸರ್ಟಿಫಿಕೆಟ್ ಕೊಟ್ಟಂತಿದೆ. ದಿಲ್ಲಿಯ ಕೊನೆಯ ಮೊಘಲ್ ಚಕ್ರವರ್ತಿ ನೀಡಿದ ಸವಲತ್ತನ್ನು ಕಂಡು ಗಾಲಿಬ್:

'ಗಾಲಿಬ್
ಹಳಸಿದ ಅನ್ನವನು
ಕೊಟ್ಟು ಹಂಗಿಸುವವರ
ನಡುವೆ ನಿನಗೇಕೊ
ಹಂಗಿನರಮನೆಯ
ಮೃಷ್ಟಾನ್ನ ಭೋಜನ' ಎನ್ನುತ್ತಾನೆ. ಮತ್ತೊಂದರಲ್ಲಿ ಗಾಲಿಬ್‌ನ ಬದುಕು ಮತ್ತು ಕಾವ್ಯದ ದರ್ಶನವಾಗುತ್ತದೆ:
ಆಹಾ ಸುಖವೆ
ಅವಳು ನನ್ನಲ್ಲಿಗೆ
ಬರುವ ಸುದ್ದಿಯೊಂದು
ಸುತ್ತೆಲ್ಲಾ ಹಬ್ಬಿದೆಯಲ್ಲ!
ಅಯ್ಯೋ ಸೋವೆ
ಅವಳಿಗಾಗಿ ಹಾಸಲು
ಮನೆಯೊಳಗೆ ಚಾಪೆಯೇ
ಇಲ್ಲವಲ್ಲ.



ಲೇಖಕರು
ಡಾ. ಎನ್.ಜಗದೀಶ್ ಕೊಪ್ಪ
ಪ್ರಕಾಶಕರು: ಪಲ್ಲವ ಪ್ರಕಾಶನ
ಚನ್ನಪಟ್ಟಣ (ಅಂಚೆ), ಎಮ್ಮಿಗನೂರು
ಬಳ್ಳಾರಿ -583 113
ಪುಟ: 128, ಬೆಲೆ: 80, ಪ್ರಕಟಣೆ: 2009

# ಪುಸ್ತಕ ವಿಮರ್ಶೆ

# ಚೌಕಟ್ಟಿನ ಚಿತ್ರಗಳು

ಡಾ. ಸುಜಾತಾ ಜಂಗಮಶೆಟ್ಟಿಯವರ 'ಚೌಕಟ್ಟಿನ ಚಿತ್ರಗಳು' 2009ನೇ ವರ್ಷದ ಮೊದಲ ಕೃತಿ ಪುರಸ್ಕಾರದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ಪಡೆದ ಕೃತಿ. ಸುಜಾತಾ ವೃತ್ತಿಯಿಂದ ಅಧ್ಯಾಪಕಿ ಹಾಗೂ ಪ್ರವೃತ್ತಿಯಿಂದ ಹವ್ಯಾಸಿ ರಂಗಭೂಮಿಯ ಕಲಾವಿದೆ. ಸಮುದಾಯ ಸಾಂಸ್ಕೃತಿಕ ಸಂಘಟನೆಯಿಂದ ಬೆಳಕಿಗೆ ಬಂದ ಸುಜಾತಾ ಸಿ. ಬಸವಲಿಂಗಯ್ಯ ನಿರ್ದೇಶನದ 'ಈರೋಬಿ' ನಾಟಕದಲ್ಲಿ ಮುಖ್ಯ ಪಾತ್ರ ವಹಿಸಿದವರು. ಹಲವಾರು ಬೀದಿನಾಟಕ, ಟೆಲಿ ಫಿಲ್ಮ್ ಹಾಗೂ ರೇಡಿಯೋ ನಾಟಕಗಳಲ್ಲಿ ಪಾತ್ರವಹಿಸಿರುವ ಸುಜಾತಾ ಅವರು ಈಗಾಗಲೇ 2007ನೇ ಸಾಲಿನ ನಾಟಕ ಅಕಾಡೆಮಿಯ ಸಿಜಿಕೆ ಯುವರಂಗ ಪ್ರಶಸ್ತಿಯ ಗೌರವಕ್ಕೆ ಪಾತ್ರರಾಗಿದ್ದಾರೆ.

'ಚೌಕಟ್ಟಿನ ಚಿತ್ರಗಳು' ಇವರ ಚೊಚ್ಚಲ ಕೃತಿ. ಈ ಕೃತಿಯಲ್ಲಿನ ಹಲವು ಲೇಖನಗಳು ತಮ್ಮ ಸರಾಗವಾದ ವಿಷಯ ನಿರೂಪಣೆಯಿಂದಲೇ ಗಮನ ಸೆಳೆಯುತ್ತವೆ. ಶಾಂತರಸ ಅವರ ಸಂಬಂಧಿಯಾದ ಸುಜಾತಾ ಹತ್ತಿರದಿಂದಲೇ ಕಂಡ ಅವರ ವ್ಯಕ್ತಿತ್ವವನ್ನು ಯಾವ ವಿಶೇಷಣಗಳೂ ಇಲ್ಲದೆ ಸರಳವಾಗಿ ನಿರೂಪಿಸುತ್ತಾರೆಂದರೆ ಅಲ್ಲಿ ಸಂಬಂಧಕ್ಕಿಂತಲೂ ವಿಚಾರವಾದದ ಬೆನ್ನುಹತ್ತಿ ನಿರಂತರ ಸಂಘರ್ಷದ ಬದುಕನ್ನು ಬದುಕಿದ ಶಾಂತರಸ ಅವರ ವ್ಯಕ್ತಿತ್ವ ಮುಖ್ಯವಾಗುತ್ತದೆ. ಶಾಂತರಸರ ಬದುಕು ನಿರಂತರ ಸಂಘರ್ಷ ಮತ್ತು ಹೋರಾಟಗಳಿಂದ ಕೂಡಿದ್ದು ಯುವ ಜನಾಂಗವನ್ನು ಸಾಕಷ್ಟು ಪ್ರೇರೇಪಿಸಿದೆ. ಬದುಕು ಮತ್ತು ಬರಹ ಒಂದೇ ಎನ್ನುವಂತೆ ಬದುಕಿದ ಶಾಂತರಸ ಸಾಮಾಜಿಕ ಅನ್ಯಾಯಗಳನ್ನು ವಿರೋಧಿಸುವ ಯಾವುದೇ ಹೋರಾಟವಿದ್ದರೂ ಅದರ ಮುಂಚೂಣಿಯಲ್ಲಿದ್ದವರು. ಎಂದೂ ಭ್ರಮಾತ್ಮಕ ಸಾಹಿತ್ಯವನ್ನು ಒಪ್ಪದೆ ಜಾತೀಯತೆ, ಕೋಮುವಾದ, ಸಾಮಾಜಿಕ ವಿಷಮತೆಗಳನ್ನು ಬಲವಾಗಿ ವಿರೋಧಿಸುತ್ತಿದ್ದವರು. ಶಾಂತರಸ ಹಾಗೂ ಅವರ ಪತ್ನಿ ಲಕ್ಷ್ಮಿದೇವಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಬೆಂಗಳೂರಿನ ಜನರಲ್ ಹಾಸ್ಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಈ ಗಂಡಹೆಂಡಿರು ಕೊನೆಗಾಲದವರೆಗೂ ಹಕ್ಕಿಪಿಕ್ಕಿಗಳಂತೆ ಇದ್ದು ಅನುರೂಪ ದಾಂಪತ್ಯ ನಡೆಸಿದವರು. ಜನರಲ್ ಹಾಸ್ಟೆಲ್‌ನಲ್ಲಿ ಶಾಂತರಸರಿಗಾಗಿ ಜೋಳದ ರೊಟ್ಟಿ ಬಡಿಯುತ್ತಿದ್ದ ಲಕ್ಷ್ಮಿದೇವಿಯವರನ್ನು ನಾನು ನೋಡಿದ ಚಿತ್ರ ಇಂದಿಗೂ ನನ್ನ ಕಣ್ಣಲ್ಲಿದೆ.

ಈ ವ್ಯಕ್ತಿಚಿತ್ರಣದ ಲೇಖನವನ್ನು ಸುಜಾತಾ ಸಮತೋಲನದಿಂದಲೇ ಬರೆದಿದ್ದಾರೆ. ಇದೇ ರೀತಿಯ ಇನ್ನೊಂದು ಲೇಖನ 'ತುಂಬಿದ ಕೊಡ ನನ್ನಪ್ಪ'. ತಂದೆ ಎಸ್.ಬಿ. ಜಂಗಮಶೆಟ್ಟಿಯವರನ್ನ ಕುರಿತಾದ ಈ ಲೇಖನ ತಂದೆಯೆಂಬ ಋಣ, ಪ್ರೀತಿ, ಸರಳ ಸಜ್ಜನಿಕೆಯ ವ್ಯಕ್ತಿತ್ವದ ಅನಾವರಣವನ್ನು ಮಾಡುವಂತಿದೆ. ಆರು ಮಕ್ಕಳ ತಂದೆ ತನ್ನ ಕುಟುಂಬದೊಂದಿಗೆ ಸಂಬಂಧಿಕರನ್ನು ಪ್ರೀತಿಸುವ, ಅವರ ಕಷ್ಟಸುಖಕ್ಕೆ ನೆರವಾಗುವ ವ್ಯಕ್ತಿತ್ವವನ್ನು ಚಿತ್ರಿಸಲಾಗಿದೆ. ತನ್ನ ಮಕ್ಕಳನ್ನು ಪ್ರವಾಸಕ್ಕೆ ಮತ್ತೆಮತ್ತೆ ಕೊಂಡೊಯ್ಯುತ್ತಿದ್ದ, ಅದಕ್ಕಾಗಿ ಮುಂಚಿತವಾಗಿ ತಿಂಗಳಾನುಗಟ್ಟಲೆ ನಡೆಸುತ್ತಿದ್ದ ತಯಾರಿಯ ತಂದೆಯ ಪ್ರೀತಿಯನ್ನು ಲೇಖಕಿ ಸರಳವಾದ ಆದರೆ ಆಪ್ತವಾದ ರೀತಿಯಲ್ಲಿ ವಿವರಿಸಿದ್ದಾರೆ. ತನ್ನ ತಂದೆಯ ಪರಕು ಬನೀನು ಮತ್ತು ಚೆಡ್ಡಿ ಕುರಿತಾದ ಪ್ರಸ್ತಾಪಗಳು ಎಲ್ಲರ ಮನೆಯಲ್ಲಿನ ತಂದೆಯರನ್ನು ಒಂದೇಕ್ಷಣ ನಿಲ್ಲಿಸಿ ಬೆಳಕು ಹರಿಸುತ್ತದೆ.



ಡಾ. ಸುಜಾತಾ ಜಂಗಮಶೆಟ್ಟಿ
ಪುಟಗಳು: 85 + XII

ಈ ವ್ಯಕ್ತಿ ಚಿತ್ರಗಳಲ್ಲದೆ ಎಪ್ಪತ್ತು ವರ್ಷದ ಹಿರಿಯ ರಂಗ ನಿರ್ದೇಶಕ, ನಾಟಕ ರಚನಾಕಾರ ಲಾಲ್ ಮಹ್ಮದ್ ಬಂದೇ ನವಾಜ್ ಖಲೀಫ ಆಲ್ಹಾಳ್ ಅವರ ಬಗ್ಗೆ ಬರೆದ ಲೇಖನವೂ ಆತ್ಮೀಯ ಸಂಬಂಧವೊಂದನ್ನು ಮೆಲುಕು ಹಾಕಿದಂತೆ ಭಾಸವಾಗುತ್ತದೆ. ಹಿರಿಯರಾದ ಅವರು ತನ್ನ ಸಂದರ್ಶನವೊಂದನ್ನು ಕಂಡು ಕೇಳಿ ಪ್ರತಿಭೆ ಗುರುತಿಸಿದ ಸಜ್ಜನಿಕೆಯನ್ನು ಚಿತ್ರಿಸುತ್ತದೆ. ಗೀತಾ ನಾಗಭೂಷಣ ಅವರನ್ನು ಕುರಿತಾದ ಲೇಖನವೊಂದಿದ್ದು ಕಥೆ, ಕಾದಂಬರಿಗಳ ವಿಶಿಷ್ಟತೆಯನ್ನು ಗುರುತಿಸುತ್ತಲೇ ದೌರ್ಬಲ್ಯವನ್ನು ಹೇಳುವುದು ವಿಮರ್ಶಕನಲ್ಲಿರಬೇಕಾದ ಔಚಿತ್ಯಪ್ರಜ್ಞೆಯನ್ನು ಗುರುತಿಸುತ್ತದೆ.

ರಂಗಶಂಕರದಲ್ಲಿ ನೋಡಿದ 'ಜಗಜ್ಯೋತಿ ಬಸವೇಶ್ವರ' ನಾಟಕದ ಮೂಲಕ ಏಣಗಿ ಬಾಳಪ್ಪನವರನ್ನು ಪರಿಚಯಿಸುವ ಲೇಖನವಾಗಿದೆ. ಅವರ ಕಲಾವೈಭವ ನಾಟ್ಯಸಂಘದ ಬಹುತೇಕ ನಾಟಕಗಳು ಗುಣಮಟ್ಟ ಮಾತ್ರದಿಂದಲೇ ಪ್ರೇಕ್ಷಕರ ಮನಗೆದ್ದವಾಗಿದ್ದವು. ಅವರ ಕಂಪನಿಯ ಮೂಲಕ ಅದೆಷ್ಟು ಉತ್ತಮ ನಟರು ಹೊರಬಂದರೆಂದರೆ ಒಂದು ನಾಟಕ ಶಾಲೆ ಮಾಡಲಾರದಷ್ಟು ಕೆಲಸವನ್ನು ಏಣಗಿ ಬಾಳಪ್ಪನವರು ಮಾಡಿದರು ಎಂದು ಲೇಖಕಿ ಗುರುತಿಸುತ್ತಾರೆ. ಇಲ್ಲಿನ ಬಹುತೇಕ ಲೇಖನಗಳ ತಂತ್ರ ತಾವು ನೋಡಿದ ಒಂದು ನಾಟಕ ಅಥವಾ ಓದಿದ ಒಂದು ಕೃತಿಯ ಮೂಲಕ ಇಡೀ ಹಿನ್ನೆಲೆಯನ್ನು ಕೆದಕಿ ಅನಾವರಣಗೊಳಿಸುವುದಾಗಿದೆ. ಇದೇ ನಿಟ್ಟಿನ ಇನ್ನೊಂದೆರಡು ಲೇಖನಗಳು ತೇಜಸ್ವಿಯವರ 'ಕರ್ವಾಲೋ', ಪ್ರಸನ್ನ ಅವರ 'ದೇಸಿ ಜೀವನ ಪದ್ಧತಿ', ಭರತದ 'ನಾಟ್ಯಶಾಸ್ತ್ರ'. ಒಂದು ಕೃತಿಯ ಓದಿನ ಮೂಲಕ ಅದರ ಸುತ್ತಮುತ್ತಲಿನ ವಿಚಾರಗಳ ಅನಾವರಣ ಇಲ್ಲಿ ನಡೆದಿದೆ.

ತಮ್ಮ ಚೌಕಟ್ಟಿಗೆ ನಿಲುಕಿದ ಚಿತ್ರಗಳಲ್ಲಿ ಮುಖ್ಯವಾದ ಲೇಖನವೆಂದರೆ ಕನ್ನಡದ ಸಾಕ್ಷಿಪ್ರಜ್ಞೆಯಂತೆ ಕೆಲಸ ಮಾಡಿದ, ಪತ್ರಿಕೋದ್ಯಮದಲ್ಲಿ ತಮ್ಮ ಯುಗವನ್ನು ದಾಖಲಿಸಿದ ಲಂಕೇಶ್ ಸಾಹಿತ್ಯ ಕುರಿತಾದ 'ಲಂಕೇಶರ ಸಾಹಿತ್ಯ: ಹೀಗೊಂದು ನೋಟ.' ಲಂಕೇಶರ ಕಥೆ, ಕಾದಂಬರಿ, ನಾಟಕ, ಪತ್ರಿಕೋದ್ಯಮ (ಕವಿತೆಗಳನ್ನು ಹೊರತುಪಡಿಸಿ) ಕುರಿತಾಗಿ ಲೇಖಕಿ ನಡೆಸಿದ ಭಿನ್ನಭಿನ್ನ ಆಲೋಚನೆಗಳು ಇಲ್ಲಿವೆ. ಪತ್ರಿಕೋದ್ಯಮ ಹಾಗೂ ಸೃಜನಶೀಲ ಸಾಹಿತ್ಯವನ್ನು ಭಿನ್ನಭಿನ್ನವಾದ ಕಂಪಾರ್ಟ್‌ಮೆಂಟಿನಲ್ಲಿಟ್ಟು ನೋಡುವುದನ್ನು ಒಪ್ಪದೆ ಒಂದು ಮತ್ತೊಂದನ್ನು ನಿರಂತರವಾಗಿ ಪ್ರಭಾವಿಸಿವೆ ಎಂಬ ನಿಲುವನ್ನು ತಳೆದಿದ್ದಾರೆ. ಚಿಕ್ಕದಾದರೂ ಲಂಕೇಶ್ ಸಾಹಿತ್ಯಕ್ಕೆ ಇರುವ ಬೇರೆಬೇರೆ ಆಯಾಮಗಳನ್ನು ಇಲ್ಲಿ ಗುರುತಿಸಲಾಗಿದೆ.

ಉತ್ತರ ಕರ್ನಾಟಕದ ನೆತ್ತಿ ಸುಡುವ ಬಿಸಿಲಿನ ನಡುವೆಯೂ ಹರಡಿರುವ ಪುಷ್ಟವಾದ ಸಂಸ್ಕೃತಿ ಹಾಗೂ ಸಾಹಿತ್ಯಕ ಗುಣವನ್ನು ಇಲ್ಲಿನ ಲೇಖನಗಳು ಸಮರ್ಥವಾಗಿಯೇ ಚಿತ್ರಿಸುತ್ತವೆ. ಸಾಹಿತ್ಯದ ವಿದ್ಯಾರ್ಥಿನಿಯೊಬ್ಬಳು ಕಾಣುವ ಅರಿಯುವ ಖಚಿತವಾಗಿ ಅರ್ಥೈಸುವ ವಿವಿಧ ಪ್ರಯತ್ನಗಳು ಇಲ್ಲಿನ ಲೇಖನಗಳಲ್ಲಿ ಕಾಣ ಸಿಗುತ್ತವೆ.

• ಡಾ. ಎಚ್.ಎಲ್. ಪುಷ್ಪ





## ಕಾವ್ಯವಿರೋಧಿ ಕವನ

ಭಾಷೆ ಹಾಗೆ ಬಡಬಡಿಕೆಯಾದಾಗ
ವ್ಯಕ್ತವಾಗಿ ಅತಿ
ಕುಸಿಯುವುದು ಮಾಮೂಲಿಯಾದಾಗ
ಯಥೇಚ್ಛ ಹರಿವು ಮತ್ತು ಪದಗೇಡಿತನದ ಈ
ಕಾಲದಲ್ಲಿ
ನಾನು ದಿವ್ಯಜ್ಞಾನಿಯ ಮೌನವನ್ನ ಆಯ್ದುಕೊಳ್ಳುವೆ
ನನ್ನ ನಿರಾಳದಲ್ಲಿ ನಾನು ಉಸುರುವ ಸಂಗತಿಗಳು
ಪ್ರೇಮಿಗಳ ಖಾಸಾ ದನಿಗಿಂತ
ಮಿಗಿಲಾದ ಅರ್ಥವಂತಿಕೆಯಿಂದ
ಮಾತಾಡಲಿ
ಮಾತಲ್ಲಿ ಮುಳುಗಿ ಕಂಠಮಟ್ಟ
ವಿವೇಕ ಎಕ್ಕ ಎದ್ದಿರುವುದಕ್ಕೆ
ಕಾವ್ಯ ನಾಯಿ ನರಿಗಳ ಊಳು
ಸಮಸ್ಯೆ ಪಟ್ಟಿಗಳ ಸುಂದರ
ರಕ್ಷಾಪುಟಗಳ ಆವೃತ್ತಿ
ಕ್ಯಾಲಿಕೊ ಪ್ರತಿ

ಅನುಬಂಧಗಳು ಟಿಪ್ಪಣಿಗಳು
ಉಚಿತ ಹೇಳಿಕೆಗಳು ಲಯಬದ್ಧ ಆಧಾರಗಳು
ಋಣಿಯಾಗಲೊಪ್ಪದ ಉಲ್ಲೇಖಗಳು
ಸ್ಥಾನಭ್ರಷ್ಟ ದೃಷ್ಟಾಂತಗಳು
ಗತಿಗೆಟ್ಟ ಹೋಲಿಕೆಗಳು
ಹಿಸಿದು ಹಿಗ್ಗಲಿಸಿದ ರೂಪಕಗಳು
ಸುಸ್ತಾದ ಉಪಮೆ ಬಸವಳಿದ ಛಂದಸ್ಸು
ಕಗ್ಗಂಟಾದ ಲಯಗಳು
ನಾಲಗೆಯ ತಿರಿಚು, ಮೂಗುಗಳ ಹಿಂಡುವಿಕೆ
ಹೆಸರುಗಳ ಎಸೆದಾಟ ಮತ್ತು ತಲೆಬರಹಗಳ ಕರೆ
ನುಡಿಗಟ್ಟುಗಳ ಕುಲುಕುಲು
ಸವಕಲು ಶಬ್ದ ಹರಿವು
ದೀರ್ಘ ಸೊಲ್ಲುಗಳ ದೈನೇಸಿ ತೆಳುವು

ನೂಕುನುಗ್ಗಲು ಗಮನ ಸೆಳೆಯಲು
ತಳ್ಳಾಟ ಬೆಳಕಿಗೆ ಬರಲು
ವೇದಿಕೆಯತ್ತ ಓಟ, ಮೈಕಿಗಾಗಿ ಧಾವಂತ
ಸಭೆಗಳಾಚೆ ಪ್ರತಿಷ್ಠೆ
ಯೋಗ್ಯತೆ ಮೀರಿ ಬಾಚಿಕೊಳ್ಳುವ ಹುಚ್ಚು
ಅಹಂನ ಜೊತೆ ರಕ್ತಿ, ಅನುರಾಗ
ಬಡಾಯಿವೀರರ ಬಾಯಲ್ಲಿ
ಪದಗಳು ತಿವಿಯುವ ಕತ್ತಿಗಳಾಗಿ
ಹೀನೋಪಾಯಗಳಾಗಿ
ಕಾವ್ಯವೊಂದು ಪ್ರದರ್ಶನ ಕಲೆ
ಅಂತಸ್ತು ಹೆಚ್ಚಳದ ಮಾಧ್ಯಮ
ಖ್ಯಾತಿ ಗಳಿಕೆಯ ತಾಣ

ಇನ್ನು ಇದೀಗ
ನಾನು ತೆಪ್ಪಗಾಗುವ ಹೊತ್ತು
ಯಾಕೆಂದರೆ ನಾನೂ ಸೇರಿಬಿಟ್ಟಿರುವೆನೇನೋ
ಆ ಜಂಗುಳಿಯಲ್ಲಿ ಬೆರಳು ತೋರಿ
ಬರೀ ಧಿಮಾಕಿನ ಅಭಿಮತದ ಮೂಲಕ
ಹಾಗೆಯೇ ನಿರ್ಣಾಯಕ ಪಾತ್ರದ ಮೂಲಕ
ಪದಗಳಿಗೆ ತೀರ್ಪುಗಾರರು ಬೇಕಿಲ್ಲ
ನಾನು ನನ್ನ ನಿರಾಳದಲ್ಲಿ ಹೇಳುವ ಸಂಗತಿಗಳು
ಅರ್ಥವತ್ತಾಗಿರಲಿ ಈ–
ಕೊರೆತಕ್ಕಿಂತ ಚೀರಾಟಕ್ಕಿಂತ ಅಬ್ಬರಕ್ಕಿಂತ
ಕಿಸುಬಾಯಿಯ ಪೊಳ್ಳು ಪದಗಳಿಗಿಂತ
ಕಿಸಕೊಂಡು ಬೀಳುವ ದೊಡ್ಡ ಮಾತುಗಳಿಗಿಂತ

ಮೂಲ: ಫುತ್ತಾನೆ ವಾ ಬೊಫೇಲೊ
ಕನ್ನಡಕ್ಕೆ: ಶ್ರೀನಿವಾಸರಾಜು, ಚಳ್ಳಕೆರೆ

# ಅಂತೂಇಂತು ಕುಂತೀ ಕೊಡಕುಲುಕು ರಾಜ್ಯಂ ಲೇದು

ಕಾಳಮಾವನ ಕಠೋರ ಸೂಚನೆಯಂತೆ ರಾಜ್ಯದ ಕಲ್ಲುಂದೆ ರಾಜಕಾರಣವನ್ನ ಮಾತನಾಡದೇ ಸುಮ್ಮನಿದ್ದರೂ, ತಡೆಯಲಾರದ ಸೀರ ಯಾವುದೊ ಕುಚೋದ್ಯದ ಸಂದ್ಯ ವೀಕ್ಷಿಸಿದವನಂತೆ,

"ಕಡಿಗೂ ಉಳಕಂಡೇಬುಟ್ರಲ್ಲಯ್ಯ ಬಡ್ಡಿಮಕ್ಕಳು" ಎಂದ.

ಬ ಯ ಲು ಸೀ ಮೆ

## ಕಟ್ಟೆಪುರಾಣ

▶ಬಿ. ಚಂದ್ರೇಗೌಡ

"ಗಟ್ಟಿ ಪಿಂಡ ಕಣೊ ಎಡೂರಪ್ಪ" ಎಂದ ಉಗ್ರಿ.

"ಅಲವೆ ಮತ್ತೆ, ಇನ್ಯಾವನಾರ ಆಗಿದ್ರೆ ಈಟೊತ್ತಿಗೆ ಬಿದ್ದು ಚಲ್ಲಾಡ್ಯೋಗಿರೋನು" ಎಂದ ಸೀರ.

"ಎಡೂರಪ್ಪ ಇನ್ನೇನು ಮನಿಗೊಗೇಬುಡ್ತನೆ ಅಂದ್ರು, ಅದ್ಯಾಕ್ಲ ಇಂತ ಬೂಟಾಟಿಕೆ ನಾಟಕ ಮಾಡಿಕೊಂಡು ಅವುಮಾನ ಅನುಭವುಸ್ತವೆ ಈ ಕಾಂಗ್ರೆಸ್ಸಿನವು" ಎಂದ ಕಾಳಮಾವ.

"ಪಾಪ ಕಾಂಗ್ರೆಸ್ಸಿನೋರದೇನು ತಪ್ಪಿಲ್ಲ ಕಣಮಾವ. ಅವು ಯಂಗೊ ಅಂಗೆ ಕಾಲ ಹಾಕೋ ಜಾತಿವು. ಈ ಕುಮಾರಸ್ವಾಮಿ ಆಡಿರೊ ಆಟದಿಂದ ಕಾಂಗ್ರೆಸ್ಸಿನವು ಮಾನ ಕಳಕಂಡೊ" ಎಂದ ಉಗ್ರಿ.

"ಆಗೊಂದು ಸತಿ ಕುಮಾರಸ್ವಾಮಿಗೂ ಅವುಮಾನಾಗಿತ್ತಲವೆ" ಎಂದ ಸೀರ.

"ಅವುನಿಗ್ಯಾವುದೂ ಅವುಮಾನ ಅನ್ನದಿಲ್ಲ ಕಣೊ. ಅವುನಾಡೋ ಆಟದ್ವಳಿಕೆ ಈ ಸಿದ ರಾಮಯ್ಯನೂ ಹೋಗಿ ಸೇರಿಕಂಡು ಪಾರ್ಟಿ ಯೋರಿಂದ್ಲೇ ಬೈಸಿಗಂಡ. ಆಟೊತ್ತಿಗೆ ಕುಮಾರ ಸ್ವಾಮಿ ಹಿಂದೆ ಹೋಗಿದ್ದ ಶಾಸಕರು ಸಸ್ಪೆಂಡಾಗಿ ಅಳತಾ ಕುಂತಿದ್ರು."

"ಅದ್ಯಾಕಳತಾಯಿದ್ರುಲಾ?" ಎಂದಳು ಜುಮ್ಮಿ.

"ಆಳದಿಲವೇನೆ ಮತ್ತೆ, ಎಡೂರಪ್ಪ ಅವುರ ಕ್ಷೇತ್ರಗಳಿಗೆ ಯಾವ ಅನುದಾನನೂ ಕೊಡದೆ, ಜನ ಕೈಲ್ಲ ಯಮ್ಮೆಲ್ಲೆಗಳ ಬೈಕಂಡು ತಿರಗಂಗೆ ಮಾಡಿದ್ದ. ಬರನ ಅಂದ್ರೆ ಮನಿಲ್ಲ, ಉಣ್ಣನ ಅಂದ್ರೆ ಊಟಿಲ್ಲ ಅಂತ ನ್ಯರೆ ಸಂತ್ರಸ್ತರು ಆಳತಿದ್ರು ನೋಡು, ಅಂತ ದೊಂದು ಸ್ಥಿತಿ ಬಂದಿತ್ತು ಆ ಶಾಸಕರಿಗೆ. ಅಲ್ಲ, ಅಂತ ದೊಂದು ಕ್ಯಟ್ಟ ಕಾಲ ತಂದು ಮಡಗಿದ್ದ ಕುಮಾರಣ್ಣ ನವುಕೆ. ಅದ್ಕೆ ಪಾಪ ಆಳತಿದ್ರೊ."

"ಈ ಗಲಾಟಿಲಿ ಕುಮಾರಣನ ಸುಳಿವೇ ಇರಲಿಲ್ಲ ಅಲವೆ?"

"ಅವುನ ಸುಳಿವಿಲ್ಲ ಅಂದ್ರೆ ರಾಧಿಕನ ಮನೆಲಿ ಮನಿಗಿರತನೆ ಅಂತ ಕಣೆ."

"ಆಹಹ, ನೋಡಿದೋನಂಗೆ ಸುಳ್ಳೆಳತಿಯಲ್ಲಾ ನೀನು."

"ಸುಳ್ಳಲ್ಲ ಕಣೆ. ದೇವರಾಣೆಗೂ. ಅವುನು ಮುಖ್ಯ ಮಂತ್ರಿಯಾಗಿದ್ದಾಗ ಎಂ.ಪಿ. ಪ್ರಕಾಶ್ ಹೊಂಮಿನಿಸ್ಟ್ರಾಗಿದ್ರು. ಆಗ ಯಾವದೋ ಒಂದು ಕ್ಯಲಸಕೆ ಮುಖ್ಯಮಂತ್ರಿ ಮಾತ ಕೇಳಬೇಕಾಗಿತ್ತಂತೆ. ಈ ಎಂ.ಪಿ. ಪ್ರಕಾಶ್ ಇಡೀ ಪೊಲೀಸ್ ಇಲಾಖೆಗೆ ಮೆಸೇಜ್ ಮಾಡಿ 'ಮುಖ್ಯಮಂತ್ರಿ ಎಲ್ಲಿದ್ರೂ ನನಿಗೆ ತಿಳಿಸಿ' ಅಂದ್ರೆ, ಯಾವು ಪೊಲೀಸು ಎಲ್ಲವುನೆ ಅನ್ನದ ಹೇಳಲಿಲ್ಲ ವಂತೆ. ಕಡಿಗೆ ಕುಮಾರಣ್ಣನ ಪಿ.ಎ. ಕಾಂಟ್ಯಾಕ್ಟ್ ಮಾಡಿದಾಗ 'ಕುಮಾರಣ್ಣ ರಾಧಿಕನ ಮನೇಲಿ ಮನಿಗ್ಯವುರೆ. ಅದೇನಾಗಬೇಕು ಹೇಳಿ, ಅಮ್ಯಾಲೇಳ್ತಿನಿ' ಅಂದನಂತೆ. ಆಗ ಎಂ.ಪಿ. ಪ್ರಕಾಶ್ 'ಸರಕಾರ ಹೋಗಂಗದೆ. ಎದ್ದು ಬಂದು ಸರಿಮಾಡಕ್ಕೇಳಪ್ಪ' ಅಂದರಂತೆ. ಆಗ ಕುಮಾರಣ್ಣ, 'ನನಿಗೀಗ ಟೈಮಿಲ್ಲ. ನಮ್ಮಪ್ಪನಿಗೇಳಿ' ಅಂದನಂತೆ."

"ನಿಜವೇನ್ಲ ನೀನೇಳತಯಿರೊ ಮಾತು?"

"ನಿಜವೆ ಇರಬೇಕು ಬುಡೈ. ಅದಕೆ ಪುರಾವೆ ಅಂದ್ರೆ ಅವುನಿಗುಟ್ಟಿರೊ ಮಗುವೆ ಸಾಕ್ಷಿ. ಅಲವೇನ್ಲ ಉಗ್ರಿ" ಎಂದ ಸೀರ.

"ನೋಡು ಸೀರ ಮಾವನಿಗೆ ಹೊಳಿಯೋ ಸತ್ಯ ನಿನಿಗೊಳಿಯೊದಿಲ್ಲ. ಈಗ್ಲು ರಾಜ್ಯಪಾಲ ಸರಕಾರ ಕೆಡವಿ ರಾಜ್ಯಪಾಲರ ಆಡಳಿತ ತಗಂಬನ್ನಿ ಅಂತ ಕೇಂದ್ರಕೆ ಅರ್ಜಿ ಬರದು ಕಾಯ್ತಾಯಿದ್ದಾಗ ಕಾಂಗ್ರೆಸಿನವು ಮುಕುಳಿ ಹರಕಂಡವೇ ಹೊರತು ಕುಮಾರಣ್ಣನ ಟೀಮು ಬಾಯಿಬುಡ್ಲಿಲ್ಲ."

"ಅದ್ಯಾಕ್ ಸುಮ್ಮನಿದ್ರು" ಎಂಬ ಅನುಮಾನದ ಮಾತು ಕಾಳಮಾವನ ಬಾಯಿಂದ ಜಾರಿತು.

"ಯಾರು ಸೈಲೆಂಟಾಗಿದ್ರು ದ್ವಡಪ್ಪ?" ಎಂದುಕೊಂಡು ವಾಟಿಸ್ಸೆ ಬಂದ.

"ಈಗ ನ್ಯಡದ ಗಲಾಟಿಲಿ ಕುಮಾರಣ್ಣ ಸುಮ್ಮನಿದ್ದನಂತಲ್ಲಾ?" ಎಂದಳು ಜುಮ್ಮಿ.

"ರಾಜಕಾರಣದಲ್ಲಿ ಕೆಲವು ಟೈಮು ಮಾತಾಡ ಬೇಕಾಯ್ತದೆ, ಅಂಗೆ ಸೈಲೆಂಟಾಗೂ ಇರಬೇಕಾಯ್ತದೆ ಕಣಕ್ಕ."

"ಅದೆ ಯಾಕ್ ಸುಮ್ಮನಿದ್ದ ಹೇಳ್ಳ."

"ರಾಜ್ಯಪಾಲ ಕಳಿಸಿರೊ ಅರ್ಜಿ ಪ್ರಕಾರ ಸರಕಾರ ಹೋಗೇ ಹೋಯ್ತದೆ. ಆಗ ಇಡೀ ಲಿಂಗಾಯಿತ್ರ ಕಾಂಗ್ರೆಸ್ಸಿನೋರ ಬೈಕಂಡು ಶಿವಪೂಜೆ ಮಾಡ್ತರೆ. ಅದರ ಶಾಪ ಕಾಂಗ್ರೆಸ್ಸಿನೋರಿಗೆ ತಟ್ಟಬೇಕೇ ವರತೂ ನಮಗೆ ತಟ್ಟಬಾರ್ದು. ಅಂಗಾಗಬೇಕಾದ್ರೆ ಇಡೀ ಜೆಡಿಎಸ್ಸು ಸೈಲೆಂಟಾಗಿರಬೇಕು ಅಂತ ಕುಮಾರಣ್ಣ ರಾಧಿಕನ ಮನೆಲಿ ಶಮಿಕಾ ಕೆ. ಸ್ವಾಮಿ ಜೊತೆ ಆಟ ಆಡಿಕಂಡಿದ್ದ ಕಣಕ್ಕ."

"ನೀನೂ ಉಗ್ರಿಯಂಗೆ ಹೇಳ್ತಿಯಲ್ಲ."

"ನೋಡಕ್ಕ ಕಂಡದ್ದೇಳಿದೆ ನಾನು. ಪುರಾಣ ಪುಂಡರಗೋಷ್ಠಿ ಕಂಡದ್ದೇಳೊ ಕೊಂಡಮಾಮ ಅಂತ ಒಂದು ಗಾದೆ ಮಾತಿದೆ. ಅದು ಕ್ಯಟ್ಟದಾಗ್ಯದೆ. ನಾನು ಸೆನ್ಸಾರ್ ಮಾಡಿ ಹೇಳಿದ್ದಿನಿ. ಈ ರಾಜ್ಯಪಾಲ ಸಂವಿಧಾನ ಹಿಡಕಂಡು, ಪ್ರತಿಸಾಲನೂ ಓದಿಕಂಡು, ಅಂಡರ್‌ಲೈನ್ ಮಾಡಿಕಂಡು, ಎಲ್ಲೆಲ್ಲಿ ಈ ಎಡೂರಪ್ಪನಿಗೆ ಬೀರುಗುಣಕೆ ಹಾಕಬೇಕೊ ಅಲ್ಯಲ್ಲ ಹಾಕಿ, ಡೆಲ್ಲಿಗೆ ಕಳಿಸಿಕೊಟ್ರೆ, ಈ ಎಡೂರಪ್ಪ ಚಿದಂಬರನ್ನೆ ಬುಕ್ ಮಾಡಿದ್ನಂತೆ. ಇದಕೇನೇಳ್ತಿ?"

"ಅಂಗರೆ ಎಡೂರಪ್ಪ ಚಿದಂಬರನಿಗೂ ದುಡ್ಡು ಕೊಟ್ಟೆನೊ?"

"ಅಂಗಲ್ಲ ಕಣೊ ಉಗ್ರಿ ನಾನೇಳಿದ್ದು. ಕರ್ನಾಟಕದ ಸರಕಾರ ತಗಿಬೇಕು ಅನ್ನೊ ದರ್ದು ಕೇಂದ್ರಕಿರಲಿಲ್ಲ."

"ಅದ್ಯಾಕಿರಲಿಲ್ಲಾ?"

"ಯಾಕೆ ಅಂದ್ರೆ ಒಂದು ಲೋಕಲ್ ಎಗ್‌ಜಾಂಪಲ್ ಕೊಡ್ತಿನಿ ಅರ್ಥ ಮಾಡಿಕೊ. ಇದೇ ನಮ್ಮೂರಲ್ಲಿ ಮೂರು ಜನ ಬಿಜೆಪಿಗಳವುರೆ. ಆ ನನಮಕ್ಕಳಿಗೆ ಅದೇನಾಗಿದ್ದತೊ ಏನೊ ಯಾವನೂ ಮ್ಯತ್ತಗೆ ಮಾತಾಡದಿಲ್ಲ, ಯಲ್ಲಾ ಎಡೂರ, ಈಶ್ವರ, ಅನಂತನಂಗೆ ಆಕಾಶಕ್ಕೆ ಕೆಳಂಗೆ ಕೂಗ್ತರೆ. ಅವುರ ಜೊತೆ ನಿನಿಗೆ ಹ್ವಡದಾಟಾಯ್ತದೆ. ಕಂಪ್ಲೇಂಟ್ ಕೊಡಕ್ಕೆ ನೀನು ಪೋಲಿಟೇಶನ್‌ಗೆ ಹೋಯ್ತಿ, ಹೋಗುವಾಗೇ ನನ್ನ ಕಂಡೋಯ್ತಿ. 'ಈ ನನ್ನಮಕ್ಕಳ ವಳಕಾಕುಸ್ತಿನಿ. ನಾನೇಳಿದೇಟಿಗೆ ಸಬ್‌ಇನ್ಸ್‌ಪೆಕ್ಟರ್ ಜೀಪ್ ತಗಂಡು ಬಂದು ತುಂಬಿಕಂಡೋಯ್ತರೆ' ಅನ್ನಕಂಡೋಯ್ತಿ, ಆದ್ರೆ ನಿನ್ನ ನೋವು, ಹತಾಶೆ, ಸಿಟ್ಟು ಆ ಇನ್ಸ್‌ಪೆಕ್ಟರು ಚಿದಂಬರನಿಗಿರಬೇಕಲ್ಲಾ, ಅವುನ್ನಾಗಲೇ ಎಡೂರಪ್ಪ ಕಾಂಟ್ಯಾಕ್ಟ್ ಮಾಡಿರತನೆ. ಈಗ್ಲು ಅಂಗೇ ಆಗೀ ಪಾಪ ಪರವೇಸ, ಸಿದ್ದರಾಮಯ್ಯ ಪರದೇಶಿಗಳ ತರ ಊರಿಗೆ ಬಂದ್ರೂ ತಲೆಮರೆಸಿಗಂಡವುರೆ. ಬಿಜೆಪಿಗಳು ಮ್ಯರಿತಾ ಅವುರೆ."

"ಇವುರು ಮ್ಯರಿತಾಯಿರದು ನೋಡಿದ್ರೆ ಹೋಗೇ ಬುಡ್ತಿವಿ ಅನ್ನಕಂಡಿದ್ರೇನೊ."

"ಊ ಕಣೊ, ಯಾವ ಬರವಸೆನೂ ಇರಲಿಲ್ಲ, ಪಾರ್ಟಿ ಆಪೀಸ್ ಮುಂದೆ ಬೆಂಕಿ ಹಾಕೋದೊಂದು ಬಾಕಿಯಿತ್ತು. ಆದ್ರೆ ಕ್ಯಟ್ಟ ಜನಕೆ ಆಯುಸ್ಸು ಜಾಸ್ತಿ. ಅಂತೂಇಂತೂ ಕುಂತೀ ಕೊಡಕುಲುಕು ರಾಜ್ಯಂ ಲೇದು ಅನ್ನಂಗಾಯ್ತು."

"ಅಂಗೆ ಆಯ್ತಪ್ಪ. ಕೇಂದ್ರದೋರೆ ಬಿಜೆಪಿಗಳ ಪರ ಇದ್ರೆ ಇವುಕಿನ್ನೆಲ್ಲಿ ರಾಜ್ಯ ಸಿಕ್ಯತೂ."

"ಕೇಂದ್ರದೋರ್‍ಯಾಕೆ ಅವುರ ಪರ ಇದ್ದರು?"

"ಪರ ಅಂತ ಅಲ್ಲ ಕಣಕ್ಕ. ಅವುರ ಪರಿಸ್ಥಿತಿನೆ ಅಂಗದೆ. ಅವುರು ಎಡೂರಪ್ಪನ್ನ ಭ್ರಷ್ಟ ಅಂತ ಬೈಯಂಗಿಲವಂತೆ. ದಿನಬೆಳಗಾದ್ರೆ ಕಾಂಗ್ರೆಸ್ ಸಪೋರ್ಟು ಮಾಡೋ ಪಾರ್ಟಿ ಮಂತ್ರಿಗಳು ಸಾವುರಾರು ಕೋಟಿ ಲಂಚ ವಡದು ಜೈಲಿ ಗೋಯ್ತಾ ಅವುರೆ. ನೋಡಾಗ್ಲೆ ಕರುಣಾನಿಧಿ ಮಗಳು ಜೈಲಿಗೆ ತಟ್ಟೆ ಜೊಂಬು ತಗಂಡೋದ್ಲು, ಇದು ಪ್ರಧಾನಿಯಾಗಿದ್ದೊನಿಗೂ ಅವುಮಾನ. ಮದ್ಲು ಒಂಥರ ಬೆಕ್ಕಿನ ತರ ಕಾಣತಿದ್ದ ಮನ ಮೋಹನ ಸಿಂಗ. ಈಗ ನೀರಿಗೆ ಬಿದ್ದು ಎದ್ದು ಬಂದ ಕೊತ್ತಿತರ ಕಾಣ್ತನೆ. ಭ್ರಷ್ಟಾಚಾರ, ಸರಕಾರದ ಅಭದ್ರತೆ, ಅವುರಿಗೇ ಹಕನಾಯಿಸಿಗಂಡಿರುವಾಗ, ಇನ್ನು ಈ ಭಾರದ್ವಾಜನ ಅರ್ಜಿ, ಕಾಂಗ್ರೆಸ್ಸಿನ ದೂರು ಯಾರ ಕೇಳ್ತರಕ್ಕ. ಅದೂ ಅಲ್ದೆ ಎಡೂರಪ್ಪ ಯಾರ್‍ನ ಅಂದ್ರುವುರ್‍ನ ಕೊಳ್ಳತಾಯಿದ್ದನಂತೆ."


"ಆ ಯಮ್ಮೆಲ್ಲೆಗಳು ಕೋರ್ಟಿಂದ ಈಚೆಗೆ ಬತ್ತಿದ್ದಂಗೆ ಖರೀದಿ ಮಾಡಿದನಂತಲ್ಲೊ?"

"ಊ ಕಣೊ ಉಗ್ರಿ. ಅದ್ಕೆ ನೋಡು ಆ ಬೇಳೂರು ಬೇವರ್ಸಿ ಕೃಷ್ಣ ಎಡೂರಪ್ಪನಿಗೆ ಯಾರಾರ ಬೋದ್ರೆ ನಾನು ಸುಮ್ಮನಿರದಿಲ್ಲ ಅಂದವುನೆ."

"ತಗಳಪ್ಪ, ಅದಪ್ಪ ವರಸೆ." ●



# ನಾಯಕ ಮತ್ತು ಅರಾಜಕ...



ಟಾಲ್‌ಸ್ಟಾಯ್ ಸತ್ತಾಗ ಗಾಂಧಿ ಒಂದು ಶ್ರದ್ಧಾಂಜಲಿ ಬರೆದರು. ಅದರಲ್ಲಿ ಏನಿದೆ ಎಂಬುದು ನನಗೆ ಗೊತ್ತಿತ್ತು; ಗಾಂಧಿ ಮತ್ತು ಟಾಲ್‌ಸ್ಟಾಯ್ ಇಬ್ಬರೂ ತಮ್ಮ ಮುದಿವಯಸ್ಸಿನಲ್ಲಿ ದೇವರ ರಾಜ್ಯಕ್ಕಾಗಿ ಹಂಬಲಿಸಿದವರು; ಟಾಲ್‌ಸ್ಟಾಯ್ ಒಂದು ಪುಸ್ತಕವನ್ನೇ ಬರೆದು "ದೇವರರಾಜ್ಯ ನಿನ್ನೊಳಗೇ ಇದೆ, ಅದನ್ನು ನಂಬಿ ಜೀವಿಸು, ಅದರಿಂದ ನಿನಗೆ ಒಳ್ಳೆಯದಾಗುತ್ತದೆ, ನೆಮ್ಮದಿ ದೊರೆಯುತ್ತದೆ" ಎಂದು ಹೇಳಿದ. ಅದು 'ನ್ಯೂ ಟೆಸ್ಟ್‌ಮೆಂಟ್' ಎಂಬ ಕ್ರಿಶ್ಚಿಯನ್ನರ ಧರ್ಮಗ್ರಂಥದಿಂದ ಬಂದದ್ದು. ಗಾಂಧಿ ಅದನ್ನು ಒಪ್ಪಿದರು. ನೆಮ್ಮದಿ ಕಂಡರು. "ಮನುಷ್ಯ ಅಹಿಂಸಾತ್ಮಕವಾಗಿ ಬದುಕಬೇಕು" ಎಂದರು. ಸತ್ಯ ಮತ್ತು ಅಹಿಂಸೆ ಅವರ ಮಂತ್ರವಾಯಿತು. ಆದರೆ ಇವತ್ತಿನವರೆಗೂ ಗಾಂಧೀಜಿಗೆ ಸತ್ಯವೆಂದರೆ ಏನು ಎಂಬುದು ನನಗೆ ಅರ್ಥವಾಗಿಲ್ಲ, ಅವರು ಟಾಲ್‌ಸ್ಟಾಯ್‌ನನ್ನೂ ತಪ್ಪಾಗಿ ತಿಳಿದಿದ್ದಾರೆ.


ಟಾಲ್‌ಸ್ಟಾಯ್ ಕುರಿತ ಲೇಖನದಲ್ಲಿ ಗಾಂಧೀಜಿ ಹೀಗೆ ಬರೆಯುತ್ತಾರೆ: "ನಲವತ್ತು ವರ್ಷಗಳ ಹಿಂದೆ ನಾನು ಸಂದೇಹವಾದ ಮತ್ತು ಅನುಮಾನಗಳ ತೀವ್ರ ರೀತಿಯ ಬಿಕ್ಕಟ್ಟಿನಲ್ಲಿ ಸಿಕ್ಕಿ ತೊಳಲಾಡುತ್ತಿದ್ದೆ. ಆ ಸಮಯದಲ್ಲಿ ನನಗೆ ಟಾಲ್‌ಸ್ಟಾಯ್ ಅವರ 'ದಿ ಕಿಂಗ್‌ಡಂ ಆಫ್ ಗಾಡ್ ಈಸ್ ವಿತಿನ್ ಯೂ (The Kingdom of God is within you)' ಎಂಬ ಪುಸ್ತಕವು ಕಣ್ಣಿಗೆ ಬಿದ್ದಿತು. ಆ ಸಮಯದಲ್ಲಿ ನಾನು ಹಿಂಸೆಯಲ್ಲಿ ವಿಶ್ವಾಸ ಹೊಂದಿದ್ದೆ, ಆ ಪುಸ್ತಕವನ್ನು ಓದಿದ ಮೇಲೆ ನನ್ನ ಸಂದೇಹ ನಿವಾರಣೆಯಾಯಿತು. ಅದು ನನಗೆ ಅಹಿಂಸಾ ತತ್ವದಲ್ಲಿ ದೃಢವಾದ ನಂಬಿಕೆಯನ್ನು ಹೊಂದುವಂತೆ ಮಾಡಿತು. ಟಾಲ್‌ಸ್ಟಾಯ್ ಅವರ ಜೀವನದಲ್ಲಿ ನನಗೆ ತುಂಬ ಹಿಡಿಸಿದ ಅಂಶವೆಂದರೆ ಅವರು ತಾವು ಏನನ್ನು ಉಪದೇಶಿಸುತ್ತಿದ್ದಾರೋ ಅದನ್ನೇ ಆಚರಣೆಯಲ್ಲಿ ತರುತ್ತಿದ್ದುದು. ಅಲ್ಲದೆ ಸತ್ಯಾನ್ವೇಷಣೆಗಿಂತಲೂ ಮಿಗಿಲಾದುದು ಬೇರಾವುದೂ ಇಲ್ಲವೆಂದೇ ಅವರು ಪರಿಗಣಿಸುತ್ತಿದ್ದರು. ಅವರ ಜೀವನದಲ್ಲಿನ ಸರಳತೆಯನ್ನೇ ತೆಗೆದುಕೊಳ್ಳಿ, ಅದೊಂದು ಅದ್ಭುತವೆಂದೇ ಹೇಳಬಹುದು:....

ಗಾಂಧೀಜಿ ಈ ಮಾತುಗಳನ್ನು ಹೇಳುವಾಗ ಕೂಡ ಟಾಲ್‌ಸ್ಟಾಯ್ ಅವರ ಕಾದಂಬರಿಗಳಲ್ಲಿ ಒಂದನ್ನು ಕೂಡಾ ಓದಿದಂತಿಲ್ಲ, ಟಾಲ್‌ಸ್ಟಾಯ್ ಮುಖ್ಯವಾಗಿ ಸಾಹಿತಿ; ಆತನ ಸತ್ಯಾನ್ವೇಷಣೆ ಲೇಖಕನೊಬ್ಬನ ಸತ್ಯಾನ್ವೇಷಣೆಯ ವೈಶಿಷ್ಟ್ಯ ಮತ್ತು ಮಿತಿಯನ್ನು ಹೊಂದಿದೆ. ಗಾಂಧೀಜಿಯ ಸತ್ಯಾನ್ವೇಷಣೆ ಆ ಬಗೆಯದಲ್ಲ. ಗಾಂಧೀಜಿ 'ಕಿಂಗ್‌ಡಂ ಆಫ್ ಗಾಡ್'ನಲ್ಲಿ ಕಂಡುಕೊಂಡದ್ದಕ್ಕೂ, ಟಾಲ್‌ಸ್ಟಾಯ್ ಕಂಡುಕೊಂಡದ್ದಕ್ಕೂ ಸಾಮ್ಯವಿದ್ದರೂ ಅವರಿಬ್ಬರ ಮೇಲಿನ ಪರಿಣಾಮ ಮತ್ತು ಫಲಶ್ರುತಿ ಬೇರೆಯಾಗಿದೆ. ಉದಾಹರಣೆಗೆ ಟಾಲ್‌ಸ್ಟಾಯ್ ತನ್ನ ಮುಪ್ಪಿನ ದಿನಗಳಲ್ಲಿ ತನ್ನ 'ವಾರ್ ಅಂಡ್ ಪೀಸ್' ಮತ್ತು 'ಅನ್ನ ಕರೇನಿನಾ' ಕಾದಂಬರಿಗಳನ್ನು ಅನೀತಿಯ ಕೃತಿಗಳೆಂದು, 'ಕಿಂಗ್‌ಡಂ ಆಫ್ ಗಾಡ್'ನ್ನು ಅಪ್ಪಾಗಿ ತೋರದಿರುವ ಕೃತಿಗಳೆಂದು ತಿರಸ್ಕರಿಸಿದ; ತನ್ನ ಮುಪ್ಪಿನ ಚಿಂತೆಯನ್ನು ಮೈಗೂಡಿಸಿಕೊಂಡ 'ರಿಸರೆಕ್ಷನ್' ಕಾದಂಬರಿಯನ್ನು ಬರೆದ. ಹಾಗೆಯೇ ಈತನ ಮುಪ್ಪಿನ ಚಿಂತನೆಯನ್ನು ನಾವು ಗಂಭೀರವಾಗಿ ತೆಗೆದುಕೊಂಡರೆ ಶೇಕ್ಸ್‌ಪಿಯರ್, ಸಾಫೋಕ್ಲೀಸ್‌ರನ್ನೂ ಒಪ್ಪಲಾಗುವುದಿಲ್ಲ. ಆದ್ದರಿಂದ ಟಾಲ್‌ಸ್ಟಾಯ್‌ನ ನಂಬಿಕೆ ಸಮಾಜಸುಧಾರಕನ ನಂಬಿಕೆಯಾಗಿ ತಪ್ಪು; ಕಾದಂಬರಿಕಾರನ ನಂಬಿಕೆಯಾಗಿ ಅಸಂಗತ. ಹಾಗೆಯೇ ಟಾಲ್‌ಸ್ಟಾಯ್ ದೇವರ ರಾಜ್ಯದಲ್ಲಿ ಸಂಚರಿಸುತ್ತಿದ್ದಾಗ ತನ್ನೆಲ್ಲ ಆಸ್ತಿಯನ್ನು ತ್ಯಾಗಮಾಡಿದ್ದು ಮತ್ತು ಸಂತನೊಬ್ಬನಂತೆ ಬದುಕಲು ಯತ್ನಿಸಿದ್ದು ಕೂಡ. ಅದು ಟಾಲ್‌ಸ್ಟಾಯ್ ತಳಮಳವನ್ನು ತೋರುತ್ತದೆಯೇ ಹೊರತು ಆತನ ಸಂತತ್ವವನ್ನಲ್ಲ. ಯಾಕೆಂದರೆ ಆತ ತನ್ನ ಆಸ್ತಿಯನ್ನು ಪೂರ್ತಿ ತ್ಯಾಗ ಮಾಡಲಾಗಲಿಲ್ಲ; ಆತ ತನ್ನ ಮುದಿ ವಯಸ್ಸಿನಲ್ಲಿ ಬರೆದ ಒಂದು ನೀಳ್ಗತೆಯಲ್ಲಿ ಏನಾಗುತ್ತದೆ ಎಂದರೆ-ಮದುವೆಯಾಗಿ ನೆಮ್ಮದಿಯಾಗಿರುವ ಸಜ್ಜನನಾದ ಒಬ್ಬನು ತನ್ನ ತೋಟದ ಹೆಣ್ಣೊಬ್ಬಳ ಸೌಂದರ್ಯಕ್ಕೆ ಮರುಳಾಗಿ ದಿಗ್ಭ್ರಮೆಗೊಳ್ಳುತ್ತಾನೆ. ಮನುಷ್ಯನ 'ಸಂತತ್ವ'ದ ದೌರ್ಬಲ್ಯ ಮತ್ತು ಹುಡುಗಿಯ ಚೈತನ್ಯದಾಯಕ ವ್ಯಕ್ತಿತ್ವ ಅವನನ್ನು ಗೊಂದಲಕ್ಕೀಡುಮಾಡುತ್ತದೆ.

ಗಾಂಧೀಜಿಯವರ ಪ್ರಯೋಗಗಳಲ್ಲಿ ಟಾಲ್‌ಸ್ಟಾಯ್ ಒಂದು ಗುರುತಿನ ಕಲ್ಲು ಮಾತ್ರ. ಹಾಗೆಯೇ ಗಾಂಧೀಜಿ ಯವರ ನಂಬಿಕೆಯ ದೋಷವನ್ನು ಇದು ತೋರುತ್ತದೆ. ಅವರು ತಮ್ಮ ಪ್ರಯೋಗಗಳಿಂದಾಗಿ ಕೆಲವು ನಿಶ್ಚಲ ನಂಬಿಕೆಗಳನ್ನು ತಲುಪಿದ್ದರು; ಟಾಲ್‌ಸ್ಟಾಯ್ ತನ್ನ ಪ್ರಯೋಗಗಳ ಕಾಲದಲ್ಲಿ ಬಿರುಗಾಳಿಗೆ ಸಿಕ್ಕು ಪರಿತಪಿಸುತ್ತಿದ್ದ. ಮನುಷ್ಯ ಎಂಬ ಜಟಿಲ ಅವಸ್ಥೆಯ ಕಷ್ಟಗಳನ್ನು ಕಂಡು ಹಲುಬಿದ ಟಾಲ್‌ಸ್ಟಾಯ್ ಹೇಳಿದ್ದು, ತನ್ನ ಶಿಷ್ಯರಿಗೆ ತಾನು ಮಾದರಿಯಾಗಲು ಯತ್ನಿಸಿದ್ದು ಅಷ್ಟು ಮುಖ್ಯವಲ್ಲ; ಆತ ತನ್ನ ಮುಪ್ಪಿನಲ್ಲಿ ಒದ್ದಾಡಿದ್ದು ಮುಖ್ಯ.

ಒದ್ದಾಡಿದ್ದು, ಪರಿತಪಿಸಿದ್ದು ಒಂದು ಮಾನಸಿಕ ಸ್ಥಿತಿ ಮತ್ತು ಚಿಂತನೆ ಕೂಡ. ಅದು ಗಾಂಧೀಜಿಯವರಿಗೆ ತಿಳಿಯುತ್ತಿರಲಿಲ್ಲ. ಹಾಗೆಯೇ ಒಬ್ಬ ನಾಯಕನ ಈ ಅಪ್ಪಟ ನೈತಿಕ ನಿಲುವು ಆತನ ಸಹಜ ವ್ಯಕ್ತಿತ್ವದ ಶಿಷ್ಯರಲ್ಲಿ ಹುಟ್ಟಿಸುವ ಅನುಮಾನ ಮತ್ತು ದಿಗಿಲು ಕೂಡ ಅವರಿಗೆ ಗೊತ್ತಾಗುತ್ತಿರಲಿಲ್ಲ..

ಮೇ 17,1995



# ನರಕ ನರಕವಾಗಿಯೇ ಉಳಿಯಿತು!

ರಾಮಾಯಣದ ಕತೆ ಕೇಳದವರೇ ಇಲ್ಲ. ಲಂಕಾ ದಹನದ ನಂತರದ ಯುದ್ಧದಲ್ಲಿ ಇಂದ್ರಜಿತ್ ಹತನಾದ. ಮಗನ ಸಾವಿನ ಸುದ್ದಿ ತಿಳಿದ ರಾವಣೇಶ್ವರ ಕೋಪೋದ್ರಿಕ್ತನಾದ. ಅದೇ ಮನಸ್ಥಿತಿಯಲ್ಲಿಯೇ ಯುದ್ಧ ಭೂಮಿಗೆ ಧಾವಿಸಿದ. ಲಕ್ಷ್ಮಣನ ಮೇಲೆ ಅಸ್ತ್ರ ಪ್ರಯೋಗಿಸಿದ. ಲಕ್ಷ್ಮಣ ಮೂರ್ಛೆ ಹೋದ. ರಾವಣ ನ್ಯಾಯಪರ. ಮೂರ್ಛೆಯಲ್ಲಿದ್ದವನನ್ನು ಸಾಯಿಸಲು ಮನಸ್ಸು ಮಾಡಲಿಲ್ಲ. ಔಷಧೋಪಚಾರ ಮಾಡಲು ಸಮಯಾವಕಾಶ ನೀಡಿದ. ಈ ಮೂರ್ಛೆ ರೋಗಕ್ಕೆ ಮದ್ದು ಮಹಾ ಔಷಧಿ ಪರ್ವತದಲ್ಲಿತ್ತು. ಹನುಮಂತ ಅಲ್ಲಿಗೆ ಹಾರಿದ. ಪರ್ವತವೆಲ್ಲವನ್ನು ತಡಕಾಡಿದರೂ ಅವನಿಗೆ ಬೇಕಾದ ಸಂಜೀವಿನಿ ಸಸ್ಯ ಗುರುತಿಸಲಾಗಲಿಲ್ಲ. ಪರ್ವತವನ್ನೇ ಹೊತ್ತು ತಂದ. ಅದರಲ್ಲಿದ್ದ ಸಂಜೀವಿನಿ ಸಸ್ಯದಿಂದ ಉಪಚಾರ ಮಾಡಲಾಗಿ ಲಕ್ಷ್ಮಣ ಮೂರ್ಛೆಯಿಂದ ಎಚ್ಚೆತ್ತ. ಯುದ್ಧಕ್ಕೆ ಸಿದ್ಧನಾದ. ಮೂರ್ಛೆ ಹೋದರೆ ಆಯಾಸ ಆಗಿರುತ್ತದೆ; ತಕ್ಷಣವೇ ಮೊದಲಿನಂತೆ ಆಗಲು ಸಾಧ್ಯವಿಲ್ಲ ಎಂದು ಕೆಲವರಿಗೆ ಅನುಮಾನ ಕಾಡುವುದು ಸಹಜ. ಲಕ್ಷ್ಮಣ ಮೂರ್ಛೆ ಹೋಗಿದ್ದ ಎಂದರೆ ಕೋಮಾ ಸ್ಥಿತಿಯಲ್ಲಿದ್ದಂತೆ ಅಂತೆ. ಕೋಮಾಸ್ಥಿತಿಯಲ್ಲಿದ್ದವರು ಎಚ್ಚರಗೊಂಡರೆ ಮೊದಲಿನ ಸ್ಥಿತಿಗೇ ಬರುತ್ತಾರಂತೆ. ಇದನ್ನು ಬಲ್ಲವರು ಹೇಳುತ್ತಾರೆ.

ಇದನ್ನು ಯಾಕೆ ಹೇಳುವುದಕ್ಕೆ ಬಂದೆ ಎಂದರೆ ಯಡ್ಯೂರಪ್ಪನವರ ಸರ್ಕಾರವನ್ನು ಭಾರದ್ವಾಜರು ಕೋಮಾಸ್ಥಿತಿಯಲ್ಲಿಟ್ಟಿದ್ದರು. ಅದಕ್ಕೆ ಸಂಜೀವಿನಿ ಕೇಂದ್ರ ಸರ್ಕಾರದ ಬಳಿ ಇತ್ತು. ಅದು ಸರ್ಕಾರವನ್ನು ಸಾಯಿಸಲೂಬಹುದಿತ್ತು, ಬದುಕಿಸಲೂಬಹುದಿತ್ತು. ಎರಡಕ್ಕೂ ಸಾಕಷ್ಟು ಸಾಕ್ಷ್ಯಾಧಾರಗಳು ಇದ್ದವು. ಪುರಾವೆಗಳ ಆಧಾರದ ಮೇಲೆ ಕ್ರಮ ಕೈಗೊಂಡರೆ ಸಾವಿನ ಕಡೆಗೆ ಹೆಚ್ಚಿನ ಬಲ ಇತ್ತು. ಆದರೆ ಕೋಮಾದಲ್ಲಿದ್ದವನನ್ನು ಸಾಯಿಸಿದ ಕಟುಕರಿವರು ಎಂಬ ದೂಷಣೆಗೆ ಗುರಿ ಯಾಗಬೇಕಿತ್ತಲ್ಲದೆ ಲಿಂಗಾಯತ ಸಮುದಾಯ ಯಡ್ಯೂರಪ್ಪನವರನ್ನು 'ಹುತಾತ್ಮ' ಪದವಿಗೇರಿಸುವ ಅಪಾಯ ಇತ್ತು; ಅಲ್ಲದೆ ಕೇಂದ್ರದ ವಿಪಕ್ಷಗಳು ಅವರನ್ನು ಸುಲಭವಾಗಿ ಸಾಯಿಸಲೂ ಅವಕಾಶ ನೀಡುತ್ತಿರಲಿಲ್ಲ. ಲೋಕಸಭೆ 'ಸಾವೇ ಸರಿಯಾದ ಶಿಕ್ಷೆ' ಎಂದು ತೀರ್ಮಾನಿಸಿದರೂ ವಿಪಕ್ಷಗಳೆಲ್ಲ ರಾಜ್ಯಸಭೆಯಲ್ಲಿ ಒಂದಾಗಿ, 'ಈ ಸಾವು ನ್ಯಾಯವೆ' ಎಂದು ರಾಗವಾಗಿ ಪ್ರಶ್ನಿಸಿ ಬದುಕಿಸುವುದು ಖಚಿತ ಆಗಿತ್ತು. ಕೇಂದ್ರ ವೈದ್ಯರು ಇಂತಹ ಸಾಧಕಬಾಧಕಗಳನ್ನೆಲ್ಲ ತುಲನಾತ್ಮಕವಾಗಿ ನೋಡಿ ತಕ್ಷಣಕ್ಕೆ ಜೀವದಾನವನ್ನ ಅನುಗ್ರಹಿಸಿದರು.

ಕೋಮದಿಂದ ಎಚ್ಚರಗೊಂಡವರು ಮತ್ತೆ ತನ್ನ ಎಂದಿನ ಶೈಲಿಯಲ್ಲೇ ಮುಂದುವರಿಯುತ್ತಾರೆ ಎಂಬುದನ್ನು ತಿಳಿದು ಆತಂಕವಾಯಿತು. ಹಾಗೇ ಕಣ್ಣುಮುಚ್ಚಿದೆ.

ಓರ್ವ ಮುಖ್ಯಮಂತ್ರಿ.

ಸದಾ ಅವನ ಬಾಯಲ್ಲಿ ಅಭಿವೃದ್ಧಿ ಮಂತ್ರ!

ನಾವು ಸದಾ ಏನು ಆಲಿಸುತ್ತೇವೋ ಅದೇ ಆಗುತ್ತಂತೆ.

ಸುಳ್ಳಾಗಲಿಲ್ಲ ಮುಖ್ಯಮಂತ್ರಿಯ ಮಾತು. ಅವನ ಅಭಿವೃದ್ಧಿ ಆಯಿತು! ಜನರ ಒಡಲ ಸಂಕಟ ಹೆಚ್ಚಾಯಿತು!


ತಾನು ಚಿರಂಜೀವಿ ಎಂದು ತಿಳಿದಿದ್ದ ಅವನು.

ಅವನಿಗೂ ಸಾವು ಬಂತು.

ನರಕದಲ್ಲಿ ಅವನಿಗೆ ದೊರೆಯಿತು ಸ್ಥಾನ.

ವಿಷಯ ತಿಳಿದಾಗ ಕೋಪೋದ್ರಿಕ್ತನಾದ. ಆರೂವರೆ ಕೋಟಿ ಜನರ ಪ್ರತಿನಿಧಿ ನಾನು. ಮುಖ್ಯಮಂತ್ರಿಯಾಗಿದ್ದ ನನಗೆ ನ್ಯಾಯವಾಗಿ ಸ್ವರ್ಗದಲ್ಲಿ ಸ್ಥಾನ ಮೀಸಲಾಗಿಡಬೇಕು. ನನಗೂ ನರಕ ಎಂದರೆ ಏನು ಅರ್ಥ?

ಯಮಧರ್ಮನ ಬಳಿ ಹೋಗಿ ತನ್ನ ಅಹವಾಲು ಹೇಳಿದ.



'ನೀನು ಜನಪ್ರತಿನಿಧಿ ಅಲ್ಲವೆ?' ಯಮ ಕೇಳಿದ.

'ಖಂಡಿತವಾಗಿ.'

'ಚುನಾವಣೆಯೇ ನಿನ್ನ ಉಸಿರು ಅಲ್ಲವೆ.?'

'ಸಂದೇಹವೇ ಇಲ್ಲ.'

'ಹಾಗಾದರೆ ಇದೇ ನಿನಗೆ ತಕ್ಕನಾದ ಸ್ಥಳ.'

'ಹಾಗೆಂದರೇನು ಯಮಧರ್ಮ? ಏಕೆ ಹೀಗೇಳುತ್ತಿದ್ದೀರಿ?'

'ಏಕೆಂದರೆ ಸ್ವರ್ಗದಲ್ಲಿ ನೀನು ಒಂಟಿ. ನಿನ್ನ ಆಪ್ತೇಷ್ಟರೆಲ್ಲ ಇಲ್ಲಿಯೇ ಇದ್ದಾರೆ' ಎಂದು ತಣ್ಣಗೆ ಹೇಳಿದ ಯಮರಾಜ.

ಯಮಲೋಕದಲ್ಲಿ ಚುನಾವಣೆ ಬಂತು. ಬಹುಮತ ಸಿಕ್ಕಿತು ಅವನಿಗೆ.

'ನರಕವನ್ನೇ ಸ್ವರ್ಗ ಮಾಡುತ್ತೇನೆ' ಘೋಷಿಸಿದ ಅವನು. ಜೈಕಾರ ಹಾಕಿದರು ಯಮವಾಸಿಗಳು.

ವರ್ಷಗಳು ಉರುಳಿದುವು.

ಯಮವಾಸಿ ಆತ. ಮಾತು ಬದಲಾಯಿಸಿದರೆ ಮೆಚ್ಚುವನೆ ಯಮಧರ್ಮ? 'ನರಕವನ್ನೇ ಸ್ವರ್ಗ ಮಾಡುತ್ತೇನೆ' ಜಪಿಸುತ್ತಲೇ ಇದ್ದ! ಯಮವಾಸಿಗಳು ನಂಬುತ್ತಲೇ ಬಂದರು! ಆದರೆ....

'ನರಕ ನರಕವಾಗಿಯೇ ಉಳಿಯಿತು!'

## ಊರೋಲೋಗೊಮಾರಿ.....



ಎಚ್.ಎಲ್. ಕೇಶವಮೂರ್ತಿ

## ಅಣಕ

ಗಜಗಾತ್ರದ ಮಂತ್ರಿಮಂಡಲ ಮಾಡಿಕೊಂಡು ಬುದ್ಧದೇವಭಟ್ಟಾಚಾರ್ಯ ಸರ್ಕಾರದ ಬೊಕ್ಕಸಾನೆ ಬಂದು ಮಾಡ್ತ ಅವ್ನೆ. ಅಜ್ಜಿ ನೂತದ್ದೆಲ್ಲ ಅಜ್ಜನ ಉಡುದಾರಕ್ಕೆ ಆಯ್ತು ಅನ್ನೊ ಹಂಗೆ. ಅವರ ಸಂಬಳ ಸಾರಿಗೆ ಅಂತಾವ ಖಜಾನೆ ಹಣಾನೆಲ್ಲ ಸುರೀತಾ ಅವ್ನೆ, ಈ ರಾಜ್ಯ ಆಳಾಕೆ ಈಸೊಂದು ಮಂತ್ರಿಗಳು ಯಾಕೆ ಬೇಕು ಎಂದೆಲ್ಲ ಮಮತಾ ದೀದಿ ಚುನಾವಣೆ ಸಂದರ್ಭದಲ್ಲಿ ಹೇಳ್ತಿದ್ದರಂತೆ. ಮತದಾರ ಮಹಾಪ್ರಭುಗಳು ಇವನ್ನೆಲ್ಲ ನಂಬಿದ್ರಂತೆ. 'ದೀದಿ ಹೇಳೋದ್ರಲ್ಲೂ ನ್ಯಾಯ ಐತೆ. ಅಂಗೈ ಅಗಲ ರಾಜ್ಯ ಆಳಾಕೆ ಯಾಕಿಷ್ಟು ಜನ ಮಂತ್ರಿಗಳು ಬೇಕು? ದೀದಿ ಮುಖ್ಯಮಂತ್ರಿ ಆದರೆ ಚಿಕ್ಕಚೊಕ್ಕ ಮಂತ್ರಿ ಮಂಡಳ ರಚಿಸ್ತಾರೆ. ರಾಜ್ಯದಲ್ಲಿ ಅಭಿವೃದ್ಧಿ ಹೊಳೇನೆ ಹರಿಸ್ತಾರೆ, ಅಂತಾವ ಮತಗಟ್ಟೆಗೆ ಹೋಗಿ ದೀದಿಗೆ ಮತ ತುಂಬಿದರಂತೆ. ಈಗ ನೋಡಿದ್ರೆ ಮುವ್ವತ್ತೆಂಟು ಜನರ ಮಂತ್ರಿ ಮಂಡಳ ರಚಿಸವ್ರೆ. ಇನ್ನೂ ಆರು ಜನ ಸೇರುಸ್ಕತೀನಿ ಅಂತವ್ರೆ. ಈಯಮ್ಮ ಅಧಿಕಾರಕ್ಕೆ ಬಂದು ಮಾಡಿದ ಮೊದಲನೆ ಕೆಲಸ ಅಂದ್ರೆ ವಾಗ್ದಾನ ಮುರಿಯೋದು ಎಂದೆಲ್ಲ ಕಮ್ಯುನಿಸ್ಟರು ತಮ್ಮ ಪತ್ರಿಕೆಗಳಲ್ಲಿ ದೀದಿ ಮಾನ ಇನಾಯ ಮಾಡ್ತಾ ಕುಂತವ್ರಂತೆ.

ಅಲ್ಲಾ ದೀದಿ ಮಾಡಿದ್ರಲ್ಲಿ ತಪ್ಪೇನದೆ ಅಂತ ಅರ್ಥವಾಗೊಲ್ಲು. ಕಮ್ಯುನಿಸ್ಟರ ಮಂತ್ರಿಮಂಡಲ ನೋಡಿದಾಗ 'ಅಬಾ ಅಬಾ ಏಸೊಂದು ಜನ ಅವ್ರೆ. ಇವರ್ನೆಲ್ಲ ಸಾಕೋದು ಅಂದ್ರೆ ಹುಡುಗಾಟ ಆಗೋಯ್ತ, ಮಸಿದುಡ್ದಾಯ್ತದ, ಅನ್ನೊ ಲೆಕ್ಕಾಚಾರ ದೀದಿ ತಲೆಗೆ ಬಂದಿತ್ತು, ಅದ್ಕೆ ಹಂಗಂದಿದ್ರು. ಈಗ 'ರಾಜ್ಯಭಾರ ಮಾಡೋದು ಅಂದ್ರೆ ಹುಡುಗಾಟವಾ. ಎಷ್ಟು ಜನ ಇದ್ರೂ ಸಾಲ್ದು' ಅನ್ಸದೆ. ಅದ್ಕೆ ಹಿಂಗೆ ನಡ್ಕಂಡವ್ರೆ. ಅಧಿಕಾರಕ್ಕೆ ಬರೋಕೆ ಮುಂಚೆ ಎಂತೋರ್ಗೂ ಆಡಳಿತಗಾರರ ಹೆಜ್ಜೆ ಹೆಜ್ಜೆಗೂ ತಪ್ಪೇ ಕಾಣಿಸ್ತವೆ. ಅಧಿಕಾರಕ್ಕೆ ಬಂದ್ಮೇಲೆ 'ಇಂತಹ ಮನೆ ಹಾಳ್ರ ಕೈಗೆ ಮತ್ತೆ ಅಧಿಕಾರ ಸಿಕ್ಕಬಾರದು. ಮುಂದಿನ ಚುನಾವಣೇಲೂ ನಾವೇ ಗೆಲ್ಬೇಕು. ದುಡ್ಡಿಲ್ದೆ ಬರೀಕೈಲಿ ಚುನಾವಣೆ ಮಾಡಾಕಾಯ್ತದಾ. ಹಣ ಮಾಡೊ ದಾರೀನೂ ಹುಡಿಕೋಬೇಕು' ಅಂತೆಲ್ಲ ಅನ್ನಿಸೆ ಹತ್ತದೆ. ರಾಜಕೀಯದಲ್ಲಿ ಇದೆಲ್ಲ ಇದ್ದಿದ್ದೇಯ. ಇಷ್ಟಕ್ಕೇ ಮಮತಾ ದೀದಿನ ಚುಚ್ಚೊ ಕೆಲ್ಸ ಮಾಡಬಾರದು. ಯಾರೂ ಮಾಡದ್ದ ಅವ್ರು ಮಾಡ್ತಾ ಅವ್ರಾ ಅಂತೀನಿ.

ಇಷ್ಟಕ್ಕೂ ಚುನಾವಣೆ ಆಶ್ವಾಸನೆಗಳನ್ನೆಲ್ಲ ಜಾರಿಗೆ ತರಲೇಬೇಕು ಅಂತ ಹೊಂಟ್ರೆ ಊರಲೋಗೋ ಮಾರಿನ ಮನೆಗೆ ಬಂದುಹೋಗು ಅಂತ ಕರ್ದಂಗಾಯ್ತದೆ. ಕರುಣಾನಿಧಿಯವರ ಗೋಳನ್ನೇ ನೋಡಿ. ಏನೋ ಜನ ಟಿವಿ ನೋಡ್ಕಂಡು ತಮ್ಮ ಕಷ್ಟ ಮರೀಲಿ ಅನ್ನೊ ಆಸೆಯಿಂದ ಕಲರ್ ಟಿವಿ ಕೊಟ್ರು. ಬಿಟ್ಟಿ ಟಿವಿ ಏನೋ ಸಿಕ್ತು ಸರಿ. ಆದ್ರೆ ಕೇಬಲ್‌ನೋರು ನಾವು ಬಿಟ್ಟಿ ಕನೆಕ್ಷನ್ ಕೊಡಾಕಾಗಾಕಿಲ್ಲ ಅಂತ ತಾರಮ್ಮಯ್ಯ ಆಡಿದ್ರು. ಕೇಬಲ್‌ನೋರು ಇಲ್ಲಾ ಅಂದ ಮೇಲೆ ಬಣ್ಣದ ಟಿವಿ ಆದ್ರೇನು ಪೂಜೆ ಮಾಡಾಕಾಯ್ತದ. ಲಾಳಸಿಕ್ತು ಅಂತ ಕುದುರೆ ಸಾಕಿದಂಗಾಯ್ತು ಅವ್ರ ಕತೆ. ಮನೇಲಿ ಟಿವಿ ಅದಲ್ಲ ಅನ್ನೊ ಸಂಕಟಕ್ಕೆ ಕೇಬಲ್ ಕನೆಕ್ಷನ್ ಕೊಡ್ಸಿ ತಿಂಗಳೂ ಅವರು ಕೇಳಿದಷ್ಟು ಹಣ ಪಿಕ್ತಾ ಅವ್ರಂತೆ. ಇಷ್ಟೆ ಆಗಿದ್ರೆ ಪರವಾಗಿರಲಿಲ್ಲ, ನೂರೆಂಟು ಚಾನೆಲ್‌ಗಳು ಬರ್ತಾವೆ ಅಲ್ವ ಅವೆಲ್ಲ ಕರುಣಾ ಸರ್ಕಾರದ ಬಾಲ ಹಿಡಿಯೋವೆ ಅಲ್ವಲ್ಲಾ, ಅವರ ಸರ್ಕಾರ ಅಂದ್ರೆ 'ಬುಸ್' ಅನ್ನೋವ್ರೂ ಇದ್ದವಂತೆ. ಇಂತಹವೆಲ್ಲ ಇಲಿ ಹೋಯ್ತು ಅಂದ್ರೆ ಹುಲೀನೆ ಹೋಯ್ತು ಅಂತ ಕಣಿ ಹೇಳ್ದಂಗೆ ಹೇಳುತ್ತಿದ್ದವಂತೆ. ಬಿಟ್ಟಿ ಟಿವಿ ಒಡೆಯರು ಇದ್ರಲ್ಲ ಅವ್ರುಗೆ ಹಿಂಗೆ ಕಣಿ ಹೇಳೋರ್ದೆ ಕಿವಿಗೆ ಇಂಪಾಗಿತ್ತಂತೆ. ಓಹೋ ಇವನ್ನ ಏನೋ ಅನ್ಕೊಂಡಿದ್ವಲ್ಲಾ ಇಂತ ಮೋಸಗಾರ್ನ ಇವ್ನ ಅಂತಾವ ಸಮಯ ಬರ್ಲಿ ಅಂತ ಕಾಯ್ತಿದ್ರಂತೆ. ಚುನಾವಣೆ ಬಂತಲ್ಲ, ಅಮ್ಮನಿಗೆ ಒತ್ತಿ ಕರುಣಾರನ್ನೆ ಮೂಲೆಗೆ ಒತ್ತರಿಸಿದರಂತೆ.

ಇದೊಂದೇ ಅನಾಹುತ ಅಂದಿಕೋಬೇಡಿ. ಕನಿಮೋಳಿ ಲಂಚದ ಆಪಾದನೆ ಹೊತ್ತು ಜೈಲು ಸೇರಿದಳಲ್ಲಾ ಆಗ ಕರುಣಾನಿಧಿ 'ನನ್ನ ಮಗಳು ಅಪ್ಪಟ ಚಿನ್ನ. ಆ ಮಗು ಹಂಗೆಲ್ಲ ಮಾಡೋಳಲ್ಲ, ರಾಜಕೀಯ ಷಡ್ಯಂತ್ರ ಇದರ ಹಿಂದೆ ಇದೆ' ಅಂದ್ರೂ ಯಾರೂ ಒಪ್ಪೇ ಒಲ್ಲರಂತೆ. 'ಟಿವೀಲೆ ಬಂದದೆ' ಅಂತಾವ ಬಿಟ್ಟಿ ಟಿವಿ ಒಡೆಯರು ಕರುಣಾ ಟಿವಿನೆ ಸಾಕ್ಷಿಯಾಗಿಡುತ್ತಾ ಇದ್ದಾರಂತೆ!


ಅದಕ್ಕೆ ನೋಡಿ. ಚಾಣಾಕ್ಷ ರಾಜಕಾರಣಿಗಳು ಆಶ್ವಾಸನೆ ನೀಡುತ್ತಾರೆಯೇ ಹೊರತು ಅದನ್ನ ಜಾರಿಗೊಳಿಸುವುದಿಲ್ಲ!

# ಗದಗ ಮೂಲದ ಶಿವಾಜಿ ವೀರ ಮಾಹೇಶ್ವರ ಪಂಥದವನೇ?

"ಅಣ್ಣಿಗೇರಿ ತಲೆಬುರುಡೆ ಹಾಗೂ ಶಿವಭಕ್ತರ ಆತ್ಮಾಹುತಿ" ಬಗ್ಗೆ ಡಾ.ಕಲಬುರ್ಗಿಯವರ ಸಂದರ್ಶನ ಬಹಳಷ್ಟು ಬೆಳಕು ಚೆಲ್ಲುತ್ತದೆ(ಲಂಕೇಶ್ 25–5–2011).

ಈ ಲೇಖನ ಓದುವಾಗ ನನಗೆ ನಾಲ್ಕು ವರ್ಷಗಳ ಹಿಂದೆ ಸರಜೂ ಕಾಟ್ಕರ್‌ರವರು ಮೂಲ ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಿದ -'ಶಿವಾಜಿಯ ಮೂಲ ಕನ್ನಡ ನೆಲ' ಎಂಬ ಸಂಶೋಧನಾ ಗ್ರಂಥದಲ್ಲಿನ ಕೆಲವು ಅಂಶಗಳು ಇಲ್ಲಿ ಪ್ರಸ್ತುತವೆನಿಸಿದವು. ಈ ಗ್ರಂಥದ ಮೂಲ ಮರಾಠಿ ಲೇಖಕರಾದ ಆರ್.ಸಿ.ಧಾರೆಯವರು ಶಿವಾಜಿಯ ಹಿರಿಯರ ಮೂಲದ ಬಗ್ಗೆ ಹಲವಾರು ವರ್ಷ ಆಳ ಸಂಶೋಧನೆ ನಡೆಸಿ ಬರೆದ ಗ್ರಂಥವಿದು. ಈ ಸಂಶೋಧಕರ ಪ್ರಕಾರ ಛತ್ರಪತಿ ಶಿವಾಜಿಯ ಹಿರಿಯರು ರಾಜಸ್ಥಾನದ ರಜಪೂತರಾಗಿರದೇ ಮೂಲತಃ ನಮ್ಮ ಗದಗ್ ಜಿಲ್ಲೆಯ 'ಸೊರಟೂರು' ಗ್ರಾಮದವರಾಗಿದ್ದರು. ಈ 'ಸೊರಟೂರು' ಧಾರವಾಡ ಜಿಲ್ಲೆಯ ಅಣ್ಣಿಗೇರಿಗೆ ಹತ್ತಿರವಿದೆ.

ಶಿವಾಜಿಯ ಹಿರಿಯರು ಕುರುಬ ಜಾತಿಯವರಾದರೂ ಅವರ ಕುಲದೇವರು ಶ್ರೀಶೈಲ ಮಲ್ಲಿಕಾರ್ಜುನನಾಗಿದ್ದನಂತೆ. ಧಾರೆಯವರ ಪ್ರಕಾರ ನಾವು ಸಾಮಾನ್ಯವಾಗಿ ತಿಳಿದಂತೆ ಶಿವಾಜಿಯು ಕೇವಲ ತುಳಜಾ ಭವಾನಿಯ ಭಕ್ತನಾಗಿರದೇ ಶ್ರೀಶೈಲ ಮಲ್ಲಿಕಾರ್ಜುನನ ಅನನ್ಯ ಭಕ್ತನೂ ಆಗಿದ್ದನಂತೆ. ಅವನು ತನ್ನ ಕನಸಿನ 'ಹಿಂದೂ ಸಾಮ್ರಾಜ್ಯ' ಸ್ಥಾಪಿಸಿದ ನಂತರ ತನ್ನ ಜೀವನ ಸಾರ್ಥಕವಾಯಿತು ಎಂದುಕೊಂಡು ತನ್ನ ಆರಾಧ್ಯ ದೇವರಿಗೆ ಕೃತಜ್ಞತೆ ಸಲ್ಲಿಸಲು ಆಂಧ್ರದ ಮೂಲ ಶ್ರೀಶೈಲ ಮಲ್ಲಿಕಾರ್ಜುನ ದೇವಸ್ಥಾನದಲ್ಲಿಯೇ ತನ್ನನ್ನು ತಾನು ಬಲಿ ಅರ್ಪಿಸಿಕೊಳ್ಳಲು ಎಲ್ಲಾ ಸಿದ್ಧತೆ ಸಹ ಮಾಡಿಕೊಂಡಿದ್ದನಂತೆ. ಆದರೆ ಅವನಿರದಿದ್ದರೆ ಅವನು ಕಟ್ಟಿದ ಹಿಂದವೀ-ಸ್ವರಾಜ್ಯ ಕುಸಿದುಹೋಗಬಹುದು ಎಂಬುದಾಗಿ ಶಿವಾಜಿಗೆ ಅವನ ಹಿತೈಷಿಗಳು ಮನವರಿಕೆ ಮಾಡಿದ ಮೇಲೆ ಅವನು ಶ್ರೀಶೈಲದಲ್ಲಿ ಆತ್ಮಾಹುತಿಯ ಯೋಚನೆ ಬಿಟ್ಟನಂತೆ.



ಮಹಾರಾಷ್ಟ್ರದ ಕೆಲವು ಹಳೆಯ ಚಿತ್ರಗಳಲ್ಲಿ ಶಿವಾಜಿಯು ಲಿಂಗವೊಂದಕ್ಕೆ ತನ್ನ ಬೆರಳೊಂದನ್ನು ತುಂಡರಿಸಿ ಅರ್ಪಿಸುವ ಚಿತ್ರಗಳನ್ನು ನಾನು ನೋಡಿದ್ದೇನೆ. ಡಾ.ಕಲ್ಬುರ್ಗಿಯವರು ಹೇಳುವಂತೆ ವೀರ ಗೊಗ್ಗಿದೇವನ ವೀರ ಮಾಹೇಶ್ವರ ಪಂಥದಲ್ಲಿ ಆತ್ಮಾಹುತಿ ಮಾಡಿಕೊಳ್ಳಲಾಗದವರು ತಮ್ಮ ಕೈ ಅಥವಾ ಕಾಲು ಕಡಿದುಕೊಂಡು ಮಲ್ಲಿಕಾರ್ಜುನ ದೇವರಿಗೆ ಅರ್ಪಿಸುತ್ತಿದ್ದರಂತೆ. ಶಿವಾಜಿಯ ಬೆರಳಿನ ಅರ್ಪಣೆಯೂ ಸಹ ಇದೇ ಆಗಿರಬಹುದೇ?

ಮಾತಾ ಮಹಾದೇವಿಯವರ ವಾದದಂತೆ ಶಿವಾಜಿಯು ಕರ್ನಾಟಕದ ಕುರುಬ ಜನಾಂಗದವನಾಗಿರದೇ ವೀರಶೈವ ಮತದವನಾಗಿದ್ದನು. ಆದರೆ ಶಿವಾಜಿಯದ್ದು ವೀರಶೈವ ಮತ ಆಗಿರದೇ ವೀರ ಮಾಹೇಶ್ವರ ಪಂಥ ಆಗಿರಬಹುದೇ?

*-ಪ್ರವೀಣ್ ಎಸ್.ಶೆಟ್ಟಿ, ಮಂಗಳೂರು*




ನಾವು, ನೀವು, ಎಲ್ಲರೂ ಎಷ್ಟೇ ಬಾಯಿಬಾಯಿ ಬಡಿದುಕೊಂಡರೂ ಯಡಿಯೂರಪ್ಪ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಯುವುದಿಲ್ಲ, ಈ ರಾಜ್ಯಕ್ಕೆ ಕೆಟ್ಟ ದಿನಗಳು ಅಂತ್ಯಗೊಳ್ಳುವುದಿಲ್ಲ. ಪಾಪಿ ಚಿರಾಯು ಎಂಬ ಮಾತು ಯಡಿಯೂರಪ್ಪನಿಗೆಂದೇ ಸೃಷ್ಟಿಗೊಂಡಂತಿದೆ!

ಸರಿಯಾಗಿ ನೋಡಿದರೆ, ಅವತ್ತು ಬೋಪಯ್ಯ ಎಂಬ ಭೂಪ ಆ 16 ಶಾಸಕರನ್ನು ಅನರ್ಹಗೊಳಿಸದಿದ್ದರೆ ಅವತ್ತೇ ಯಡಿಯೂರಪ್ಪನ ಸರ್ಕಾರ ಪತನಗೊಳ್ಳುತ್ತಿತ್ತು. ಅದು ಗೊತ್ತಿದ್ದೇ ಚೆಡ್ಡಿಗಳು ಇಂತಹ ಕರಾಮತ್ತನ್ನು ಮಾಡಿ ತಮ್ಮ ಅನೈತಿಕ ಸರ್ಕಾರವನ್ನು ಉಳಿಸಿಕೊಂಡಿದ್ದರು. ಅಷ್ಟೇ ಅಲ್ಲ, ಈ ಹಲವು ತಿಂಗಳ ಅವಧಿಯಲ್ಲಿ ಆ 10 ಶಾಸಕರನ್ನು (ಚಾಮರಾಜ ಕ್ಷೇತ್ರದ ಶಂಕರಲಿಂಗೇಗೌಡನನ್ನು ಹೊರತುಪಡಿಸಿ) ಇನ್ನಿಲ್ಲದಂತೆ ಕಾಡಿ, ಬೆದರಿಸಿ, ಆಮಿಷವೊಡ್ಡಿ ಪಳಗಿಸಿಕೊಂಡರು. ಈಗ ಅವತ್ತು ಬಂಡಾಯವೆದ್ದಿದ್ದ ಅದೇ 10 ಶಾಸಕರನ್ನು ತಮ್ಮ ಬಗಲಲ್ಲಿ ನಿಲ್ಲಿಸಿಕೊಂಡು ತನ್ನ ಸರ್ಕಾರ ಭದ್ರವಾಗಿದೆ ಎನ್ನುತ್ತಿದ್ದಾರೆ.

ಕಿಂಚಿತ್ತು ನಾಚಿಕೆ ಎಂಬುದೂ ಬೇಡವೇ?


*- ರಾಜೇಶ್ ಶರ್ಮ, ಬೆಂಗಳೂರು*

ಯಡಿಯೂರಪ್ಪನ ಸರ್ಕಾರವನ್ನು ಉಳಿಸಿದ ಕೇಂದ್ರ ಸರ್ಕಾರಕ್ಕೆ ಧನ್ಯವಾದಗಳನ್ನು ಹೇಳಬೇಕೆನಿಸುತ್ತಿದೆ.

ಈಗಾಗಲೇ 'ದೇಶ ನಿಷ್ಠ', 'ರಾಮ ಭಕ್ತ', 'ಪಾರ್ಟಿ ವಿತ್ ಅ ಡಿಫರೆನ್ಸ್' ಎಂಬ ಬಿರುದಾಂಕಿತದ ಬಿಜೆಪಿ ನಿಜಕ್ಕೂ ತಾನು ಎಂತಹ ಪಕ್ಷ, ತಾನು ಎಂತಹ ಆಡಳಿತವನ್ನು ನೀಡಬಲ್ಲೆ ಎಂದು ತೋರಿಸಿಕೊಟ್ಟಿದೆ. ಇಲ್ಲವೆಂದರೆ ಕೇವಲ ಎರಡು ವರ್ಷಗಳಲ್ಲಿ ದೇಶದಲ್ಲೇ ಅತಿ ಭ್ರಷ್ಟ ರಾಜ್ಯ ಎಂಬ 'ಹೆಮ್ಮೆ' ಅಷ್ಟು ಸುಲಭವಾಗಿ ಸಿಗುತ್ತಿತ್ತೇ ನಮ್ಮ ಪೂಜ್ಯ ಕನ್ನಡನಾಡಿಗೆ? ಇಷ್ಟೊಂದು ಭ್ರಷ್ಟತೆ, ಅಭದ್ರತೆ ಸೃಷ್ಟಿಯಾಗುತ್ತಿತ್ತೇ ಈ ನಮ್ಮ ಪ್ರೀತಿಯ ನಾಡಿನಲ್ಲಿ? ಹೀಗೆ ಜಾತಿ ಪ್ರೇಮ ಮೆರೆಯುತ್ತಿತ್ತೇ ಇಲ್ಲಿ?

ಬಿಜೆಪಿ ಇನ್ನೆರಡು ವರ್ಷಗಳ ಕಾಲ ಅಧಿಕಾರದಲ್ಲಿ ಇದ್ದು ಯಡ್ಡಿ ಹೀಗೆ ಕೆಟ್ಟ ಆಡಳಿತ ನೀಡುತ್ತಾ ಹೋದರೆ ಸಾಕು, ಯಾವ ಭಾರದ್ವಾಜ್‌ನೇ ಬರಲಿ, ಚಿದಂಬರಂನೇ ಅಡ್ಡಿ ನಿಲ್ಲಲಿ, ಅವರಿಂದ ಏನನ್ನೂ ಮಾಡಲಾಗುವುದಿಲ್ಲ, ಜನರೇ ಈ ಭ್ರಷ್ಟ ಯಡ್ಡಿ, ರೆಡ್ಡಿ ಮತ್ತು ಚೆಡ್ಡಿಗಳನ್ನು ಅಧಿಕಾರದಿಂದ ಒದ್ದೋಡಿಸುತ್ತಾರೆ.

*- ಗಾಯತ್ರಿ ಶಂಕರ್, ಬಿಡದಿ*




## 'ಹೈವೆ' ಮೂಲಕ ಮುನ್ನೂರು ದಾಟಿದರು...

ರಾಷ್ಟ್ರ ಪ್ರಶಸ್ತಿ ಪಡೆದಿರುವ 'ಪುಟ್ಟಕ್ಕನ ಹೈವೆ' ಮೂಲಕ ಹಂಸಲೇಖ ಅವರು ಸಂಗೀತ ನಿರ್ದೇಶನ ಮಾಡಿರುವ ಚಿತ್ರಗಳ ಸಂಖ್ಯೆ ಮುನ್ನೂರು ದಾಟಿದೆ. ಟ್ರಿಪಲ್ ಸೆಂಚುರಿ ದಾಟಿದ ಕನ್ನಡದ ಪ್ರಥಮ ಸಂಗೀತ ನಿರ್ದೇಶಕ ಎಂಬ ಹಿರಿಮೆ ಹಂಸಲೇಖ ಅವರದ್ದು. 'ಹೆಣ್ಣೇ ನಿನಗೇನು ಬಂಧನ' ಚಿತ್ರದೊಂದಿಗೆ 1986ರಲ್ಲಿ ಸಂಗೀತ ನಿರ್ದೇಶನಕ್ಕೆ ಕಾಲಿಟ್ಟ ಹಂಸಲೇಖ ಅವರಿಗೆ 'ಗಾನಯೋಗಿ ಪಂಚಾಕ್ಷರಿ ಗವಾಯಿ' ಚಿತ್ರದ ಸಂಗೀತಕ್ಕೆ ರಾಷ್ಟ್ರ ಪ್ರಶಸ್ತಿ ಲಭಿಸಿತ್ತು. ಜೊತೆಗೆ ಈಗಾಗಲೇ ಐದು ಫಿಲಂ ಫೇರ್ ಪ್ರಶಸ್ತಿಗಳು ಸೇರಿದಂತೆ ಹಲವಾರು ರಾಜ್ಯ ಪ್ರಶಸ್ತಿಗಳೂ ಅವರಿಗೆ ಸಿಕ್ಕಿವೆ.

'ಮಹಾಕ್ಷತ್ರಿಯ' ಚಿತ್ರಕ್ಕೆ 'ಈ ಭೂಮಿ ಬಣ್ಣದ ಬುಗರಿ' ತರಹದ ಅದ್ಭುತ ಗೀತೆಯನ್ನು ರಚಿಸುವ ಮೂಲಕ ಕನ್ನಡ ಚಿತ್ರರಂಗದಲ್ಲಿ ಭಾಷೆಯ ಶ್ರೀಮಂತಿಕೆಯನ್ನು ಹೆಚ್ಚಿಸಿದವರು ಹಂಸಲೇಖ. ಹಾಗೆಯೇ ಅವರು ಬರೆದ ರಸಿಕ ಗೀತೆ 'ಹೆ ಗಂಗೂ ಬೈಕು ಕಲಿಸಿಕೊಡು ನಂಗೂ' ಹಾಡಿಗೆ ಇನ್ನೂ ಮುಪ್ಪಾಗಿಲ್ಲ. 'ಅವನೇ ನನ್ನ ಗಂಡ', 'ಗಂಧರ್ವ', 'ನನ್ನ ತಂಗಿ' ಮುಂತಾದ ಚಿತ್ರಗಳಿಗೆ ಕಥೆಯನ್ನೂ ಬರೆದಿರುವ ಹಂಸಲೇಖ 'ಪ್ರೇಮ ಲೋಕ', 'ರಣಧೀರ', 'ಯುಗ ಪುರುಷ', 'ಹಳ್ಳಿ ಮೇಷ್ಟ್ರು' ಮುಂತಾದ ಚಿತ್ರಗಳಿಗೆ ಸಂಭಾಷಣೆಯನ್ನೂ ಬರೆದಿದ್ದಾರೆ.

"ಕನ್ನಡದಲ್ಲಿ ಮುಂದೆಯೂ ಯಾರಿಂದಲೂ ನನ್ನ ರೆಕಾರ್ಡ್ ಬ್ರೇಕ್ ಮಾಡಲು ಸಾಧ್ಯವಿಲ್ಲ. ಈಗ ಚಾಲ್ತಿಯಲ್ಲಿರುವ ನನ್ನ ಶಿಷ್ಯರಿಂದಲೂ ಸಾಧ್ಯವಿಲ್ಲ" ಎಂಬ ಸಾತ್ವಿಕ ಅಹಂ ತೋರುತ್ತಿರುವ ಹಂಸ್ ಇದೇ ದರ್ಪದಲ್ಲೇ ಇನ್ನೂ ನೂರಾರು ಸಿನಿಮಾಗಳಿಗೆ ಸಂಗೀತ, ಸಾಹಿತ್ಯ ನೀಡುತ್ತಾ ಸಾಗಲಿ...

## ಗರ್ಭಿಣಿಯಲ್ಲ ರೀ ಗಂಡುಬೀರಿ!



ರಾಜಸ್ತಾನ್ ರಾಯಲ್ಸ್ ತಂಡದ ಒಡತಿ, ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಗರ್ಭಿಣಿಯಲ್ಲವಂತೆ. ಹಾಗಂತ ಸ್ವತಃ ಶಿಲ್ಪಾ ತನ್ನ ಟ್ವಿಟ್ಟರ್ ಅಕೌಂಟ್‌ನಲ್ಲಿ ಹೇಳಿಕೊಂಡಿದ್ದಾಳೆ.

ಗರ್ಭಿಣಿಯರಲ್ಲಿ ಸಾಮಾನ್ಯವಾಗಿ ಕಂಡುಬರುವಂತಹ ಆಯಾಸ, ವಾಂತಿ, ಮುಂತಾದ ಗುಣಲಕ್ಷಣಗಳಿಂದ ಇತ್ತೀಚೆಗೆ ಶಿಲ್ಪಾ ನಿತ್ರಾಣಗೊಂಡಿದ್ದಳು. ಅದೇ ಹಲವಾರು ಊಹಾಪೋಹಗಳಿಗೆ ಕಾರಣವಾಗಿತ್ತು. ಅಷ್ಟೇ ಆಗಿದ್ದರೆ ಆಕೆ ಸುಮ್ಮನಿರುತ್ತಿದ್ದಳೇನೋ. ಆದರೆ ಈ ಊಹಾಪೋಹಗಳು ಪತ್ರಿಕೆಗಳಲ್ಲೂ ಪ್ರಕಟಗೊಂಡಾಗ ಶಿಲ್ಪಾ ರಾಂಗ್ ಆದಳು.

"ನಾನು ಸೆಲೆಬ್ರಿಟಿ ಆಗಿರುವುದರಿಂದ ನನ್ನ ಬಗ್ಗೆ ಎಲ್ಲರಿಗೂ ಕುತೂಹಲವಿರುತ್ತದೆ ಎಂಬ ವಿಚಾರ ನನಗೆ ತಿಳಿದಿದೆ. ಆದರೆ ತೀರಾ ಖಾಸಗಿ ವಿಷಯದ ಬಗ್ಗೆ ಕುತೂಹಲ ಸರಿಯಲ್ಲ" ಎಂದು ಶಿಲ್ಪಾ ಈಗ ಕಿಡಿಕಾರಿದ್ದಾಳೆ.




## ಕಾಟಾಚಾರದ ಸಮಾರಂಭ...

ಮೊನ್ನೆ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಚಿತ್ರರಂಗದ ಗಣ್ಯರ ಸಮ್ಮುಖದಲ್ಲಿ ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಯ ಮಾನ ಹರಾಜಾಯಿತು!

ಇಷ್ಟು ಓದಿದ ಮೇಲೆ ನಿಮಗೀಗ ನಾವು ಹೇಳುತ್ತಿರುವುದು ಚಲನಚಿತ್ರ ವಾರ್ಷಿಕ ಪ್ರದಾನ ಸಮಾರಂಭದ ಬಗ್ಗೆ ಎಂಬುದು ಅರ್ಥವಾಗಿರಬೇಕಲ್ಲವೇ?

ಕಳೆದ ಹಲವಾರು ವರ್ಷಗಳಿಂದ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉತ್ಸವ ಅಥವಾ ಜಾತ್ರೆಯ ಮಾದರಿಯಲ್ಲಿ ಮಾಡುತ್ತಾ ಬಂದಿರುವ ವಾರ್ತಾ ಇಲಾಖೆಯವರು ಈ ಬಾರಿ ಇಡೀ ಸಮಾರಂಭವನ್ನೇ ನಾಮಕಾವಸ್ಥೆಗೆ ಮಾಡಿದಂತಿತ್ತು. ಆದಕ್ಕೆ ಕಾರಣ ಯಡಿಯೂರಪ್ಪನ ಸರ್ಕಾರ ಮೇಲೆ ರಾಜ್ಯಪಾಲರ ತೂಗುಗತ್ತಿ ತೇತಾಡುತ್ತಿದ್ದದ್ದು ಇರಬಹುದು.

ಅವತ್ತಿನ ಸಮಾರಂಭದಲ್ಲಿ ಮುಖ್ಯಮಂತ್ರಿಯ ವರ್ತನೆ ವಿಚಿತ್ರವಾಗಿತ್ತು. ಈ ಮುಖ್ಯಮಂತ್ರಿಗೆ ಎರಡು ಗಂಟೆ ಬಿಡುವು ಮಾಡಿಕೊಂಡು ಎಲ್ಲಾ ಪ್ರಶಸ್ತಿ ವಿಜೇತರಿಗೆ ಪುರಸ್ಕಾರ ಮಾಡಲು ಸಮಯವಿಲ್ಲವೆಂದರೆ ಇಂತಹ ಸಮಾರಂಭವನ್ನು ಯಾವ ಪುರುಷಾರ್ಥಕ್ಕಾಗಿ ಹಮ್ಮಿಕೊಳ್ಳಬೇಕು?

ಯಡಿಯೂರಪ್ಪ ಒಂದರ್ಧ ಗಂಟೆ ತಾರಾ ಮತ್ತು ಇನ್ನಿತರ ಕಲಾವಿದರ ನೃತ್ಯ ನೋಡಿ ಆ ನಂತರ ಒಂದಿಬ್ಬರಿಗೆ ಪ್ರಶಸ್ತಿ ನೀಡಿ ಅರ್ಧದಲ್ಲಿ ಸಮಾರಂಭದಿಂದ ನಿರ್ಗಮಿಸಿದರು. ಮುಖ್ಯಮಂತ್ರಿ ಹೋದನಂತರ ಅವರ ಹಿಂಬಾಲಕರು ಹೇಗೆ ತಾನೇ ಸಮಾರಂಭದಲ್ಲಿ ಉಳಿಯಲು ಸಾಧ್ಯ? ಗೃಹ ಸಚಿವ ಅಶೋಕ್ ಸಮೇತ ಬಹುತೇಕ ಎಲ್ಲಾ ಮಂತ್ರಿಗಳು, ಶಾಸಕರು, ಅವರ ಪಟಾಲಂ ಕೂಡಾ ಜಾಗ ಖಾಲಿ ಮಾಡಿತು. ಅವರೆಲ್ಲ ಹೋದನಂತರ ಅಂಬರೀಶ್ ಮತ್ತು ರವಿಚಂದ್ರನ್ ಕೂಡ ಸ್ವಲ್ಪದರಲ್ಲೇ ಸಮಾರಂಭಕ್ಕೆ ಗುಡ್‌ಬೈ ಹೇಳಿ ಹೊರಟುಹೋದರು. ಇದಾದ ನಂತರ ಅಕಾಡೆಮಿ ಅಧ್ಯಕ್ಷ ನಾಗಾಭರಣ ತಾನೇನು ಕಡಿಮೆ ಎಂಬಂತೆ ತಾನು ಕೂಡಾ ಸಿಕ್ಕಾಪಟ್ಟೆ ಬಿಜಿ ಎಂಬಂತೆ ಹೋಗೇಬಿಟ್ಟರು.....

ಹೀಗೆ ಸಮಾರಂಭ ಆರಂಭವಾದ ಸ್ವಲ್ಪ ಹೊತ್ತಿಗೆಲ್ಲಾ ಅರ್ಧಕ್ಕರ್ಧ ಜನರು, ಗಣ್ಯರು ಜಾಗ ಖಾಲಿ ಮಾಡಿದ್ದರು. ಇದನ್ನಾದರೂ ಸಹಿಸಿಕೊಳ್ಳಬಹುದು. ಆದರೆ ತಾರಾ ಮೊದಲಾದರವರ ನೃತ್ಯವಂತೂ ತಲೆಚಿಟ್ಟು ಹಿಡಿಸುವಂತಿತ್ತು.


ಸಮಾರಂಭದಿಂದ ಬಹುತೇಕ ಗಣ್ಯರು ಹೊರಟುಹೋದ ನಂತರ ಬಸಂತ್‌ಕುಮಾರ್ ಪಾಟೀಲ್ ಮತ್ತು ಭಾರ್ಗವ ಅವರುಗಳ ಅದೃಷ್ಟ ಖುಲಾಯಿಸಿತು. ಮುಖ್ಯಮಂತ್ರಿಗಳ ಬದಲು ಇವರಿಬ್ಬರು ಪ್ರಶಸ್ತಿ ವಿಜೇತರಿಗೆ ಫಲಕಗಳನ್ನು ನೀಡಿ ಗೌರವಿಸಿದರು. ಆದರೆ ಅನೇಕ ಪ್ರಶಸ್ತಿ ವಿಜೇತರು ಇದು ಸರ್ಕಾರ ತಮಗೆ ಮಾಡಿದ ಅವಮಾನ ಎಂದು ಮನಸ್ಸಿನಲ್ಲಿ ಶಾಪಹಾಕುತ್ತಾ, ಈ ಪಾಟೀಲ ಮತ್ತು ಭಾರ್ಗವನ ಕೈಯಿಂದ ಪ್ರಶಸ್ತಿ ಸ್ವೀಕರಿಸುವ ಬದಲು ಸಮಾರಂಭಕ್ಕೆ ಚಕ್ಕರ್ ಹಾಕಬಹುದಿತ್ತೇನೊ ಎಂದುಕೊಳ್ಳುತ್ತಾ ಒಲ್ಲದ ಮನಸ್ಸಿನಿಂದಲೇ ಪ್ರಶಸ್ತಿಯನ್ನು ಸ್ವೀಕರಿಸಿದರು ಎಂದರೆ ತಪ್ಪಾಗದು.

ಈ ಮಧ್ಯೆ "ನಾನು ಹಣಕೊಟ್ಟು ಪ್ರಶಸ್ತಿಯನ್ನು ಪಡೆದಿಲ್ಲ" ಎಂದು ಅತ್ಯುತ್ತಮ ನಟ ಪ್ರಶಸ್ತಿ ಪಡೆದ ಯೋಗೇಶ್ ಸ್ಪಷ್ಟೀಕರಣ ನೀಡಿದ್ದು ತಮಾಷೆಯಾಗಿತ್ತು. ಹಾಗೆಯೇ ಆಯ್ಕೆ ಸಮಿತಿಯ ಅಧ್ಯಕ್ಷನಾಗಿ ಈಗಾಗಲೇ ಹಾಸ್ಯಾಸ್ಪದವಾಗಿ ನಡೆದುಕೊಂಡಿರುವ ಭಾರ್ಗವ ಅವತ್ತು ವೇದಿಕೆಯ ಮೇಲೆ 'ಜಿಂಕೆ ಮರಿ...' ಹಾಡಿಗೆ ನೃತ್ಯ ಮಾಡಿ ಮತ್ತೊಮ್ಮೆ ನಗೆಪಾಟಲೀಗೀಡಾದರು.

ಈ ಸಮಾರಂಭ ಇಷ್ಟೊಂದು ನೀರಸವಾಗಿ ನಡೆಯಲಿದೆ ಎಂದು ಉದ್ಯಮದವರಿಗೆ ಮೊದಲೇ ಗೊತ್ತಿತ್ತೋ ಏನೋ? ಹೀಗಾಗಿ ಅಂದು ಬಹುತೇಕ ನಾಯಕನಾಯಕಿಯರು ಆ ಸಮಾರಂಭಕ್ಕೆ ಹಾಜರಾಗಲೇ ಇಲ್ಲ.

ಇಂತಹ ಕೆಟ್ಟದಾದ, ಅದ್ವಾನದ ಕಾರ್ಯಕ್ರಮವನ್ನು ಏರ್ಪಡಿಸುವ ಬದಲಾಗಿ ಇನ್ನು ಮುಂದಾದರೂ ವಾರ್ತಾ ಇಲಾಖೆಯ ಅಧಿಕಾರಿಗಳು ಕೇಂದ್ರ ಸರ್ಕಾರದ ಮಾದರಿಯಲ್ಲಿ ಸಿಂಪಲ್ ಆದ ಕಾರ್ಯಕ್ರಮವನ್ನು ಮಾಡುವಂತಾಗಲಿ...

## ಸೂರಪ್ಪ ಬಾಂಬು



ಪುನೀತ್ ರಾಜ್‌ಕುಮಾರ್ ನಾಯಕನಾಗಿ ನಟಿಸಿದ 'ಪೃಥ್ವಿ' ಚಿತ್ರದ ನಿರ್ಮಾಪಕ ಸೂರಪ್ಪಬಾಬು ಈಗ ಬೇರೆ ಬೇರೆ ಕಾರಣಗಳಿಗೆ ಮತ್ತೆ ಸುದ್ದಿಯಲ್ಲಿದ್ದಾರೆ.


ವಿಷ್ಣುವರ್ಧನ್ ಅವರ ಮಾಜಿ ಭಂಟನಾದ ಸೂರಪ್ಪ ಬಾಬು ಕಳೆದ ವರ್ಷ 'ಪೃಥ್ವಿ' ಚಿತ್ರವನ್ನು ನಿರ್ಮಿಸಿ ಬಳ್ಳಾರಿಯ ಗಣಿದಣಿಗಳ ವಿರುದ್ಧ ಪರೋಕ್ಷವಾಗಿ ಬಂಡಾಯದ ಧ್ವನಿಯೆತ್ತಿದ್ದರು ಎನ್ನಬಹುದು. ಒಬ್ಬ ರಾಜಕಾರಣಿ ಮಾಡಲಾಗದ ಕೆಲಸವನ್ನು ಮಾಡುವ ಧೈರ್ಯ ತೋರಿದ ಬಾಬುವನ್ನು ಅಂದು ಎಲ್ಲರೂ ಅಭಿನಂದಿಸಿದ್ದರು.

ಈ 'ಪೃಥ್ವಿ' ರಾಷ್ಟ್ರೀಯ ಪ್ರಶಸ್ತಿಯನ್ನು ಗಳಿಸುತ್ತದೆ ಎಂಬ ನಿರೀಕ್ಷೆಯಲ್ಲಿದ್ದ ಸೂರಪ್ಪ ಬಾಬುಗೆ ಮೊನ್ನೆ ಭಾರೀ ನಿರಾಶೆಯಾಯಿತು. "ನಮ್ಮ 'ಪೃಥ್ವಿ' ಪರಿಸರ ವಿಭಾಗ ಮತ್ತು ಅತ್ಯುತ್ತಮ ಪ್ರಾದೇಶಿಕ ವಿಭಾಗಗಳಲ್ಲೂ ಮೊದಲ ಸ್ಥಾನದಲ್ಲಿತ್ತು. ಆದರೆ ಕೆಲವರು ಲಾಬಿ ಮಾಡಿ ಈ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ನಮಗೆ ಅವರ ತರಹ ದೆಹಲಿಯಲ್ಲಿ ಲಾಬಿ ಮಾಡುವುದು ಗೊತ್ತಿಲ್ಲ. ನಮಗೆ ಸಿನಿಮಾ ಮಾತ್ರ ಮಾಡಲು ಗೊತ್ತಿರುವುದು" ಎಂದೆಲ್ಲ ಸೂರಪ್ಪ ಬಾಬು ಮೊನ್ನೆ ಗುಡುಗುವ ಮೂಲಕ ಸುದ್ದಿ ಮಾಡಿದ್ದರೆ.

ಇದಾದನಂತರ ಒಂದು ಖಾಸಗಿ ಟಿವಿ ಚಾನೆಲ್ ನಡೆಸಿದ ಚರ್ಚೆಯಲ್ಲಿ ಡಬ್ಬಿಂಗ್ ಪರವಾಗಿ ವಾದ ಮಂಡಿಸಿ ಇಡೀ ಕನ್ನಡ ಚಿತ್ರೋದ್ಯಮ ಬೆಚ್ಚಿಬೀಳುವಂತೆ ಮಾಡಿದರು ಸೂರಪ್ಪ ಬಾಬು.

ತಮಾಷೆಯೆಂದರೆ ಆ ಚಾನೆಲ್‌ನವರು ಡಬ್ಬಿಂಗ್ ಪರ ಇರುವ ಇಬ್ಬರನ್ನು ಮತ್ತು ವಿರೋಧವಿರುವ ಇಬ್ಬರನ್ನು ಚರ್ಚೆಗೆ ಕರೆಸಿದ್ದರು. ಈ ಎರಡು ಗುಂಪಿನ ಮಧ್ಯೆ ಬಾಬು ಅಂಪೈರ್‌ನಂತೆ ತಟಸ್ಥವಾಗಿರಬೇಕಿತ್ತು. ಆದರೆ ಕ್ಯಾಮೆರಾ ಸ್ವಿಚ್ ಆನ್ ಆದಕೂಡಲೇ ಸೂರಪ್ಪ ಬಾಬು ಡಬ್ಬಿಂಗ್ ಪರ ವಾದ ಮಾಡುತ್ತಿದ್ದ ರಾಜೇಂದ್ರಸಿಂಗ್ ಬಾಬು ಮತ್ತು ಮುನಿರತ್ನಂ ನಾಯ್ಡು ಜೊತೆ ಸೇರಿಕೊಂಡು ಚಾನೆಲ್‌ನವರನ್ನೇ ಯಾಮಾರಿಸಿದರು!

ಅದೇನೇ ಇರಲಿ, ಅನಾದಿಕಾಲದಿಂದಲೂ ಡಬ್ಬಿಂಗ್ ಪರ ಯಾರೂ ದನಿ ಎತ್ತುತ್ತಿರಲಿಲ್ಲ. ಈಗ ಕನಿಷ್ಠ ಮೂರು ಜನ ಡಬ್ಬಿಂಗ್ ಪರ ಬಹಿರಂಗವಾಗಿ ಮಾತನಾಡುತ್ತಿರುವುದು ಬಹುಶಃ ಕನ್ನಡ ಚಿತ್ರರಂಗದಲ್ಲಿ ಹೊಸಬೆಳವಣಿಗೆಗೆ ಕಾರಣವಾಗಬಹುದೇನೋ?



## ಸನಾತನಿಗೆ ಕಪಿರಾಜನ ಕಾಟ

ಕವಿರಾಜೇಶ್ ಎಂಬ ನಿರ್ದೇಶಕ ಈಗ ಸಿನಿಮಾ ನಟಿಯರ ಜೀವ ಹಿಂಡಲು ಶುರು ಮಾಡಿದ್ದಾನೆ. ಓದುಗರು ದಯವಿಟ್ಟು ಇದು ಚಿತ್ರಸಾಹಿತಿ ಕವಿರಾಜ್ ಬಗ್ಗೆ ಎಂದು ಅಪಾರ್ಥ ಮಾಡಿಕೊಳ್ಳಕೂಡದು. ಆ ಕವಿಗೂ ಈ ರಾಜೇಶನಿಗೂ ಯಾವ ಸಂಬಂಧವೂ ಇಲ್ಲ.

ಮೂರು ವರ್ಷಗಳ ಹಿಂದೆ ಈ ಕಪಿರಾಜೇಶ್ ಅಲ್ಲಲ್ಲ ಕವಿರಾಜೇಶ್ 'ರಮ್ಯಾ-ರಕ್ಷಿತಾ' ಎಂಬ ಸಿನಿಮಾವೊಂದನ್ನು ಆರಂಭಿಸಿ ಅದನ್ನು ಅರ್ಧಕ್ಕೇ ನಿಲ್ಲಿಸಿದ್ದ. ನಂತರ ಈತ ಶುರು ಮಾಡಿದ್ದು 'ದಯಾನಾ' ಎಂಬ ಮಹಾನ್ ಚಿತ್ರವನ್ನು. ಈ ಸಿನಿಮಾಗಾಗಿ ಕಳೆದ ಒಂದು ವರ್ಷದಿಂದ ಒಂದೇಸಮನೆ ಶೂಟಿಂಗ್ ನಡೆಯುತ್ತಲೇ ಇದೆ. ಆದರೆ ಇನ್ನೂ ಮುಕ್ತಾಯಗೊಂಡಿಲ್ಲ.

'ಸ್ನೇಹಾಂಜಲಿ' ಎಂಬ ಚಿತ್ರದಿಂದ ನಾಯಕನಾದ ಮೂಕ ಹುಡುಗ ಧ್ರುವ ಈ ಚಿತ್ರದ ಹೀರೋ. ಕಿವಿ ಕೇಳದಿದ್ದರೂ, ಮಾತು ಬಾರದಿದ್ದರೂ ಕೇವಲ ಲಿಪ್ ಮೂವ್‌ಮೆಂಟ್‌ಗಳನ್ನು ಅರ್ಥಮಾಡಿಕೊಂಡು ಮನೋಜ್ಞವಾಗಿ ನಟಿಸುವ ಧ್ರುವನಿಗೆ ಇನ್ನೊಂದು ಚಿತ್ರದಲ್ಲಿ ನಟಿಸುವ ಕನಸು.

ಆದರೆ ಈ ಚಿತ್ರದ ನಿರ್ದೇಶಕ ಕವಿರಾಜೇಶನ ಕೃಪೆಯಿಂದ ಯಾವೊಬ್ಬರ ಕನಸುಗಳೂ ಚಿಗುರುವ ಸೂಚನೆ ಕಾಣುತ್ತಿಲ್ಲ. 'ದಯಾನಾ' ಸಿನಿಮಾದಲ್ಲಿ ನಟಿಸುತ್ತಿರುವ ನಾಯಕಿಯರಿಗಂತೂ ಕವಿರಾಜೇಶನ ಕಾಟ ಸಹಿಸಿಕೊಳ್ಳುವುದೇ ಭಯಾನಕ ಅನುಭವವಾಗಿದೆ.

ಈ ಕವಿರಾಜೇಶನ ಮಂಗಾಟಗಳಿಗೆ ಮಿತಿಯೇ ಇಲ್ಲದಂತಾಗಿದೆ. ಅದಕ್ಕೆ ಈತ ಹುಬ್ಬಳ್ಳಿ ಮೂಲದ ಸನಾತನಿ ಎಂಬ ನಟಿಗೆ ಕೊಟ್ಟ ಕಾಟವೇ ಒಂದು ಉದಾಹರಣೆಯಾಗಿದೆ.



ಸಾಮಾನ್ಯವಾಗಿ ನಿರ್ದೇಶಕ ಹೇಳಿದ ಬಟ್ಟೆಯನ್ನು ನಟಿಯರು ಹಾಕಬೇಕು. ಚಿತ್ರದ ಅಗತ್ಯದ ಪ್ರಕಾರ ಎಂತಹ ಬಟ್ಟೆ ಧರಿಸಬೇಕೆಂದು ಮೊದಲೇ ಒಪ್ಪಂದವಾಗಿರುತ್ತದೆ. ಹಾಗೆಯೇ ಸನಾತನಿಯೊಟ್ಟಿಗೆ ಕವಿರಾಜೇಶ್ ಕೂಡ ಕಾಸ್ಟ್ಯೂಮ್ ಬಗ್ಗೆ ಅಗ್ರಿಮೆಂಟ್ ಮಾಡಿಕೊಂಡಿದ್ದ. ಆದರೆ ಚಿತ್ರೀಕರಣ ಪ್ರಾರಂಭವಾದ ಮೇಲೆ ಸನಾತನಿಯೊಂದಿಗೆ ಮಾಡಿಕೊಂಡಿದ್ದ ಅಗ್ರಿಮೆಂಟಗೆ ಹೊರತಾಗಿದ್ದ ತುಂಡುಬಟ್ಟೆಯನ್ನು ತಂದ ರವಿರಾಜ್ ಅದನ್ನೆ ಆಕೆಗೆ ಕೊಟ್ಟು "ನೀನು ಇದನ್ನು ಧರಿಸಲೇ ಬೇಕು" ಎಂದು ಹಟ ಹಿಡಿದ.

ಆದರೆ ಪುರೋಹಿತಿಕೆ ಮಾಡಿಕೊಂಡು ಬದುಕುತ್ತಿರುವ ಶಂಕರ ಜೋಷಿಯವರ ಮಗಳಾದ ಸನಾತನಿ ಇದನ್ನು ವಿರೋಧಿಸಿದ್ದಾಳೆ. "ಅರ್ಧ ಮೈ ಕಾಣಿಸುವ ಇದನ್ನು ನಾನು ಧರಿಸುವುದಿಲ್ಲ. ಬೇಕಿದ್ದರೆ ಛೇಂಬರ್‌ಗೆ ಕಂಪ್ಲೇಂಟ್ ಕೊಡಿ. ಅಲ್ಲೇ ಬಂದು ಮಾತಾಡುತ್ತೇನೆ" ಎಂದು ಸನಾತನಿ ಗುಡುಗಿದ್ದಾಳೆ. ಇದರಿಂದ ಗಾಬರಿಗೊಂಡ ಕವಿರಾಜೇಶ ಆಕೆಗೆ ಬೇರೆ ಬಟ್ಟೆ ತೊಡಿಸಿ ಅಂದಿನ ಶೂಟಿಂಗ್ ಮಾಡಿ ಮುಗಿಸಿದ್ದಾನೆ.

ಸಿದ್ದಲಿಂಗಯ್ಯನವರ 'ಬಾ ನನ್ನ ಪ್ರೀತಿಸು', 'ಗೋಪಿ ಕೃಷ್ಣ', 'ಮೋಜಿನ ಮದುವೆ', 'ಕಲಿಯುಗ ಸೀತೆ' ಚಿತ್ರಗಳಲ್ಲಿ ಬಾಲಕಲಾವಿದೆಯಾಗಿ ನಟಿಸಿದ್ದ ಸನಾತನಿ ಈಗ ಬಿ. ರಾಮಮೂರ್ತಿಯವರ 'ಎಷ್ಟು ನಗ್ತಿಯ ನಗು' ಮತ್ತು ಅನಂತ್ ನಾಗ್ ಅಭಿನಯಿಸಿದ್ದ 'ಕ್ರೇಜಿ ಕುಟುಂಬ' ಮುಂತಾದ ಚಿತ್ರಗಳಲ್ಲಿ ನಾಯಕಿಯಾಗಿ ನಟಿಸಿದ್ದಾಳೆ.

ಸನಾತನಿ ಅದು ಹೇಗೋ ಈ ಕವಿರಾಜೇಶನ ಉಪಟಳದಿಂದ ಬಚಾವ್ ಆಗಿದ್ದಾಳೆ. ಆದರೆ ಬೇರೆ ಹುಡುಗಿಯರ ಗತಿ?

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 12/- 8-6-2011 RNI No. KARKAN2005/1464



ಸ್ವಾಗತ ಕಮಾನು ಶಿವಣ್ಣನ ತಲೆಮೇಲೆ ಬಿದ್ದಾಗ.....





# ಶಿವಣ್ಣನ ತಲೆಗೆ ಪೆಟ್ಟು

ಶಿವರಾಜ್‌ಕುಮಾರ್ ಅಭಿಮಾನಿಗಳಿಗಾಗಿ ಒಂದು ಸಿಹಿ ಮತ್ತು ಒಂದು ಕಹಿ ಸುದ್ದಿ ಇಲ್ಲಿದೆ.

ಕಳೆದ ಮೇ 19ರಂದು ಶಿವಣ್ಣ ವೈವಾಹಿಕ ಜೀವನಕ್ಕೆ ಕಾಲಿಟ್ಟು 25 ವಸಂತಗಳು ಪೂರ್ಣಗೊಂಡವು. ಅಂದು ಉದ್ಯಮದ ಬಹುತೇಕ ಗಣ್ಯರು ಶಿವಣ್ಣ ದಂಪತಿಗಳಿಗೆ ಶುಭ ಹಾರೈಸಿದರು. ಅದಾದ ಮೂರೇ ದಿನಕ್ಕೆ ಉದ್ಯಮದ ಕಲಾವಿದರು ಮತ್ತು ಆತ್ಮೀಯ ಸ್ನೇಹಿತರಿಗಾಗಿ ಶಿವರಾಜ್‌ಕುಮಾರ್ ತಮ್ಮ ಮನೆಯಲ್ಲೇ ಭರ್ಜರಿ ಭೋಜನಕೂಟ ಏರ್ಪಡಿಸಿದರು.

ಇತ್ತೀಚೆಗಷ್ಟೇ ಅರಮನೆ ಮೈದಾನದಲ್ಲಿ ಅದ್ಭುತವಾದ ರಸಮಂಜರಿ ಕಾರ್ಯಕ್ರಮ ನೀಡಿ ತನ್ನ ವೃತ್ತಿ ಜೀವನದ ಏಳಿಗೆಗೆ ಕಾರಣರಾದವರಿಗೆಲ್ಲ ಥ್ಯಾಂಕ್ಸ್ ಹೇಳಿದ್ದರು ಶಿವರಾಜ್‌ಕುಮಾರ್. ಮೊನ್ನೆ ಮನೆಯಲ್ಲಿ ತನ್ನ ಆಪ್ತರಿಗೆಲ್ಲ ಭೋಜನ ನೀಡಿದರು. ಬಹುಶಃ ಕನ್ನಡ ಚಿತ್ರೋದ್ಯಮದಲ್ಲಿ ಯಾರೊಬ್ಬರೂ ಹೀಗೆ ತಮ್ಮ ಸ್ನೇಹಿತರನ್ನು, ಸಹಕಲಾವಿದರನ್ನು ನೆನಪಿಸಿಕೊಂಡ ಉದಾಹರಣೆಯೇ ಇಲ್ಲ.

ಹೀಗೆ ಚಿತ್ರರಂಗಕ್ಕೆ ಬಂದು 25 ವರ್ಷ ಸಂದಿದ್ದು, 100 ಚಿತ್ರಗಳ ಗಡಿ ದಾಟಿದ್ದು, ದಾಂಪತ್ಯದ ಸಿಲ್ವರ್ ಜುಬಿಲಿ ಆಚರಿಸಿದ್ದು... ಇಂತಹ ಸಿಹಿ ಸುದ್ದಿಗಳ ನಡುವೆಯೇ ಒಂದು ಕಹಿ ಸುದ್ದಿ ಕೂಡಾ ಕೇಳಿ ಬರಲಾರಂಭಿಸಿತ್ತು. ಅದೇನೆಂದರೆ ಇತ್ತೀಚೆಗೆ ಶಿವರಾಜ್‌ಕುಮಾರ್ ಅವರನ್ನು ಅನಾರೋಗ್ಯ ಕಾಡುತ್ತಿದೆ, ಅದಕ್ಕಾಗಿ ಅವರು ವಿಶೇಷ ಚಿಕಿತ್ಸೆ ಪಡೆಯುತ್ತಿದ್ದಾರೆ....



ತಲೆಮೇಲಿನ ಗಾಯವನ್ನು ಉಪ್ಪಿ, ರವಿಚಂದ್ರನ್ ಮತ್ತು ಹಂಸಲೇಖ ನೋಡುತ್ತಿರುವುದು.....

ಮೊನ್ನೆ 'ಜೋಗಯ್ಯ' ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಶಿವಣ್ಣ ಅವರನ್ನು ಪತ್ರಕರ್ತರು ಪ್ರಶ್ನಿಸಿದಾಗ ಅವರು ಯಾವುದೇ ಮುಚ್ಚುಮರೆಯಿಲ್ಲದೇ ಎಲ್ಲವನ್ನೂ ಬಹಿರಂಗಪಡಿಸಿದರು.

ಆದದ್ದು ಇಷ್ಟೇ:


ಇತ್ತೀಚೆಗೆ ಕಾರ್ಮಿಕರ ಒಕ್ಕೂಟದವರು ಅವರನ್ನು ಸನ್ಮಾನಿಸಿ, ದಂಪತಿಗಳನ್ನು ತೆರೆದ ಜೀಪ್‌ನಲ್ಲಿ ಮೆರವಣಿಗೆ ಮಾಡುತ್ತಿದ್ದಾಗ ಒಂದು ಸ್ವಾಗತ ಕಮಾನು ಕಳಚಿ ಶಿವಣ್ಣನ ಮೇಲೆ ಬಿತ್ತು. ಅದೃಷ್ಟವಶಾತ್ ಅಂದು ಶಿವಣ್ಣ ದಂಪತಿಗಳು ಅಪಾಯದಿಂದ ಕೂದಲೆಳೆ ಅಂತರದಲ್ಲಿ ಪಾರಾದರು. ಆದರೂ ಮುಂಜಾಗ್ರತೆ ವಹಿಸಿ ಆಸ್ಪತ್ರೆಯಲ್ಲಿ ಶಿವಣ್ಣ ತಲೆ ಸ್ಕ್ಯಾನಿಂಗ್ ಮಾಡಿಸಿಕೊಂಡರು.

ಆಗ ವೈದ್ಯರು ಕ್ಲೀನ್‌ಚಿಟ್ ನೀಡಿ ಯಾವುದೇ ತೊಂದರೆ ಇಲ್ಲ ಎಂದರಂತೆ. ಆದರೆ ಅದೇ ಸಂದರ್ಭದಲ್ಲಿ ಶಿವರಾಜ್‌ಕುಮಾರ್ ಅವರನ್ನು ಕಾಡುತ್ತಿದ್ದ ಮತ್ತೊಂದು ಅನಾರೋಗ್ಯವನ್ನು ವೈದ್ಯರು ಪತ್ತೆ ಹಚ್ಚಿದರಂತೆ. ಅದನ್ನು ಹೆಚ್ಚಿನ ಪರೀಕ್ಷೆಗಾಗಿ ಮುಂಬೈನಲ್ಲಿರುವ ಧೀರೂಭಾಯಿ ಅಂಬಾನಿ ಆಸ್ಪತ್ರೆಗೂ ಕಳಿಸಿದರಂತೆ. ಅಲ್ಲಿಯ ವೈದ್ಯರು ಕೂಡಾ ಅಂತಹ ಅಪಾಯವೇನೂ ಇಲ್ಲ, ಇದನ್ನು ಮೈನರ್ ಸರ್ಜರಿ ಅಥವಾ ಬರೀ ಔಷಧಿಯಿಂದಲೇ ಗುಣಪಡಿಸಬಹುದೆಂದು ಹೇಳಿದ್ದಾರಂತೆ. ಆದರೆ ಕುಟುಂಬದ ಕೆಲವು ಸದಸ್ಯರ ಒತ್ತಾಯದ ಮೇರೆಗೆ ಈ ಎಲ್ಲ ಮಾಹಿತಿಗಳನ್ನು ಪ್ಯಾರಿಸ್‌ನಲ್ಲಿರುವ ಒಬ್ಬ ನುರಿತ ವೈದ್ಯರಿಗೆ ರವಾನಿಸಿದ್ದಾರಂತೆ. ಪ್ಯಾರಿಸ್‌ನ ವೈದ್ಯರು ಒಂದು ವಾರದೊಳಗೆ ಇದಕ್ಕೆ ಸಂಬಂಧಪಟ್ಟಂತೆ ವರದಿಯನ್ನು ನೀಡಿದ ನಂತರವೇ ಮುಂದಿನ ಚಿಕಿತ್ಸೆ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಶಿವಣ್ಣ ಎಲ್ಲವನ್ನು ತಣ್ಣಗೆ ವಿವರಿಸಿದರು.

ಸ್ವತಃ ಶಿವಣ್ಣ ಹೇಳುವಂತೆ "ಇದೇನೂ ಅಂತಹ ಗಂಭೀರವಾದ ಕಾಯಿಲೆಯಲ್ಲ. ಈ ಹಿಂದೆ ಅಪ್ಪಾಜಿ ಕುದುರೆಯಿಂದ ಬಿದ್ದಾಗ ಅವರಿಗೂ ಕೂಡಾ ಇದೇ ತರದ ಸಮಸ್ಯೆ ಎದುರಾಗಿತ್ತು." ಇತ್ತೀಚೆಗೆ 'ಜೋಗಯ್ಯ' ಚಿತ್ರದ ಚಿತ್ರೀಕರಣ ಸಂದರ್ಭದಲ್ಲಿ ಶಿವಣ್ಣ ಕೂಡಾ ಕುದುರೆ ಸವಾರಿ ಮಾಡುವಾಗ ಆಯತಪ್ಪಿ ಕೆಳಗೆ ಬಿದ್ದಿದ್ದನ್ನು ಇಲ್ಲಿ ಸ್ಮರಿಸಬಹುದು.

ಅದೇನೇ ಇರಲಿ, ನೂರನೇ ಚಿತ್ರದ ಸಂಭ್ರಮದಲ್ಲಿರುವ ಶಿವಣ್ಣ ನೋವು ಮತ್ತು ನಲಿವನ್ನು ಏಕಕಾಲದಲ್ಲಿ ಏಕಪ್ರಕಾರವಾಗಿ ಸ್ವೀಕರಿಸುವ ಮುಖಾಂತರ ತನ್ನದೇ ಆದ ರೀತಿಯಲ್ಲಿ ಸೆಂಚುರಿ ಸಂಭ್ರಮವನ್ನು ಅನುಭವಿಸುತ್ತಿದ್ದಾರೆ.

-ಶೆಣೈ



## ಮಂಜಿನ ಹನಿಯೇ ಮರುಹುಟ್ಟು

ನೇರ ನಡೆ-ನುಡಿಯ ಕ್ರೇಜಿಸ್ಟಾರ್ ರವಿಚಂದ್ರನ್ ಮೊನ್ನೆ ಪತ್ರಕರ್ತರ ಕಿವಿಯಲ್ಲಿ ಗುಟ್ಟೊಂದನ್ನು ಹೇಳಿದರು. ಅದೇನೆಂದರೆ "ನಾನು ಈ ವರ್ಷ ಬರ್ತ್‌ಡೇ ಆಚರಿಸುವುದಿಲ್ಲ; ಅಭಿಮಾನಿಗಳು ಯಾರೂ ಮನೆಗೆ ಬರುವುದು ಬೇಡ, ನಾನು ಮನೆಯಲ್ಲಿರುವುದಿಲ್ಲ ಎಂದು ನಿಮ್ಮ ನಿಮ್ಮ ಪತ್ರಿಕೆಯಲ್ಲಿ ಬರೆದು ಸಹಾಯ ಮಾಡಿ" ಎಂದು ಅವರು ವಿನಂತಿಸಿಕೊಂಡರು.

ರವಿಚಂದ್ರನ್ ಎಂತಹ ಸಂಕಷ್ಟ ಪರಿಸ್ಥಿತಿಯಲ್ಲಿದ್ದರೂ ಯಾವತ್ತೂ ಪತ್ರಕರ್ತರ ಬಳಿ 'ಹೀಗೆ ಬರೆಯಿರಿ, ಹಾಗೆ ಬರೆಯಿರಿ' ಎಂದು ರಿಕ್ವೆಸ್ಟ್ ಮಾಡಿದವರೇ ಅಲ್ಲ! ಅದೇರೀತಿ ಅವರ ಬಗ್ಗೆ ಚೆನ್ನಾಗಿ ಬರೆದಾಗ ಪತ್ರಕರ್ತರನ್ನು ಮೆಚ್ಚುವ ಅಥವಾ ಕೆಟ್ಟದಾಗಿ ಬರೆದಾಗ ಪ್ರೆಸ್‌ನವರನ್ನು ಟೀಕಿಸುವ ಜಾಯಮಾನ ಕೂಡ ಅವರದ್ದಲ್ಲ. ಅಂತಹ ಕ್ರೇಜಿಸ್ಟಾರ್ ಈ ಬಾರಿ ಬರ್ತ್‌ಡೇ ಆಚರಿಸುವುದಿಲ್ಲ ಅಂತ ಬರೆಯಿರಿ ಎಂದು ಮನವಿ ಮಾಡಿದಾಗ ಎಲ್ಲರಿಗೂ ಆಶ್ಚರ್ಯವಾಯಿತು.

ಆ ನಂತರ ಅವರೇ ಮಾತು ಮುಂದುವರೆಸಿ "ನನ್ನ 'ಮಂಜಿನ ಹನಿ' ಚಿತ್ರ ಯಾವಾಗ ಬಿಡುಗಡೆಯಾಗುತ್ತದೋ ಅವತ್ತೇ ನನ್ನ ಬರ್ತ್‌ಡೇ" ಎಂದು ಹಾಸ್ಯ ಚಟಾಕಿ ಹಾರಿಸಿದರು. ಇದರರ್ಥ ಇಷ್ಟೇ: ಕಳೆದೆರಡು ಮೂರು ವರ್ಷಗಳಿಂದ ಗೆಲುವಿನ ರುಚಿಯನ್ನೇ ಕಾಣದ ಕ್ರೇಜಿಸ್ಟಾರ್ ಬರ್ತ್‌ಡೇ ಆಚರಿಸುವ ಮೂಡ್‌ನಲ್ಲಿಲ್ಲ.

ಒಬ್ಬ ನಟನಿಗೆ ಗೆಲುವು-ಯಶಸ್ಸು ಎಷ್ಟು ಮುಖ್ಯ ಎಂಬುದನ್ನು ಇದು ತೋರಿಸುತ್ತದೆ. ಈ ಹಿಂದೆಲ್ಲ ಸೋಲುಗೆಲುವಿನ ಬಗ್ಗೆ ಎಂದೂ ತಲೆಕೆಡಿಸಿಕೊಳ್ಳದ ರವಿಚಂದ್ರನ್ ಈಗ ಸೋಲಿನ ಹ್ಯಾಂಗೋವರ್‌ನಲ್ಲಿದ್ದಾರೆ ಎಂದೆನಿಸಿತು. ಅವರು ಆದಷ್ಟು ಬೇಗ ಅದರಿಂದ ಹೊರಬರುವಂತಾಗಲಿ.



## ಅಮೂಲ್ಯ ಮನಸಾಲಜಿ

ಅಮೂಲ್ಯ ಬರೀ ರಜೆ ದಿನಗಳಲ್ಲಿ ಮಾತ್ರ ಸಿನಿಮಾಗಳಲ್ಲಿ ನಟಿಸುವುದರಿಂದ ಆಕೆಗೀಗ 'ಹಾಲಿಡೇ ಹೀರೋಯಿನ್' ಎಂಬ ಬಿರುದು ಪ್ರಾಪ್ತವಾಗಿದೆ. ಮೊನ್ನೆತಾನೆ ಪಿಯುಸಿ ಪರೀಕ್ಷೆಯಲ್ಲಿ ಭರ್ಜರಿ ಮಾರ್ಕು ತೆಗೆದು ಪಾಸಾಗಿರುವ ಅಮೂಲ್ಯ ಅಭಿನಯದ ಚಿತ್ರ 'ಮನಸಾಲಜಿ' ಜೂನ್‌ನಲ್ಲಿ ಬಿಡುಗಡೆಯಾಗಲಿದೆ. ಬಾಲನಟಿಯಾಗಿ ಚಿತ್ರರಂಗಕ್ಕೆ ಪ್ರವೇಶ ಪಡೆದಿದ್ದ ಅಮೂಲ್ಯ ಪೂರ್ಣ ಪ್ರಮಾಣದ ನಾಯಕಿಯಾಗಿ ಐದು ಸಿನಿಮಾಗಳಲ್ಲಿ ನಟಿಸಿದ್ದಾರೆ. 'ಮನಸಾಲಜಿ' ಚಿತ್ರವನ್ನು ಈಕೆಯ ಅಣ್ಣ ದೀಪಕ್ ಅರಸ್ ನಿರ್ಮಿಸಿ ನಿರ್ದೇಶಿಸಿದ್ದಾರೆ.

ಕಾರ್ಡಿಯಾಲಜಿ, ಸೈಕಾಲಜಿ, ನ್ಯೂರಾಲಜಿ ಇವೆಲ್ಲ ರೋಗ ನಿವಾರಕ ವಿದ್ಯೆಯ ಹೆಸರುಗಳು. ಆದರೆ 'ಮನಸಾಲಜಿ' ಯುವಕರ ಮನಸ್ಸಿನ ಏರಿಳಿತ, ನೋವು, ನಲಿವುಗಳನ್ನು ಅಳತೆ ಮಾಡುವ ವಿದ್ಯೆಯಂತೆ!

ಪಬ್ಲಿಕ್ ಕಾಯಿನ್ ಬೂತ್‌ನಿಂದ ತನ್ನ ಪ್ರೇಮಿಗೆ ಕರೆ ಮಾಡಲು ಒಂದು ರೂಪಾಯಿ ನಾಣ್ಯವೂ ಇಲ್ಲದೆ ಪರದಾಡುತ್ತಿದ್ದ ಯುವಕನೊಬ್ಬನ ಮಾಮೂಲಿ ಘಟನೆ 'ಮನಸಾಲಜಿ' ಚಿತ್ರಕ್ಕೆ ಸ್ಫೂರ್ತಿಯಂತೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44